Swabhimani Sahakari

Pages - 32, ₹12

Volume -14

Issue - 09

September - 2017

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ



**ಶ್ರೀ ರಮೇಶ್ ಲಕ್ಷ್ಮಣ ಜಾರಕಿಹೊಳಿ**
ರಾಜ್ಯದ ನೂತನ ಸಹಕಾರ ಸಚಿವರು





**ಶ್ರೀ ಅನಂತಕುಮಾರ್ ಹೆಗಡೆ**
ಕೇಂದ್ರ ಸರ್ಕಾರದ ನೂತನ ರಾಜ್ಯ ಸಚಿವರು



**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಅಧ್ಯಕ್ಷರು



**ಶ್ರೀ ಜಗದೀಶ ಕವಟಗಿಮಠ**
ಉಪಾಧ್ಯಕ್ಷರು



**ಶ್ರೀ ಶರಣಗೌಡ ಜಿ. ಪಾಟೀಲ್**
ವ್ಯವಸ್ಥಾಪಕ ನಿರ್ದೇಶಕರು

ಮತ್ತು ಆಡಳಿತ ಮಂಡಲಿ ಸದಸ್ಯರ ಪರವಾಗಿ

ಬಕ್ರೀದ್, ಶಿಕ್ಷಕರ ದಿನ ಹಾಗೂ ದಸರಾ ಗೊಂಬೆಗಳ ಹಬ್ಬಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಶುಭಾಷಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 4104 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1064



> ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯದ ಪುನರ್ ಸ್ಥಾಪನೆಯ ಉದ್ದೇಶದಿಂದ, ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ, ಜಿಎಸ್‌ಟಿ ಅನ್ವಯಿಸಿಕೊಳ್ಳುವ ಬಗ್ಗೆ ಸೂಕ್ತ ಯೋಜನೆ ರೂಪಿಸಲು ದಿನಾಂಕ 06.09.2017ರಂದು ಬೆಂಗಳೂರಿನಲ್ಲಿ ಸೌಹಾರ್ದ ಸಹಕಾರಿಗಳ, ಲೆಕ್ಕಪರಿಶೋಧಕರ, ವಕೀಲರುಗಳ ಸಭೆ ಕರೆಯಲಾಗಿದೆ. ಸಹಕಾರಿಗಳ ಸಮಸ್ಯೆಗಳಗೆ ಶೀಘ್ರವಾಗಿ ಸ್ಪಂದಿಸಲು ಸಂಯುಕ್ತ ಸಹಕಾರಿ ಸದಾ ಸಿದ್ಧವಿರುತ್ತದೆ, ತಮ್ಮೆಲ್ಲರ ಸಹಕಾರ ಅಪೇಕ್ಷಿಸಿದೆ.

# ನೂತನ ಆಡಳಿತ ಮಂಡಲಿ - ಆದ್ಯತೆಗಳು

ರಾಜ್ಯದ ಸೌಹಾರ್ದ ಸಹಕಾರಿಗಳಿಗೆಲ್ಲಾ ನಾಡಹಬ್ಬ ದಸರಾ "ವಿಜಯ ದಶಮಿಯ" ಶುಭಾಷಯಗಳು.

ದಿನಾಂಕ 28-07-2017ರಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಚುನಾವಣೆ ನಡೆದಿದೆ. ನೂತನ ಆಡಳಿತ ಮಂಡಲಿ ರಚನೆಯಾಗಿದೆ. ದಿನಾಂಕ 14-08-2017ರಂದು ಪದಾಧಿಕಾರಿಗಳ ಚುನಾವಣೆ ನಡೆದು ಅವಿರೋಧವಾಗಿ ನನ್ನನ್ನು (ಬಿ.ಹೆಚ್.ಕೃಷ್ಣಾರೆಡ್ಡಿ) ಅಧ್ಯಕ್ಷನನ್ನಾಗಿ ಹಾಗೂ ಶ್ರೀ ಜಗದೀಶ ಕವಟಗಿಮಠ ಇವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಆಡಳಿತ ಮಂಡಲಿಯ ಎಲ್ಲಾ ನಿರ್ದೇಶಕರಿಗೆ ಹಾಗೂ ಈ ಕಾರ್ಯದಲ್ಲಿ ನೆರವಾದ ಎಲ್ಲಾ ಸಹಕಾರಿ ಮುಖಂಡರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿ ವೇಗವಾಗಿ ಬೆಳೆಯುತ್ತಿದೆ. ಸರಕಾರದ, ಸಹಕಾರಿಗಳ ಹಾಗೂ ಸಾರ್ವಜನಿಕರ ಗಮನ ಸೆಳೆದಿದೆ. ಸಹಕಾರ ಚಳುವಳಿಗೆ ಒಂದು ರೀತಿಯ ಹೊಸ ಚೈತನ್ಯವನ್ನು ನೀಡಿದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಸಮಾಧಾನಕರವಾಗಿದೆಯಾದರೂ ಈ ಕ್ಷೇತ್ರದ ಅಭಿವೃದ್ಧಿಗೆ ಆಗಬೇಕಾಗಿರುವ ಅನೇಕ ಕೆಲಸಗಳು ಬಾಕಿ ಇವೆ. ಅನೇಕ ಸವಾಲುಗಳಿವೆ.

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಕ್ರಿಯಾ ಯೋಜನೆಯನ್ನು ಪತ್ರ ಮುಖೇನ ಕಳುಹಿಸಲಾಗಿದೆ. ಸೌಹಾರ್ದ ಸಹಕಾರಿಗಳು ಈ ಕ್ರಿಯಾ ಯೋಜನೆಯ ಅನುಷ್ಠಾನಕ್ಕೆ ತಮ್ಮೆಲ್ಲರ ಸಲಹೆ, ಸಹಕಾರ ಹಾಗೂ ಮಾರ್ಗದರ್ಶನದ ಅಗತ್ಯವಿದೆ. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದಂದಿನಿಂದ (15 ವರ್ಷಗಳಲ್ಲಿ) ಇದುವರೆಗೆ ಹಲವು ಬಾರಿ ತಿದ್ದುಪಡಿಗಳು ಆಗಿವೆ. ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲ ಆಶಯಕ್ಕೆ ಧಕ್ಕೆ ಬರುವ ಹಾಗೇ ತಿದ್ದುಪಡಿಗಳಾಗಿವೆ. ಸಹಕಾರಿಗಳ ಸ್ವಾಯತ್ತತೆಗೆ ಹಾಗೂ ಮನಸ್ಸಿಗೆ ನೋವು ಉಂಟಾಗಿದೆ. ಸಹಕಾರಿ ಸಂಸ್ಥೆಗಳ ಕಾರ್ಯಾಚರಣೆಯಲ್ಲಿ ಹಲವಾರು ತೊಡಕುಗಳು ಆಗುತ್ತಿವೆ. ಇವುಗಳ ನಿವಾರಣೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯ ಪುನರ್‌ಸ್ಥಾಪನೆ ಮಾಡುವುದು ನಮ್ಮ ಆದ್ಯತಾ ವಲಯವಾಗಿದೆ.

ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯದ ಪುನರ್ ಸ್ಥಾಪನೆಯ ಉದ್ದೇಶದಿಂದ, ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ, ಜಿಎಸ್‌ಟಿ ಅನ್ವಯಿಸಿಕೊಳ್ಳುವ ಬಗ್ಗೆ ಸೂಕ್ತ ಯೋಜನೆ ರೂಪಿಸಲು ದಿನಾಂಕ 06.09.2017ರಂದು ಬೆಂಗಳೂರಿನಲ್ಲಿ ಸೌಹಾರ್ದ ಸಹಕಾರಿಗಳ, ಲೆಕ್ಕಪರಿಶೋಧಕರ, ವಕೀಲರುಗಳ ಸಭೆ ಕರೆಯಲಾಗಿದೆ. ಸಹಕಾರಿಗಳ ಸಮಸ್ಯೆಗಳಿಗೆ ಶೀಘ್ರವಾಗಿ ಸ್ಪಂದಿಸಲು ಸಂಯುಕ್ತ ಸಹಕಾರಿ ಸದಾ ಸಿದ್ಧವಿರುತ್ತದೆ, ತಮ್ಮೆಲ್ಲರ ಸಹಕಾರ ಅಪೇಕ್ಷಿಸಿದೆ.

ಸಂಯುಕ್ತ ಸಹಕಾರಿಗೆ ಹಾಗೂ ವಿಭಾಗೀಯ ಕಛೇರಿಗಳಿಗೆ ಅಗತ್ಯವಾದ ಸ್ವಂತ ಕಟ್ಟಡಗಳ ವ್ಯವಸ್ಥೆ, ಪ್ರತಿ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಜೊತೆಗೆ ಸಂಪರ್ಕ ಕಲ್ಪಿಸುವ ವ್ಯವಸ್ಥೆ, ಸರಕಾರದ ಹಾಗೂ ಸಹಕಾರಿಗಳ ಮನಸ್ಸಿನಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಕಾರಾತ್ಮಕ, ಉತ್ತಮ ಭಾವನೆಗಳನ್ನು ಬೆಳೆಸುವುದು, ಸರಕಾರ ಹಾಗೂ ಸಹಕಾರಿಗಳೊಡನೆ ನಿರಂತರ ಉತ್ತಮ ಬಾಂಧವ್ಯವನ್ನು ಹೊಂದುವುದು, ಇದಕ್ಕಾಗಿ ನಿರಂತರ ಕಾರ್ಯನಿರ್ವಹಿಸುವುದು, ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಸಮಸ್ಯೆಗಳಿಗೆ ತತ್‌ಕ್ಷಣ ಸ್ಪಂದಿಸುವುದು, ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯಲ್ಲಿ ವೇಗ ಸಾಧಿಸುವುದು, ಅದಕ್ಕಾಗಿ ಅಧಿಕಾರ ವಿಕೇಂದ್ರೀಕರಣದತ್ತ ಹೆಜ್ಜೆ ಹಾಕುವುದು, ವಿಭಾಗೀಯ ಕಛೇರಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವುದು, ಪ್ರತಿ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳಿಗೆ ಬೇಕಿರುವ ಅಗತ್ಯ ಮಾರ್ಗದರ್ಶನ, ಸಲಹೆ, ಶಿಕ್ಷಣ, ತರಬೇತಿಗಳನ್ನು ಒದಗಿಸುವುದು – ಈ ನಿಟ್ಟಿನಲ್ಲಿ ಕ್ರಮವಿಡಲಾಗುವುದು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯಾತ್ಮಕ ಬೆಳವಣಿಗೆಯ ಜೊತೆಗೆ ಗುಣಾತ್ಮಕ ಬೆಳವಣಿಗೆಯೂ ಸಹ ನೂತನ ಆಡಳಿತ ಮಂಡಲಿಯ ಆದ್ಯತಾ ವಲಯವಾಗಿದೆ. ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರ್ವಹಣೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ನಿರಂತರ ಮಾರ್ಗದರ್ಶನ ನೀಡಲು ಹಾಗೂ ಅಗತ್ಯ ಸಲಹೆಗಳನ್ನು ನೀಡುವುದು ಆದ್ಯತಾ ವಲಯದಲ್ಲಿದೆ. ಚುನಾವಣಾ ಕಾರಣದಿಂದ ನಿಧಾನವಾಗಿದ್ದ ಚಟುವಟಿಕೆಗಳಿಗೆ ವೇಗ ನೀಡುವ ನಿಟ್ಟಿನಲ್ಲಿ ನಡಿಗೆಯಿಂದ ಓಟದತ್ತ ಬದಲಾಗುತ್ತಿದ್ದೇವೆ, ಇದರಲ್ಲಿ ಎಡವದಂತೆ, ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸಲಹೆ, ಸಹಕಾರ ಹಾಗೂ ಮಾರ್ಗದರ್ಶನ ನಿರಂತರವಾಗಿ ನಮ್ಮಗಳ ಮೇಲೆ ಸದಾ ಇರಲಿ ಎಂದು ಅಪೇಕ್ಷಿಸುತ್ತೇನೆ.

▶▶ **ಬಿ.ಹೆಚ್. ಕೃಷ್ಣಾರೆಡ್ಡಿ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ . . .

ರಾಜ್ಯದ ಸೌಹಾರ್ದ ಸಹಕಾರಿ ನೇತಾರ ಶ್ರೀ ಅನಂತಕುಮಾರ ಹೆಗಡೆಯವರಿಗೆ ಕೇಂದ್ರ ಸಚಿವ ಪಟ್ಟ ........ 5

ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆ ........ 6

ಬೆಳಗಾವಿ ವಿಭಾಗಿಯ ಕಛೇರಿಗೆ ಮಾನ್ಯ ಉಪಾಧ್ಯಕ್ಷ ಶ್ರೀ ಜಗದೀಶ್ ಕವಟಗಿಮಠ ಭೇಟಿ ........ 7

ಕೃತಜ್ಞತೆ ಹಾಗೂ ಅಭಿನಂದನಾ ಸಮಾರಂಭ ಮತ್ತು ಸೌಹಾರ್ದ ಸಹಕಾರಿಗಳ ಭೇಟಿ ........ 8

ಸಂಯುಕ್ತ ಸಹಕಾರಿಯ ನೂತನ ನಿರ್ದೇಶಕರುಗಳ ಪರಿಚಯ ಭಾಗ - 2 ........ 9

ಗಣ್ಯರ ಭೇಟಿ ........ 13

ಸಂಯುಕ್ತ ಸಹಕಾರಿಯ ಮುಂಬರುವ ಕಾರ್ಯಕ್ರಮಗಳು ........ 19

ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯ ವರದಿಗಳು ........ 20

ನಿಮ್ಮ ಪ್ರಶ್ನೆ - ನಮ್ಮ ಉತ್ತರ ........ 23

ಅಂತರರಾಷ್ಟ್ರೀಯ ಗಮನ ಸೆಳೆದಿರುವ ನಾಡಹಬ್ಬ ದಸರಾ ........ 24

ಆರ್‌ಬಿಐ ನ್ಯೂಸ್ ........ 26

# ಸಂಪಾದಕೀಯ

## ಸಂಯುಕ್ತ ಸಹಕಾರಿಯ ಪ್ರಗತಿಪರ ಹೆಜ್ಜೆ : ಆಡಳಿತ ವಿಕೇಂದ್ರೀಕರಣ

ಸಂಯುಕ್ತ ಸಹಕಾರಿಗೆ ನೂತನ ಆಡಳಿತ ಮಂಡಲಿ ಅಸ್ತಿತ್ವಕ್ಕೆ ಬಂದಿದೆ. ಅಧ್ಯಕ್ಷರಾಗಿ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಜಗದೀಶ ಕವಟಗಿಮಠರವರ ನೇತೃತ್ವದಲ್ಲಿ ಪ್ರಥಮ ಆಡಳಿತ ಮಂಡಲಿ ಸಭೆಯಲ್ಲಿ ತೆಗೆದುಕೊಂಡ ಹಲವು ಪ್ರಗತಿಪರ ನಿರ್ಧಾರಗಳಲ್ಲಿ ಪ್ರಮುಖವಾಗಿ ಸಂಯುಕ್ತ ಸಹಕಾರಿಯ ಆಡಳಿತ ವ್ಯವಸ್ಥೆಯನ್ನು ವಿಕೇಂದ್ರೀಕರಿಸುವ ನಿರ್ಣಯ ಸ್ವಾಗತಾರ್ಹವಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ತೃಪ್ತಿ ಇದೆಯಾದರೂ ಆಡಳಿತದ ಹಂತದಲ್ಲಿ ಹಲವಾರು ವಿಷಯಗಳ ಶೀಘ್ರ ಇತ್ಯರ್ಥದ ಆದ್ಯತೆಗಳನ್ನು ಗಮನಿಸಿ ಆಡಳಿತ ಮಂಡಲಿಯವರು ಈ ನಿರ್ಣಯ ತೆಗೆದುಕೊಂಡಿದ್ದಾರೆ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಗುಣಮಟ್ಟ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗ ಎರಡೂ ಏಕಕಾಲಕ್ಕೆ ಒಂದು ನಾಣ್ಯದ ಎರಡು ಮುಖಗಳಂತೆ ಕಾರ್ಯನಿರ್ವಹಿಸುವುದಕ್ಕಾಗಿ ಚಾಲನೆ ದೊರೆತಂತಾಗಿದೆ.

ಆಡಳಿತ ವಿಕೇಂದ್ರೀಕರಣದ ಪ್ರಥಮ ಹೆಜ್ಜೆಯಾಗಿ ವಿಭಾಗೀಯ ನಿರ್ದೇಶಕರ ಸಮಿತಿ, ವಿಭಾಗದ ಎಲ್ಲಾ ಜಿಲ್ಲೆಗಳನ್ನು ಪ್ರತಿನಿಧಿಸುವ ವಿಭಾಗೀಯ ಕಾರ್ಯಕಾರಿಣಿಗಳನ್ನು ರಚಿಸುವುದು, ಚಳುವಳಿಗೆ ಹಾನಿಯುಂಟು ಮಾಡುವ ಸೌಹಾರ್ದ ಸಹಕಾರಿಗಳನ್ನು ಗುರುತಿಸಿ, ಅವುಗಳ ಕಾರ್ಯಾಚರಣೆಯಲ್ಲಿ ಸಕಾರಾತ್ಮಕ ಬೆಳವಣಿಗೆಗಳನ್ನು ರೂಢಿಸುವುದು, ಸಹಕಾರಿಗಳ ಲೆಕ್ಕಪರಿಶೋಧನೆ, ನಡೆಯದಿರುವ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸದಿರುವ, ಚುನಾವಣೆಗಳು ನಡೆಯದಿರುವ ಸೌಹಾರ್ದ ಸಹಕಾರಿಗಳನ್ನು ಗುರುತಿಸಿ ಕ್ರಮವಿಡುವುದು ಹಾಗೂ ನಿರಂತರವಾಗಿ ಪರಿವೀಕ್ಷಣೆ ಕಾರ್ಯಗಳನ್ನು ನಡೆಸಲು ನಿರಂತರ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಕಾರ್ಯಕ್ರಮಗಳನ್ನು ಜರುಗಿಸುವಂತಾಗಬೇಕು.

ಇವುಗಳ ಜೊತೆಗೆ ಎಲ್ಲಾ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿ ಅಭಿವೃದ್ಧಿ ಅಧಿಕಾರಿಗಳನ್ನು ನೇಮಕ ಮಾಡುವುದು ಮತ್ತು ಪ್ರತಿ ಜಿಲ್ಲೆಯಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿಯ ಸಂಪರ್ಕ ಕಛೇರಿಯನ್ನು ಪ್ರಾರಂಭಿಸಿ, ಸಂಯುಕ್ತ ಸಹಕಾರಿ ಹಾಗೂ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಮಧ್ಯೆ ನಿರಂತರ ಸಂಪರ್ಕ ವ್ಯವಸ್ಥೆ ಈ ಕ್ರಮಗಳು ಜಾರಿಯಾದಾಗ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಗುಣಾತ್ಮಕವಾಗಿ ಹಾಗೂ ಸಂಖ್ಯಾತ್ಮಕವಾಗಿಯೂ ಬೆಳೆಯಲು ಪೂರಕವಾಗುತ್ತದೆ.



# ಜ್ಞಾನ ಜ್ಯೋತಿ

ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

## ಒಲವೇ ಜೀವನ

ದಾಸಿಮಾರ್ಯರು 12ನೇ ಶತಮಾನದ ಶರಣರು, ಮಹಾನುಭಾವಿಗಳು. ಬಟ್ಟೆ ನೇಯುವುದು ಅವರ ಕಾಯಕ. ನೇಯುವುದೂ ಒಂದು ಕಲೆಯಾಗಿದೆ. ಹಾಸು, ಹೊಕ್ಕು ಅಥವಾ ಉದ್ದ-ಅಡ್ಡ ಎಳೆಗಳು ಚೆನ್ನಾಗಿದ್ದರೆ ಮಾತ್ರ ಬಟ್ಟೆಯು ಸುಂದರವಾಗಿರುತ್ತದೆ. ಅವೆರಡರಲ್ಲಿ ಒಂದಿಲ್ಲದಿದ್ದರೂ ಬಟ್ಟೆಯು ಸಿದ್ಧವಾಗುವುದಿಲ್ಲ. ಉದ್ದ, ಅಡ್ಡ ಎಳೆಗಳಲ್ಲಿ ಯಾವುದಾದರೂ ಒಂದು ಎಳೆ ಹರಿದು ಹೋದರೆ ಅಥವಾ ಗಂಟು ಗಂಟಾದರೆ ಬಟ್ಟೆ ಆಗುವುದಿಲ್ಲ ಮತ್ತು ಅದು ತನ್ನ ಬೆಲೆಯನ್ನು, ಚೆಲುವನ್ನು ಕಳೆದುಕೊಳ್ಳುತ್ತದೆ. ಉದ್ದ-ಅಡ್ಡ ಎಳೆಗಳು ಹರಿಯದಂತೆ ಹಾಳಾಗದಂತೆ ಬಟ್ಟೆಯನ್ನು ಏಕಾಗ್ರತೆಯಿಂದ ನೇಯುವುದೆಂದರೆ ಅದೊಂದು ದೊಡ್ಡ ಸಾಹಸ, ತಪಸ್ಸೇ ಸರಿ. ಅದರಿಂದಾಗಿಯೇ ಒಂದು ಸುಂದರವಾದ ಬಟ್ಟೆಯು ಸಿದ್ಧವಾಗಿ ಎಲ್ಲರ ಪ್ರೀತಿಗೆ ಪಾತ್ರವಾಗುತ್ತದೆ.

ನಮ್ಮ ಬಾಳ ಬಟ್ಟೆಯಲ್ಲಿಯೂ ಹಾಸು – ಹೊಕ್ಕುಗಳಿವೆ. ನಾವು ದಿನ ನಿತ್ಯ ಮಾಡುವ ಕಾರ್ಯಗಳೇ ಹಾಸು ಅಥವಾ ಉದ್ದನೇ ಎಳೆ, ನಮ್ಮ ಅಂತರಂಗದೊಳಗಿನ ಭಾವನೆಗಳೇ ಹೊಕ್ಕು ಅಥವಾ ಅಡ್ಡ ಎಳೆಗಳು. ಭಾವನಾ ರಹಿತ ಕಾರ್ಯಗಳು ಯಾಂತ್ರಿಕವಾಗುತ್ತವೆ. ಕಾರ್ಯರಹಿತ ಭಾವನೆಗಳು ನಿರುಪಯುಕ್ತವಾಗುತ್ತವೆ. ಕ್ರಿಯೆ ಮತ್ತು ಭಾವ ಎರಡೂ ಕೂಡಿಯೇ ಸಾಗಬೇಕು. ನಾವು ಮಾಡುವ ಎಲ್ಲಾ ಕಾರ್ಯಗಳಲ್ಲಿ ಪರಿಶುದ್ಧ ಭಾವನೆಯು ಪ್ರವೇಶವಾಗಬೇಕು. ಆಗ ಸುಂದರವಾದ ಬಾಳಬಟ್ಟೆಯು ಸಿದ್ಧವಾಗುತ್ತದೆ. ದೇವ-ಮಾನವರಿಗೆಲ್ಲ ಪ್ರಿಯವಾಗುತ್ತದೆ. ಇದನ್ನೇ ದಿವ್ಯಾಂಬರವೆಂದು ಕರೆಯುತ್ತಾರೆ.

ಒಂದು ಸಸಿಗೆ ನೀರು ಹನಿಸುವುದೇ ಇರಲಿ, ದೇವರ ಮುಂದೆ ದೀಪ ಬೆಳಗಿಸುವುದೇ ಇರಲಿ, ಅದನ್ನೇ ಒಲವಿನಿಂದ, ಪ್ರೀತಿಯಿಂದ ಮಾಡಿದರೆ ಅದರಿಂದ ದೊರೆಯುವ ಆನಂದ ಅವರ್ಣನೀಯವಾದುದು. ಒಂದು ವೇಳೆ ಅದೇ ಕಾರ್ಯಗಳನ್ನು ಯಾಂತ್ರಿಕವಾಗಿ ಅಥವಾ ದುರಾಶೆಯಿಂದ, ದುರುದ್ದೇಶದಿಂದ ಮಾಡಿದರೆ ನಮ್ಮ ಬಾಳಬಟ್ಟೆ ಹಾಳಾದಂತೆಯೇ. ಅದು ಯಾರಿಗೂ ಇಷ್ಟವಾಗುವುದಿಲ್ಲ. ಸಂತಸವನ್ನು ನೀಡುವುದಿಲ್ಲ. ನಮ್ಮ ಬಾಳಬಟ್ಟೆಯು ಸರ್ವಜನಪ್ರಿಯವಾಗಬೇಕು. ದೇವನಿಗೆ ಸಮರ್ಪಿತವಾಗಬೇಕು. ಅದಕ್ಕೆ ಬಾಳ – ಬಟ್ಟೆಯ ಹಾಸು – ಹೊಕ್ಕುಗಳು ಎಂದರೆ ಕ್ರಿಯೆ ಮತ್ತು ಭಾವನೆಗಳು ಪರಿಶುದ್ಧವಾಗಿರಬೇಕಾಗುತ್ತದೆ. ನಮ್ಮ ಅಂತರಂಗ ಅಥವಾ ಹೃದಯವು ಪರಿಶುದ್ಧವಾದರೆ ಮಾತ್ರ ಅದು ಸಾಧ್ಯ. ಪರಮಸತ್ಯ ಪರಮಾತ್ಮನನ್ನು ಅರಿತಾಗ ಮಾತ್ರ ನಮ್ಮ ಹೃದಯವು ಕ್ಷಣ ಮಾತ್ರದಲ್ಲಿ ಶುದ್ಧವಾಗುತ್ತದೆ. ದಾಸಿಮಾರ್ಯರು ತಮ್ಮ ವಚನದಲ್ಲಿ ಆತ್ಮನ ಸ್ವರೂಪವನ್ನು ತುಂಬಾ ಸೊಗಸಾಗಿ ಚಿತ್ರಿಸಿದ್ದಾರೆ.

**ಮಣಿಗಳ ಸೂತ್ರದಂತೆ ತ್ರಿಣಯನ ನೀನೆಪ್ಪೆಯಯ್ಯಾ**
**ಎಣಿಸುವಡೆ ತನುಭಿನ್ನ, ಆತ್ಮನೊಬ್ಬನೆ**
**ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು**
**ಮಣಿಯುತಿಪ್ಪೆನಯ್ಯಾ ರಾಮನಾಥಾ.**

ಮುತ್ತಿನ ಹಾರದಲ್ಲಿರುವ ಮಣಿಗಳು ಬೇರೆ ಬೇರೆಯಾದರೂ ಅವುಗಳಲ್ಲಿರುವ ದಾರ ಮಾತ್ರ ಒಂದೇ. ಹಾಗೇ ಈ ಪ್ರಪಂಚದಲ್ಲಿ ಇರುವ ಸಕಲ ಜೀವರಾಶಿಗಳ ದೇಹಗಳು ಬೇರೆ ಬೇರೆಯಾದರೂ ಅವುಗಳ ಅಂತರಂಗದಲ್ಲಿರುವ ಪರಶಿವ ಪರಮಾತ್ಮನು ಮಾತ್ರ ಒಬ್ಬನೇ!

**ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮಿ ।**
**ಸಂಪಶ್ಯನ್ ಬ್ರಹ್ಮಪರಮಂ ಯಾತಿ ನಾನ್ಯೇನ ಹೇತುನಾ । ಕೈ.ಉ.10**

ಎಲ್ಲಾ ಜೀವರಾಶಿಗಳಲ್ಲಿ ತನ್ನಾತ್ಮವನ್ನು, ತನ್ನಾತ್ಮದಲ್ಲಿ ಎಲ್ಲಾ ಜೀವರಾಶಿಗಳನ್ನು ಯಾರು ಕಾಣುತ್ತಾರೋ ಅವರು ಪರಮಸತ್ಯ ಪರಮಾತ್ಮನಲ್ಲಿ ಒಂದಾಗಿ ಪರಮಾನಂದವನ್ನು ಪಡೆಯುತ್ತಾರೆ. ಇದುವೇ ಜೀವನ್ಮುಕ್ತಿ. ಇದು ಬೇರೆ ಇನ್ನಾವ ಮಾರ್ಗದಿಂದಲೂ ಸಾಧ್ಯವಾಗದು. ಸರ್ವರಲ್ಲಿಯೂ ಆ ಪರಮಾತ್ಮನ್ನು ಕಾಣುವುದಕ್ಕೆ ಆತ್ಮದೃಷ್ಟಿ ಅಥವಾ ದೇವದೃಷ್ಟಿ ಎಂದು ಕರೆಯುತಾರೆ. ಇದು ಅಷ್ಟು ಸುಲಭವಾಗಿ ಬರುವಂತದ್ದಲ್ಲ.

**ಆಧಾರ : ಕೈವಲ್ಯ ಕುಸುಮ**

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 1973 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 921 ಪ್ರಕರಣಗಳು ಸೇರಿದಂತೆ ಒಟ್ಟು 2894 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2132 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 381 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 12 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 793 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 08 ಪ್ರಕರಣಗಳು ಇತ್ಯರ್ಥಗೊಂಡಿವೆ.

## ರಾಜ್ಯದ ಸೌಹಾರ್ದ ಸಹಕಾರಿ ನೇತಾರ ಶ್ರೀ ಅನಂತಕುಮಾರ ಹೆಗಡೆಯವರಿಗೆ ಕೇಂದ್ರ ಸಚಿವ ಪಟ್ಟ



**ನವದೆಹಲಿ :** ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟಕ್ಕೆ ಒಂಬತ್ತು ಮಂದಿ ಹೊಸ ಸಚಿವರು ಸೇರ್ಪಡೆಗೊಂಡಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾನ್ಯ ರಾಷ್ಟ್ರಪತಿಗಳಾದ ಶ್ರೀ ರಾಮನಾಥ ಕೋವಿಂದ್‌ರವರು ನೂತನ ಸಚಿವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಉತ್ತರ ಕನ್ನಡ ಲೋಕಸಭೆ ಕ್ಷೇತ್ರದ ಸಂಸದ ಶ್ರೀ ಅನಂತಕುಮಾರ್ ಹೆಗಡೆ ಸೇರಿದಂತೆ ಒಂಬತ್ತು ಜನರಿಗೆ ಕೇಂದ್ರ ಸಂಪುಟದಲ್ಲಿ ರಾಜ್ಯ ಸಚಿವ ಖಾತೆ ದೊರೆತಿದೆ. ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್, ಶ್ರೀ ಧರ್ಮೇಂದ್ರ ಪ್ರಧಾನ್, ಶ್ರೀ ಪಿಯೂಷ್ ಗೋಯಲ್ ಹಾಗೂ ಶ್ರೀ ಮುಖ್ತರ್ ಅಬ್ಬಾಸ್ ನಕ್ವಿ ಅವರುಗಳು ಕ್ಯಾಬಿನೆಟ್ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಪ್ರಧಾನಿ ಮೋದಿ ಹಾಗೂ ಹಲವು ಸಚಿವರು, ಸಂಸದರು ಸೇರಿದಂತೆ ಪ್ರಮುಖ ನಾಯಕರು ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ರಾಜ್ಯದ ಸೌಹಾರ್ದ ಸಹಕಾರಿ ಶ್ರೀ ಅನಂತ ಕುಮಾರ್ ಹೆಗಡೆ ಯವರು ಶಿರಸಿಯ ಕಬಂಬ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿದ್ದಾರೆ. ರಾಜ್ಯದ ಸಂಸದರು ಹಾಗೂ ಕಳೆದ 16 ವರ್ಷಗಳಿಂದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಶ್ರೀಯುತ ಅನಂತಕುಮಾರ್ ಹೆಗಡೆಯವರಿಗೆ ಕೇಂದ್ರ ಸಚಿವ ಸ್ಥಾನ ದೊರಕಿರುವುದು ರಾಜ್ಯ ಸೌಹಾರ್ದ ಸಹಕಾರಿಗಳಿಗೆ ಸಂತಸವನ್ನುಂಟುಮಾಡಿದೆ. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಲಿಯವರು ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

**ಕೇಂದ್ರ ಸಚಿವರಾಗಿ ನೇಮಕಗೊಂಡಿರುವ ರಾಜ್ಯದ ಸೌಹಾರ್ದ ಸಹಕಾರಿ ಶ್ರೀ ಅನಂತ ಕುಮಾರ್ ಹೆಗಡೆಯವರಿಗೆ ಹಾಗೂ ನೂತನ ಸಹಕಾರ ಸಚಿವರಾಗಿರುವ ಶ್ರೀ ರಮೇಶ್ ಜಾರಕಿಹೊಳಿಯವರಿಗೆ ಸಂಯುಕ್ತ ಸಹಕಾರಿಯ ಪರವಾಗಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು**



## ಶ್ರೀ ರಮೇಶ ಜಾರಕಿಹೊಳಿ ಅವರಿಗೆ ಸಹಕಾರ ಖಾತೆ

**ಬೆಂಗಳೂರು :** ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಖಾತೆಗಳನ್ನು ಮರು ಹಂಚಿಕೆ ಮಾಡಿದ್ದಾರೆ. ಸಾರಿಗೆ ಸಚಿವ ಶ್ರೀ ರಾಮಲಿಂಗಾರೆಡ್ಡಿ ಅವರಿಗೆ ಗೃಹ ಖಾತೆಯನ್ನು ನೀಡಲಾಗಿದ್ದು, ಶ್ರೀ ಎಚ್.ಎಂ. ರೇವಣ್ಣ ಅವರಿಗೆ ಸಾರಿಗೆ ಖಾತೆ, ಅಬಕಾರಿ ಖಾತೆಯನ್ನು ಶ್ರೀ ತಿಮ್ಮಾಪುರ ಅವರಿಗೆ ನೀಡಲಾಗಿದೆ. ಶ್ರೀಮತಿ ಎಂ.ಸಿ. ಮೋಹನ ಕುಮಾರಿ (ಗೀತಾ ಮಹದೇವ ಪ್ರಸಾದ್) ಅವರಿಗೆ ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ಖಾತೆ ನೀಡಲಾಗಿದೆ. ಸಣ್ಣ ಕೈಗಾರಿಕೆ ಖಾತೆ ಹೊಂದಿದ್ದ ಶ್ರೀ ರಮೇಶ ಜಾರಕಿಹೊಳಿ ಅವರಿಗೆ ಸಹಕಾರ ಖಾತೆ ನೀಡಲಾಗಿದೆ. ಕಾರ್ಮಿಕ ಸಚಿವ ಶ್ರೀ ಸಂತೋಷ್ ಲಾಡ್ ಅವರಿಗೆ ಕೌಶಲ್ಯ ಅಭಿವೃದ್ಧಿ ಹೊಣೆಯನ್ನೂ ವಹಿಸಲಾಗಿದೆ. ಅಲ್ಲದೆ, ರಾಜ್ಯ ಸಚಿವರಾಗಿದ್ದ ಶ್ರೀ ಪ್ರಿಯಾಂಕ್ ಖರ್ಗೆ (ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ), ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಜವಳಿ ಮತ್ತು ಮುಜರಾಯಿ), ಶ್ರೀ ಪ್ರಮೋದ್ ಮಧ್ವರಾಜ್ (ಯುವಜನ ಸೇವೆ ಮತ್ತು ಮೀನುಗಾರಿಕೆ) ಮತ್ತು ಶ್ರೀ ಈಶ್ವರ ಬಿ. ಖಂಡ್ರೆ (ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆ) ಅವರಿಗೆ ಸಂಪುಟ ದರ್ಜೆ ಸ್ಥಾನಕ್ಕೆ ಬಡ್ತಿ ನೀಡಲಾಗಿದೆ.



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನೂತನ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿರವರನ್ನು ಭೇಟಿ ಮಾಡಿ ಅಭಿನಂದಿಸಿದರು.



ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾವ ಸಾಹೇಬ ಪಾಟೀಲರವರು ನೂತನ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿರವರನ್ನು ಭೇಟಿ ಮಾಡಿ ಅಭಿನಂದಿಸಿದರು.

# ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆ

ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 16 ಸೆಪ್ಟೆಂಬರ್ 2017, ಶನಿವಾರದಂದು ಕಿಂಗ್ಸ್ ಕೋರ್ಟ್, ಗೇಟ್ ಸಂಖ್ಯೆ 5, ಅರಮನೆ ಆವರಣ, ಬಳ್ಳಾರಿ ರಸ್ತೆ, ಬೆಂಗಳೂರು–560080 ಇಲ್ಲಿ ಬೆಳಿಗ್ಗೆ 11–00 ಗಂಟೆಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಭೆಯ ನೋಟೀಸನ್ನು ಸದಸ್ಯರ ಮಾಹಿತಿಗಾಗಿ ಹಾಗೂ ಅರ್ಹ ಸದಸ್ಯ ಸಹಕಾರಿಗಳ ಭಾಗವಹಿಸುವಿಕೆಗಾಗಿ ಪ್ರಕಟಿಸಲಾಗಿದೆ. ಈಗಾಗಲೇ ಅರ್ಹ ಸದಸ್ಯರಿಗೆ ನೋಟೀಸ್ ಹಾಗೂ ವಾರ್ಷಿಕ ವರದಿಯನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಲಾಗಿದೆ. ಅರ್ಹ ಸದಸ್ಯರ ಪಟ್ಟಿ ಹಾಗೂ ಹೆಚ್ಚಿನ ವಿವರಗಳಿಗಾಗಿ www.souharda.coop ಅನ್ನು ಸಂಪರ್ಕಿಸುವುದು. ಈ ವಿಷಯವಾಗಿ ದಿನಾಂಕ : 27–08–2017ರ ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10.

26 ಆಗಸ್ಟ್ 2017

### 16ನೇ ವಾರ್ಷಿಕ ಸಾಮಾನ್ಯ ಸಭೆ

ಮಾನ್ಯರೇ,

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು 16 ಸೆಪ್ಟೆಂಬರ್ 2017, ಶನಿವಾರದಂದು ಕಿಂಗ್ಸ್ ಕೋರ್ಟ್, ಗೇಟ್ ಸಂಖ್ಯೆ 5, ಅರಮನೆ ಆವರಣ, ಬಳ್ಳಾರಿ ರಸ್ತೆ, ಬೆಂಗಳೂರು–560080 ಇಲ್ಲಿ ಬೆಳಿಗ್ಗೆ 11.00 ಗಂಟೆಗೆ ಕರೆಯಲಾಗಿದೆ. ಈ ಸಭೆಗೆ ತಾವು ಆಗಮಿಸಬೇಕಾಗಿ ಕೋರಲಾಗಿದೆ.

**ಈ ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು :**

1. 16ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
2. 15ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.
3. 2016–17ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಗಣಿಸುವುದು.
4. 2016–17ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಹಾಗೂ ಅನುಪಾಲನಾ ವರದಿಯನ್ನು ಅನುಮೋದಿಸುವುದು.
5. 2016–17ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.
6. 2017–18ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
7. 2017–18ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.
8. 2018–19ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
9. 2018–19ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸುವುದು.
10. 2017–18ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
11. 2017–18 ಮತ್ತು 2018–19ನೇ ಸಾಲುಗಳಿಗೆ ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
12. ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯ ವರದಿ ಮತ್ತು ಲೆಕ್ಕಪತ್ರಗಳ ಅನುಮೋದನೆ.
13. ಸಂಯುಕ್ತ ಸಹಕಾರಿಯ ಮಂಡಲಿಯ ಚುನಾವಣೆಯ ಕುರಿತು.
14. ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಕುರಿತು.
15. ಸಂಯುಕ್ತ ಸಹಕಾರಿಯ ಸ್ವಂತ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಿಸುವ ಕುರಿತು.
16. ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು.
17. ನೂತನವಾಗಿ ಸೇರ್ಪಡೆಗೊಂಡ ಸದಸ್ಯರ ಪರಿಗಣನೆ.
18. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ

ಸಹಿ/–

**(ಶರಣಗೌಡ ಜಿ. ಪಾಟೀಲ)**

ವ್ಯವಸ್ಥಾಪಕ ನಿರ್ದೇಶಕ

# ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯಗಳ ಪುನರ್ ಸ್ಥಾಪನೆಗೆ ಆಡಳಿತ ಮಂಡಲಿ ಬದ್ಧ

## ಸಿಬ್ಬಂದಿಯವರ ಕರ್ತವ್ಯ ನಿಷ್ಠೆ ಹಾಗೂ ಕಾರ್ಯದ ವೇಗ ಪ್ರಶ್ನಾತೀತವಾಗಿರಬೇಕು - ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

**ಬೆಂಗಳೂರು :** ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಸಂಯುಕ್ತ ಸಹಕಾರಿಯ ಅಧಿಕಾರಿ ವರ್ಗದವರು ಸಂಯುಕ್ತ ಸಹಕಾರಿಯ ಚುನಾವಣೆಗಾಗಿ ಬಹಳ ಶ್ರದ್ಧೆಯಿಂದ ಕಾರ್ಯನಿರ್ವಹಿಸಿರುವುದಕ್ಕಾಗಿ ಎಲ್ಲರನ್ನೂ ಅಭಿನಂದಿಸಿದರು.

ನೀವುಗಳು ಮನಸ್ಸು ಮಾಡಿದರೆ ಎಂತಹ ಕಾರ್ಯಗಳನ್ನು ಸಹ ಮಾಡುವಿರಿ, ಇದಕ್ಕೆ ಸಂಯುಕ್ತ ಸಹಕಾರಿಯ ಚುನಾವಣೆ ಪ್ರತಿ ವರ್ಷ ಜರುಗುವ ಸಾಮಾನ್ಯ ಸಭೆಗಳೇ ಸಾಕ್ಷಿ. ಹಿಂದಿನ ಅಧ್ಯಕ್ಷರು ಸಂಯುಕ್ತ ಸಹಕಾರಿಯನ್ನು ನಡೆಸಿಕೊಂಡ ಬಂದ ಮಾರ್ಗವನ್ನು ಆಧಾರವಾಗಿಟ್ಟುಕೊಂಡು ಕಾರ್ಯನಿರ್ವಹಿಸುತ್ತೇನೆ. ಆಡಳಿತ ಮಂಡಲಿಯು ಉತ್ತಮವಾಗಿ ಕಾರ್ಯನಿರ್ವಹಿಸುವುದಕ್ಕೆ ನಿಮ್ಮೆಲ್ಲರ ಸಂಪೂರ್ಣ ಸಹಕಾರ ಅಗತ್ಯ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಆಶಯಕ್ಕೆ ಸ್ಪಂದಿಸುವ ಕಾರ್ಯವನ್ನು ಅತ್ಯಂತ ಹೆಚ್ಚಿನ ಶ್ರದ್ಧೆಯಿಂದ ಮಾಡುವುದು ಅವಶ್ಯಕ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವೇಗ ಹಾಗೂ ಗುಣಮಟ್ಟವನ್ನು ಹೆಚ್ಚಿಸಬೇಕು. ಶಿಸ್ತು ಮತ್ತು ದಕ್ಷತೆಗೆ ಮೊದಲ ಆದ್ಯತೆ ಕೊಡಲಾಗುವುದು. ಎಲ್ಲಾ ಸಿಬ್ಬಂದಿಯವರ ಜೊತೆ ಮಾತನಾಡುತ್ತೇನೆ. ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ. ನೀವು ನನಗೆ ಸಹಕರಿಸಬೇಕು ಎಂದು ತಿಳಿಸಿದರು.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 2001 ಜನವರಿಯಲ್ಲಿ ಜಾರಿಗೆ ಬಂದಾಗ ಸಂಪೂರ್ಣ ಸ್ವಾಯತ್ತತೆಯನ್ನು ಸಹಕಾರಿಗಳಿಗೆ ನೀಡಲಾಗಿತ್ತು. ಕ್ರಮೇಣ ಸರಕಾರ ಅನೇಕ ತಿದ್ದುಪಡಿಗಳನ್ನು ಮಾಡಿ, ಕೆಲವು ಸ್ವಾಯತ್ತತೆಗಳನ್ನು ಮೊಟಕು ಮಾಡಿದೆ. ಈ ಬಗ್ಗೆ ಸಂಬಂಧಿಸಿದವರಲ್ಲಿ ಮಾತನಾಡಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಮೊದಲು ಹೊಂದಿದ್ದ ಎಲ್ಲಾ ಆಶಯಗಳ ಪುನರ್ ಸ್ಥಾಪನೆಗೆ ಆಡಳಿತ ಮಂಡಲಿ ಬದ್ಧವಾಗಿದೆ ಎಂದು ತಿಳಿಸಿದರು.

## ಬೆಳಗಾವಿ ವಿಭಾಗಿಯ ಕಛೇರಿಗೆ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರ ಭೇಟಿ : ಸದಸ್ಯ ಸಹಕಾರಿಗಳ ಅಭಿವೃದ್ಧಿಗೆ ಹೆಚ್ಚು ಗಮನ ಹರಿಸಿ – ಶ್ರೀ ಜಗದೀಶ್ ಕವಟಗಿಮಠ

**ಬೆಳಗಾವಿ :** ಸಂಯುಕ್ತ ಸಹಕಾರಿಯ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಜಗದೀಶ್ ಕವಟಗಿಮಠರವರು ಪ್ರಥಮ ಭಾರಿಗೆ ಬೆಳಗಾವಿ ವಿಭಾಗೀಯ ಕಛೇರಿಗೆ ಬೇಟಿ ನೀಡಿ ಅಧಿಕಾರಿಗಳ ಸಭೆ ನಡೆಸಿದರು. ಶ್ರೀ ಯುತರು ಮಾತನಾಡುತ್ತಾ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯಲ್ಲಿ ಉತ್ತರ ಕರ್ನಾಟಕದ ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಕೊಡುಗೆ ಮಹತ್ವದಾಗಿದೆ. ಈ ವಿಭಾಗದ ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಅನುಕೂಲವಾಗುವಂತೆ ಸಿಬ್ಬಂದಿಯವರು ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

## ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಪ್ರಸಕ್ತ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್ ಇವರಿಗೆ ನೂತನ ಆಡಳಿತ ಮಂಡಲಿ ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಂದ ಸೇವಾವಧಿಯ ಕಾರ್ಯಗಳ ಪ್ರಶಂಸೆ

### ಸೌಹಾರ್ದ ಸಹಕಾರಿ ಕ್ಷೇತ್ರ ನನ್ನಲ್ಲಿ ಸಹಕಾರಿ ನಾಯಕತ್ವವನ್ನು ರೂಪಿಸಿದೆ : ಶ್ರೀ ಗುರುನಾಥ ಜ್ಯಾಂತಿಕರ

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಪ್ರಾರಂಭದಿಂದಲೂ ತೊಡಗಿಸಿಕೊಂಡು ಕಾರ್ಯನಿರ್ವಹಿಸಿದುದರ ಪರಿಣಾಮವಾಗಿ ನನ್ನಲ್ಲಿ ಸಹಕಾರಿ ನಾಯಕತ್ವವನ್ನು ರೂಪಿಸಲು ಸಾಧ್ಯವಾಗಿದೆ. ಉತ್ತಮ ಸಹಕಾರಿ ಸಂಸ್ಥೆಗಳ ಹಾಗೂ ಸಹಕಾರಿ ಧುರೀಣರ ಒಡನಾಟ ದೊರಕಿದೆ. ಬಹಳಷ್ಟು ವಿಷಯಗಳನ್ನು ತಿಳಿದುಕೊಳ್ಳಲು, ಅಧ್ಯಯನ ಮಾಡಲು ಸಾಧ್ಯವಾಗಿದೆ. ಸಂಯುಕ್ತ ಸಹಕಾರಿಯ ಹಿಂದಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸಿಬ್ಬಂದಿಯವರು ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ಹಿರಿಯರ ಮಾರ್ಗದರ್ಶನ, ಸಲಹೆ ಹಾಗೂ ಸಹಕಾರದಿಂದ ಅನೇಕ ಮಹತ್ವದ ಪ್ರಗತಿಪರ ಕೆಲಸಗಳು ಆಗಿವೆ. ಈ ಅವಕಾಶವನ್ನು ಕಲ್ಪಿಸಿಕೊಟ್ಟ ಆಡಳಿತ ಮಂಡಲಿಯ ಸದಸ್ಯರಿಗೆ ಕೃತಜ್ಞತೆಗಳನ್ನು ತಿಳಿಸಿದರು.

ರಾಜ್ಯದಲ್ಲಿ ಕಳೆದ 15 ವರ್ಷಗಳಿಂದ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿ ಈಗ ಹೆಮ್ಮರವಾಗಿ ಬೆಳೆದು ನಿಂತಿರುವುದಕ್ಕೆ ಅನೇಕ ಪ್ರಾಮಾಣಿಕ ಬದ್ಧತೆಯುಳ್ಳ ಸಹಕಾರಿಗಳು ಕಾರಣ. ಅವರುಗಳಿಂದಾಗಿಯೇ ಸೌಹಾರ್ದ



ಸಹಕಾರಿ ಕ್ಷೇತ್ರ ಬೆಳೆದಿದೆ. ಅವರಿಗೆಲ್ಲ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಹಾಗೂ ಈ ಸೌಹಾರ್ದ ಸಹಕಾರಿ ರಥವನ್ನು ಇನ್ನೂ ವೇಗವಾಗಿ, ಗುಣಾತ್ಮಕವಾಗಿ, ಸಂಖ್ಯಾತ್ಮಕವಾಗಿ ಬೆಳವಣಿಗೆಗಾಗಿ ಪ್ರಸಕ್ತ ಆಡಳಿತ ಮಂಡಲಿಯವರು ತೆಗೆದುಕೊಳ್ಳುವ ಎಲ್ಲಾ ಕಾರ್ಯಗಳಲ್ಲೂ ಸಂಪೂರ್ಣ ಸಹಕಾರವನ್ನು ನೀಡುವುದಾಗಿ ಮತ್ತು ಎಲ್ಲಾ ಒಟ್ಟಾಗಿ ಈ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸೋಣ ಎಂದು ತಿಳಿಸಿದರು.

### ಕರ್ನಾಟಕ ಸ್ಟೇಟ್ ಕ್ರೆಡಿಟ್ ಸಹಕಾರ ಸಂಘಗಳ ಅಸೋಸಿಯೇಷನ್‌ರವರಿಂದ ಅಭಿನಂದನೆ

ಇದೇ ಸಂದರ್ಭದಲ್ಲಿ ಕರ್ನಾಟಕ ಸ್ಟೇಟ್ ಕ್ರೆಡಿಟ್ ಸಹಕಾರ ಸಂಘಗಳ ಅಸೋಸಿಯೇಷನ್ ಅಧ್ಯಕ್ಷರಾದ ಶ್ರೀ ನಾಗರಾಜ ಶೆಟ್ಟಿ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರದೀಪ ದಾಬಶೆಟ್ಟಿಯವರು ಶ್ರೀಯುತರನ್ನು ಹಾಗೂ ಸಂಯುಕ್ತ ಸಹಕಾರಿಯ ಎಲ್ಲಾ ನಿರ್ದೇಶಕರುಗಳನ್ನು ಹೂಗುಚ್ಛ ಕೊಡುವುದರ ಮೂಲಕ ಅಭಿನಂದಿಸಿದರು.

## ಸೌಹಾರ್ದ ಸಹಕಾರಿಗಳ ಕನಸುಗಳನ್ನು ಸಾಕಾರಗೊಳಿಸುವ ಪ್ರಗತಿಪರ ಕಾರ್ಯ ಅವಶ್ಯಕ - ಹೆಚ್.ವಿ.ರಾಜೀವ್

ಸ್ವಾಯತ್ತ ಸಹಕಾರಿ ಕಾಯ್ದೆಯ ಅನುಷ್ಠಾನದಲ್ಲಿ, ಕಾರ್ಯನಿರ್ವಹಣೆಯಲ್ಲಿ, ಸಂಖ್ಯಾತ್ಮಕ ಹಾಗೂ ಗುಣಾತ್ಮಕ ಬೆಳವಣಿಗೆಯಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದೆ. ಇದು ನಮ್ಮ ಸಹಕಾರಿಗಳು ಕಂಡ ಕನಸಾಗಿತ್ತು. ಸೌಹಾರ್ದ ಸಹಕಾರಿ ಕ್ಷೇತ್ರ ಮುಂಬರುವ ದಿನಗಳಲ್ಲಿ ಉತ್ತಮ ಬೆಳವಣಿಗೆಯನ್ನು ಸಾಧಿಸಬೇಕು ಎಂಬ ಬಗ್ಗೆ ಕನಸು ಕಾಣಬೇಕು. ಪ್ರಗತಿಪರ ಚಿಂತನೆಗಳು ನಡೆದು ಪರಿಣಾಮಕಾರಿ ಅನುಷ್ಠಾನ ಆಗಬೇಕಿದೆ.

ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ವೇಗ ಹೆಚ್ಚಿಸಬೇಕಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಅಥವಾ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಸರಕಾರ ಅಥವಾ ಯಾವುದೇ ಹಂತದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಬಗ್ಗೆ ಎರಡನೆ ಚಿಂತನೆಗೆ ಅವಕಾಶವಿರದಂತೆ ಈ ಕ್ಷೇತ್ರದ ಮಹತ್ವತೆಯನ್ನು ಬಿಂಬಿಸುವ ಹೆಚ್ಚಿನ ಮಹತ್ವದ ಕಾರ್ಯಗಳು ಈ ಕ್ಷೇತ್ರದಲ್ಲಿ ಮಾಡಲು ಅವಕಾಶಗಳಿವೆ. ಸಂಯುಕ್ತ ಸಹಕಾರಿಯ ಹಾಗೂ ಆಡಳಿತ ಮಂಡಲಿಯ ಪ್ರತಿಯೊಂದು ಹೆಜ್ಜೆಯೂ ಮಹತ್ವದ್ದಾಗಿರುವಂತೆ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಗುರುನಾಥ ಜಾಂತಿಕರರವರು ಬಹಳ ಉತ್ತಮ ಕಾರ್ಯಗಳನ್ನು ಮಾಡಿದ್ದಾರೆ. ಅವರಿಗೆ ಹಿಂದಿನ, ಈಗಿನ ಆಡಳಿತ ಮಂಡಲಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳು ಕೃತಜ್ಞತೆ ಸಲ್ಲಿಸಬೇಕು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ವಂದನೆ ಸಲ್ಲಿಸಿದರು.

## ಕೃತಜ್ಞತೆ ಹಾಗೂ ಅಭಿನಂದನಾ ಸಮಾರಂಭ ಮತ್ತು ಸೌಹಾರ್ದ ಸಹಕಾರಿಗಳ ಭೇಟಿ

### ಸಂಯುಕ್ತ ಸಹಕಾರಿಯನ್ನು ಉತ್ತಮ ಕಾರ್ಪೋರೇಟ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಕ್ರಿಯಾ ಯೋಜನೆ ಸಿದ್ಧ - ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ





**ಮೈಸೂರು :** ದಿನಾಂಕ : 28.07.2017ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಲಿಗೆ ನಡೆದ ಚುನಾವಣೆಯಲ್ಲಿ ಮೈಸೂರು ವಿಭಾಗದಿಂದ ಶ್ರೀ ಹೆಚ್.ವಿ.ರಾಜೀವ್ ಮತ್ತು ಶ್ರೀ ಎಸ್.ಕೆ.ಮಂಜುನಾಥ್‌ರವರನ್ನು ಮೈಸೂರು ವಿಭಾಗದ ಸಹಕಾರಿಗಳು ಆಯ್ಕೆ ಮಾಡಿರುವುದಕ್ಕೆ ಶ್ರೀ ಹೆಚ್.ವಿ.ರಾಜೀವ್ ಮತ್ತು ಶ್ರೀ ಎಸ್.ಕೆ.ಮಂಜುನಾಥ್‌ರವರು ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆ ಮತ್ತು ಅಭಿನಂದನಾ ಸಮಾರಂಭವನ್ನು ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ರಾಮ ಮಂದಿರದಲ್ಲಿ ದಿನಾಂಕ 23.08.2017ರಂದು ಹಮ್ಮಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಗೆ ನೂತನವಾಗಿ ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರಿಗೆ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಜಗದೀಶ ಕವಟಗಿಮಠರವರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ತೆಂಗು ನಾರಿನ ಸಹಕಾರ ಮಹಾಮಂಡಳದ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಎಸ್.ಆರ್.ನಾರಾಯಣರಾವ್‌ರವರು ವಹಿಸಿದ್ದರು. ಉದ್ಘಾಟಕರಾಗಿ ಆಂದೋಲನ ದಿನಪತ್ರಿಕೆಯ ಸಂಪಾದಕರಾದ ಶ್ರೀ ರಾಜಶೇಖರ ಕೋಟಿಯವರು ಆಗಮಿಸಿದ್ದರು, ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು, ನೂತನ ನಿರ್ದೇಶಕರಾದ ಶ್ರೀ ಎಸ್.ಕೆ.ಮಂಜುನಾಥ್, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರುಗಳಾದ ಶ್ರೀ ಎಂ.ಕೆ.ಸೋಮಯ್ಯ ಮತ್ತು ಶ್ರೀ ದಿನೇಶ್‌ಗುಪ್ತರವರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಹಕಾರಿಗಳನ್ನುದ್ದೇಶಿಸಿ, ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಹಾಗೂ ಸಂಯುಕ್ತ ಸಹಕಾರಿ ಸಂಸ್ಥೆ ಉತ್ತಮ ಕಾರ್ಪೋರೇಟ್ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಕ್ರಿಯಾಯೋಜನೆ ಸಿದ್ಧಗೊಂಡಿದ್ದು, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಸಂಯುಕ್ತ ಸಹಕಾರಿ ಕಛೇರಿ ಆರಂಭಿಸಲು ನಿರ್ಧರಿಸಲಾಗಿದೆ.

ಪ್ರಸ್ತುತ ವಿಭಾಗೀಯ ಮಟ್ಟದಲ್ಲಿ ವಿಭಾಗೀಯ ಕಛೇರಿಗಳಿದ್ದು, ಅವುಗಳನ್ನು ಮತ್ತಷ್ಟು ಚುರುಕುಗೊಳಿಸಲಾಗುವುದು, ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗಳಿಗೆ ಸ್ವಂತ ನಿವೇಶನ ಹೊಂದುವುದು ಮತ್ತು ಕಟ್ಟಡ ನಿರ್ಮಾಣ ಮಾಡುವುದು ನಮ್ಮ ಗುರಿಯಾಗಿದ್ದು, ಕೇಂದ್ರ ಸ್ಥಾನದಲ್ಲಿ ಮಾಹಿತಿ ಸಂರಕ್ಷಣಾ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದರು. ಬೆಂಗಳೂರಿನ ಕೇಂದ್ರ ಭಾಗದಲ್ಲಿ ಸುಸಜ್ಜಿತ ಕಟ್ಟಡ ನಿರ್ಮಿಸಲಾಗುವುದು, ಈಗಾಗಲೇ ಮಲ್ಲೇಶ್ವರಂನಲ್ಲಿ ಸುಮಾರು 11 ಕೋಟಿ ರೂ. ವೆಚ್ಚದಲ್ಲಿ ನಿವೇಶನ ಖರೀದಿಸಿದ್ದು, ಅಲ್ಲಿ 10 ಕೋಟಿ ರೂ. ವೆಚ್ಚದಲ್ಲಿ 7 ಅಂತಸ್ತಿನ ಸ್ವಂತ ಕಟ್ಟಡ ಶೀಘ್ರವೇ ನಿರ್ಮಾಣಗೊಳ್ಳಲಿದೆ ಎಂದರು.

### ಮೈಸೂರು ವಿಭಾಗದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚಳಕ್ಕೆ ಮತ್ತು ಗುಣಮಟ್ಟ ನಿರ್ವಹಣೆಗೆ ಆದ್ಯತೆ – ಶ್ರೀ ಎಸ್.ಕೆ. ಮಂಜುನಾಥ್

ಮೈಸೂರು ವಿಭಾಗದ ನೂತನ ನಿರ್ದೇಶಕರಾದ ಶ್ರೀ ಎಸ್.ಕೆ. ಮಂಜುನಾಥ್‌ರವರು ಮಾತನಾಡಿ ಸೌಹಾರ್ದ ಸಹಕಾರಿಗಳ ಸಂಖ್ಯೆಯನ್ನು ಹೆಚ್ಚಿಸುವುದು, ಅವುಗಳನ್ನು ಗುಣಮಟ್ಟವಾಗಿ ಬೆಳೆಸುವುದು ಹಾಗೂ ಮೈಸೂರು ವಿಭಾಗದಲ್ಲಿ ಈಗಿರುವ ಸಂಖ್ಯೆಯನ್ನು ದ್ವಿಗುಣಗೊಳಿಸಲು ಕ್ರಮವಿಡಲಾಗುವುದು ಎಂದರು. ಕಾರ್ಯಕ್ರಮದ ನಿರೂಪಣೆಯನ್ನು ಮೈಸೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯರು ಹಾಗೂ ವಾಗ್ದೇವಿ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಚಿಕ್ಕಮ್ಮ ಬಸವರಾಜುರವರು ಮಾಡಿದರು. ಪ್ರಾಸ್ತಾವಿಕ ಮತ್ತು ಸ್ವಾಗತ ಭಾಷಣವನ್ನು ಮೈಸೂರು ವಿಭಾಗದ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್‌ರವರು ಮಾಡಿದರು.

## ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಸಹಕಾರಿಗೆ ಭೇಟಿ

ಕಾರ್ಯಕ್ರಮ ಮುಕ್ತಾಯವಾದ ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಮೈಸೂರು ವಿಭಾಗದ ನಿರ್ದೇಶಕರುಗಳಾದ ಶ್ರೀ ಹೆಚ್.ವಿ.ರಾಜೀವ್ ಹಾಗೂ ಶ್ರೀ ಎಸ್.ಕೆ.ಮಂಜುನಾಥ್ ಮತ್ತು ವಿಭಾಗೀಯ ಸಿಬ್ಬಂದಿಗಳು ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿಗೆ ಭೇಟಿ ನೀಡಿ, ಅಲ್ಲಿನ ಆಡಳಿತ ಮಂಡಲಿಯ ಪರಿಚಯವನ್ನು ಮಾಡಿಕೊಂಡು ಸಹಕಾರಿ ಮಾಡುತ್ತಿರುವ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡು ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.



## ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಸಹಕಾರಿಗೆ ಭೇಟಿ



ನಂತರ ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿಗೆ ಭೇಟಿ ನೀಡಿ, ಅಲ್ಲಿನ ಆಡಳಿತ ಮಂಡಲಿಯ ಪರಿಚಯವನ್ನು ಮಾಡಿಕೊಂಡು ಸಹಕಾರಿ ಮಾಡುತ್ತಿರುವ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡು ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.

## ಸಂಯುಕ್ತ ಸಹಕಾರಿಯ ನೂತನ ನಿರ್ದೇಶಕರುಗಳ ಪರಿಚಯ ಭಾಗ – 2

### ಶ್ರೀಮತಿ ಸರಸ್ವತಿ ಎನ್. ರವಿ

ಸಹಕಾರ ಕ್ಷೇತ್ರದ ಸಸ್ಯಕಾಶಿ ಎಂದೇ ಹೆಸರಾಗಿರುವ ಈ ರಾಜ್ಯಕ್ಕೆ ಅನೇಕ ಸಹಕಾರಿ ದಿಗ್ಗಜರನ್ನು ಕೊಟ್ಟಿರುವ ಹಾಗೂ ಉತ್ತಮ ಸಹಕಾರಿ ಸಂಸ್ಥೆಗಳನ್ನು ಹೊಂದಿರುವ ಜಿಲ್ಲೆ ಉತ್ತರ ಕನ್ನಡ. ಸಹಕಾರ ಕ್ಷೇತ್ರದ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಮತ್ತು ವಿಶೇಷವಾಗಿ ಮಹಿಳಾ ಸಬಲೀಕರಣ ಸಾಧ್ಯ ಮಹಿಳೆಯರು ಈ ಕ್ಷೇತ್ರದಲ್ಲಿ ವಿಶೇಷವಾಗಿ ತೊಡಗಿಸಿಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ ಎಂದು ಪ್ರತಿಪಾದಿಸುವ ಶ್ರೀಮತಿ ಸರಸ್ವತಿ ಎನ್. ರವಿಯವರು ಉತ್ತರ ಕನ್ನಡ ಜಿಲ್ಲೆಯವರು.



ದಿನಾಂಕ 28–07–2017ರಲ್ಲಿ ನಡೆದ ಚುನಾವಣೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕಿಯಾಗಿರುವ ಏಕೈಕ ಮಹಿಳೆ ಶ್ರೀಮತಿ ಸರಸ್ವತಿ. ಶಿರಸಿಯಲ್ಲಿ ವಾಸವಾಗಿದ್ದಾರೆ. ತಂದೆ ಶ್ರೀ ಎನ್.ರವಿ. ತಾಯಿ ಶ್ರೀಮತಿ ನೀಲ. ಸುಸಂಸ್ಕೃತ ವಿದ್ಯಾವಂತ ಕೃಷಿ ಕುಟುಂಬದಲ್ಲಿ ದಿನಾಂಕ 21–04–1977ರಲ್ಲಿ ದಾಂಡೇಲಿಯಲ್ಲಿ ಜನನ. ಪದವಿವರೆಗೆ ದಾಂಡೇಲಿಯಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿದ ಇವರು ಮೈಸೂರಿನಲ್ಲಿ ಎಮ್.ಬಿ.ಎ. ಶಿಕ್ಷಣವನ್ನು ಪೂರೈಸಿದ್ದಾರೆ.

18 ಜಿಲ್ಲೆಗಳ ವ್ಯಾಪ್ತಿಯುಳ್ಳ ರಾಜ್ಯ ಮಟ್ಟದ ಸೇವಾ ಸಂಸ್ಥೆ ಸಹ್ಯಾದ್ರಿ ಕಮ್ಯುನಿಟಿ ಡೆವಲಪ್‌ಮೆಂಟ್ & ವುಮೆನ್ ಎಂಪವರ್‌ಮೆಂಟ್ ಸೊಸೈಟಿಯ (ಸ್ಕೊಡ್‌ವೆಸ್) ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಈ ಸಂಸ್ಥೆಯ ಮೂಲಕವೇ (ಸ್ಕೊಡ್‌ವೆಸ್) ಮಹಿಳಾ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸಿದ್ದಾರೆ. ಪ್ರಾರಂಭದಿಂದಲೇ (ಡೇ ಒನ್‌ನಿಂದ) ಕಾಗದರಹಿತ ಸಂಪೂರ್ಣ ಆಧುನಿಕ ತಂತ್ರಜ್ಞಾನಗಳನ್ನು ಉಪಯೋಗಿಸಿ ಕಾರ್ಯನಿರ್ವಹಿಸಲಾಗುತ್ತಿದೆ. ಈ ಸಂಸ್ಥೆಯ ಎಲ್ಲಾ ನಿರ್ದೇಶಕರು ಕೆಳ ಹಂತದಿಂದಲೇ ಬಂದವರು. (ಗ್ರಾಸ ರೂಟ್ ಮತ್ತು ಬಿಪಿಎಲ್ ಲೆವೆಲ್) ಸದ್ಯಕ್ಕೆ 3300 ಸದಸ್ಯರನ್ನು ಹೊಂದಿದೆ. ಒಂದನೇ ವರ್ಷದಲ್ಲಿ 8%, 2ನೇ ವರ್ಷದಲ್ಲಿ 14% ಡಿವಿಡೆಂಡ್ ನೀಡಲಾಗಿದೆ. ಈ ಮಹಿಳಾ ಸೌಹಾರ್ದ ಸಹಕಾರಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. 175 ಜನರಿಗೆ ಉದ್ಯೋಗ ನೀಡಿದ್ದಾರೆ. ಮಹಿಳೆಯರಿಗೆ ಆರ್ಥಿಕ ಸಂಪನ್ಮೂಲಗಳ ಹೆಚ್ಚಿಸುವ ದೃಷ್ಟಿಯಿಂದ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಯೋಜನೆಯನ್ನು ಸಿದ್ಧಪಡಿಸಿದ್ದಾರೆ. ಇದೊಂದು ಮಾದರಿ ಸಹಕಾರಿ ಸಂಸ್ಥೆಯಾಗಿ ಬೆಳೆಸುವ ಉತ್ಸಾಹ ಹಾಗೂ ಹುಮ್ಮಸ್ಸು ಹೊಂದಿದ್ದೇವೆ. ಹಿರಿಯ ಸಹಕಾರಿಗಳು ಹಾಗೂ ಅಧಿಕಾರಿಗಳು ಸಹಕರಿಸಬೇಕು ಎಂದು ಅಪೇಕ್ಷೆ ಪಡುತ್ತಾರೆ. ಶ್ರೀಮತಿ ಸರಸ್ವತಿಯವರು ಸೇಫ್ ಸರ್ವಿಸಸ್ ಪ್ರೈವೇಟ್ ಕಂಪನಿಯ ನಿರ್ದೇಶಕರಾಗಿದ್ದಾರೆ.

## ಶ್ರೀ ಸಂಜೀವ ಸಂಗಪ್ಪ ಮಹಾಜನ

ಹೈದ್ರಾಬಾದ್ ಕರ್ನಾಟಕ ಪ್ರದೇಶ ರಾಜ್ಯದಲ್ಲಿಯೇ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಅಸಮಾನತೆಯನ್ನು ಹೊಂದಿರುವ ಪ್ರದೇಶವಾದರೂ ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆಯಲ್ಲಿ ಹಲವಾರು ಸಮಾಜದ ಅಭಿವೃದ್ಧಿಯ ಚಿಂತಕರು ಇದ್ದಾರೆ. ಸಮಾಜದ ಅಭಿವೃದ್ಧಿಗಾಗಿ ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಿ ಜನರಿಗೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಬೆಳವಣಿಗೆಗೆ ಪೂರಕವಾಗುವ ಕಾರ್ಯಗಳನ್ನು ಮಾಡುವುದರ ಜೊತೆಗೆ ಜನರನ್ನು ಸಹಕಾರ ಕ್ಷೇತ್ರದ ಮೂಲಕವೂ ಅಭಿವೃದ್ಧಿಯತ್ತ ಕೊಂಡ್ಯೊಯುತ್ತಿದ್ದಾರೆ. ಅವರಲ್ಲಿ ಕಲಬುರಗಿಯ ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಯುವ ಸಹಕಾರಿ ಶ್ರೀ ಸಂಜೀವ ಸಂಗಪ್ಪ ಮಹಾಜನರವರು ಒಬ್ಬರಾಗಿದ್ದಾರೆ. ಸಹಕಾರ ತತ್ವಾಚರಣೆಗಳಲ್ಲಿ ನಂಬಿಕೆಯುಳ್ಳವರು. ಕ್ಷೇತ್ರದ ಮೂಲಕ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಬಲವಾಗಿ ನಂಬಿದವರು. ಸಹಕಾರ ಸಂಸ್ಥೆಗಳನ್ನು ಸದೃಢವಾಗಿಸಿ ಅದರ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ವಿಶೇಷವಾಗಿ ಯುವಜನರ ಕಾರ್ಯಕ್ಷೇತ್ರವಾಗಬೇಕು ಎಂದು ಬಲವಾಗಿ ವಾದಿಸುತ್ತಾರೆ ಶ್ರೀಯುತ ಸಂಜೀವ ಮಹಾಜನರು.



ಶ್ರೀ ಸಂಜೀವ ಸಂಗಪ್ಪ ಮಹಾಜನ ಅವರು ಕಲಬುರಗಿ ನಗರದ ನಿವಾಸಿಗಳಾಗಿದ್ದು, ಮೂಲತಃ ಬಸವ ಕಲ್ಯಾಣ ತಾಲ್ಲೂಕಿನ ಮಂಠಾಳ ಗ್ರಾಮದವರು. ಕೃಷಿ ಕುಟುಂಬ. ದಿನಾಂಕ 24-11-1965ರಲ್ಲಿ ಸೋಲಾಪುರದಲ್ಲಿ ಜನನ. ಬಿ.ಇ.ವರೆಗೆ ಶಿಕ್ಷಣ. ತಂದೆ ಡಾ. ಸಂಗಪ್ಪ ಮಹಾಜನ. ಅವರು ಪಶು ವೈದ್ಯಕೀಯ ಇಲಾಖೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಾ ಒಳ್ಳೆಯ ಹೆಸರು ಗಳಿಸಿಕೊಂಡವರು. ಡಾ. ಸಂಗಪ್ಪ ಮಹಾಜನ ಇಲಾಖೆಯಲ್ಲಿ ನಿಸ್ವಾರ್ಥ, ಪ್ರಾಮಾಣಿಕ ಹಾಗೂ ಪಾರದರ್ಶಕ ಸೇವೆ ಸಲ್ಲಿಸಿ, ಸಹಾಯಕ ನಿರ್ದೇಶಕರಾಗಿ ನಿವೃತ್ತರಾಗಿದ್ದು, ಸದ್ಯ ಮನೆತನದ ಮೂಲ ವೃತ್ತಿಯಾದ ಒಕ್ಕಲುತನದಲ್ಲಿ ಆಸಕ್ತಿಯಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರದು ಹೆಸರಿಗೆ ತಕ್ಕಂತೆ ಸುಸಂಸ್ಕೃತ ಹಾಗೂ ಹೆಸರಾಂತ ಮನೆತನ, ತಾಯಿ ಮಹಾದೇವಿ ಅತ್ಯಂತ ಸಹನಾಶೀಲರು ಹಾಗೂ ಯಾವಾಗಲೂ ಸುಮ್ಮನೆ ಕಾಲಹರಣ ಮಾಡದೇ ಕೆಲಸವನ್ನು ಮಾಡುವ ಸ್ವಭಾವದವರು ಇಂತಹ ಮನೆತನದಿಂದ ಬಂದ ಶ್ರೀ ಸಂಜೀವ ಮಹಾಜನ ಅವರಲ್ಲೂ ತಂದೆ-ತಾಯಿಗಳ ಎಲ್ಲಾ ಗುಣಗಳು ಮೈಳೈಸಿವೆ.

ಶ್ರೀ ಸಂಜೀವ ಮಹಾಜನ ಅವರು ಮೆಕ್ಯಾನಿಕಲ್ ಇಂಜಿನಿಯಿರಿಂಗ್ ಪದವಿಗಾಗಿ ಪಿಡಿಎ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಾ "ಮಹಾಜನ ಆಟೋಮೊಬೈಲ್ಸ್" ಆಟೋಮೊಬೈಲ್ ಬಿಡಿ ಭಾಗಗಳ ಅಂಗಡಿಯನ್ನು ಪ್ರಾರಂಭಿಸಿ, ಮುಂದೆ ಟಾಟಾ ಬಿಪಿ ಸೋಲಾರ್ ಉಪಕರಣಗಳ ವಿತರಕರಾಗಿ ಕಲಬುರಗಿಯಲ್ಲಿ ಒಂದು ಅಂಗಡಿಯನ್ನು ಪ್ರಾರಂಭಿಸಿ, ಸೋಲಾರ್ ಉಪಕರಣಗಳ ಉಪಯುಕ್ತತೆಯ ಬಗ್ಗೆ ತಮ್ಮ ಸ್ವಂತ ದುಡ್ಡಿನಲ್ಲಿ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ಪ್ರಚಾರ ಮಾಡಿದವರು.

ಶ್ರೀ ಸಂಜೀವ ಮಹಾಜನರವರಲ್ಲಿ ಅಡಗಿದ್ದ ಸುಪ್ತವಾದ ಪ್ರತಿಭೆ ಸಹಕಾರ ಕ್ಷೇತ್ರದ ಮೂಲಕ ಹೊರಹೊಮ್ಮಿತ್ತು. ದಿನಾಂಕ: 27-06-2006ರಂದು ಸಮಾನ ಮನಸ್ಕ ಗೆಳೆಯರೊಡಗೂಡಿ ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯನ್ನು ಹುಟ್ಟುಹಾಕಿದರು.

ಕೇವಲ 4 ಲಕ್ಷ ರೂಪಾಯಿಗಳಿಂದ ಇವರು ಪ್ರಾರಂಭಿಸಿದ ಸಂಸ್ಥೆ ಇಂದು ಸಂಪೂರ್ಣ ಸುಸಜ್ಜಿತ ಕಟ್ಟಡದಲ್ಲಿ ಹೆಮ್ಮರವಾಗಿ ಬೆಳೆದು ನಿಂತು ಸುಮಾರು 20 ಕೋಟಿ ರೂಪಾಯಿಗಳ ದುಡಿಯುವ ಬಂಡವಾಳ ಹೊಂದಿದೆ. ವಿವಿಧ ಸೇವೆಗಳನ್ನು ಜನರಿಗೆ ನೀಡುತ್ತಾ ಒಂದು ಮಾದರಿ ಸಹಕಾರಿಯಾಗಿ ಹೆಸರುವಾಸಿಯಾಗಿದೆ, ಇದರ ಬಹುಪಾಲು ಶ್ರೇಯಸ್ಸು ಶ್ರೀ ಸಂಜೀವ ಮಹಾಜನ ಅವರಿಗೆ ಸಲ್ಲುತ್ತದೆ.

ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯ ಯಶಸ್ಸನ್ನು ಗಮನಿಸಿದ ಜನತೆ ಒಂದೊಂದಾಗಿ ಸೌಹಾರ್ದ ಸಹಕಾರಿಗಳು ಪ್ರಾರಂಭಿಸ ತೊಡಗಿದರು. ಸಲಹೆ ಮಾರ್ಗದರ್ಶನ ಕೇಳಲು ಎಲ್ಲರೂ ಶ್ರೀ ಸಂಜೀವ ಮಹಾಜನ ಅವರತ್ತ ಬರತೊಡಗಿದರು, ಯಾರೇ ಬಂದರೂ ಒಂದಿಷ್ಟು ಬೇಸರಗೊಳ್ಳದೇ ಸಹಕಾರಿಯ ಪ್ರಾರಂಭಕ್ಕೆ ಬೇಕಾದ ನಿಯಮಾವಳಿಗಳಿಂದ ಹಿಡಿದು ಮುಂದೆ ಆ ಸಹಕಾರಿಯ ಸಿಬ್ಬಂದಿ ವರ್ಗಕ್ಕೆ ತರಬೇತಿಯನ್ನು ಸಹ ತಮ್ಮ ಸಂಸ್ಥೆಯಲ್ಲಿ ನೀಡ ತೊಡಗಿದರು. ಶ್ರೀ ಸಂಜೀವ ಮಹಾಜನ ಅವರು ತಮ್ಮ ಸಹಕಾರಿಯನ್ನು ಬೆಳೆಸುತ್ತಾ ಇನ್ನುಳಿದ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೂ ಬೆಳೆಯಲು ಅವಕಾಶ ಮಾಡಿಕೊಟ್ಟರು.

ಇಂದು ಶ್ರೀ ಸಂಜೀವ ಮಹಾಜನ ಅವರದ್ದು ಕಲಬುರಗಿ ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ದೊಡ್ಡ ಹೆಸರು. ಅಂತೆಯೇ, ಸೌಹಾರ್ದ ಸಹಕಾರಿಗಳ ಅಭೂತಪೂರ್ವ ಬೆಂಬಲದಿಂದ ಇತ್ತೀಚೆಗೆ ನಡೆದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರ ಚುನಾವಣೆಯಲ್ಲಿ ವಿಜಯವನ್ನು ಸಾಧಿಸಿ, ಕಲಬುರಗಿ ವಿಭಾಗದ ನಿರ್ದೇಶಕರಾಗಿ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀ ಸಂಜೀವ ಮಹಾಜನ ಅವರ ಪ್ರಾಮಾಣಿಕ ಕೆಲಸ ಮಾಡುವ ಹುಮ್ಮಸ್ಸಿಗೆ, ಪ್ರವೃತ್ತಿಗೆ ಇನ್ನಷ್ಟು ಬಲ ತಂದುಕೊಟ್ಟಂತಾಗಿದೆ. ಕಲಬುರಗಿ ವಿಭಾಗದ ಸೌಹಾರ್ದ ಸಹಕಾರಿ ಚಳುವಳಿಗೆ ಬಲ ತುಂಬುವುದು, ಇನ್ನಷ್ಟು ಉತ್ತಮ ಸೌಹಾರ್ದ ಸಹಕಾರಿಗಳನ್ನು ಹುಟ್ಟು ಹಾಕಲು, ಜನರಿಗೆ ಸಹಕರಿಸುವುದು ಹಾಗೂ ಸೌಹಾರ್ದ ಸಹಕಾರಿಗಳ ಸಮಸ್ಯೆಗಳಿಗೆ ಸ್ಪಂದಿಸುವುದು ಶ್ರೀ ಸಂಜೀವ ಮಹಾಜನ ಅವರ ಬಯಕೆಯಾಗಿದೆ.

– ಜೈ ಹಿಂದ್ ಜೈ ಸಹಕಾರಿ

## ಶ್ರೀ ಬಿ.ಎಸ್. ಗುಂಡುರಾವ್

ಶ್ರೀಯುತರು ಹಾಸನ ಜಿಲ್ಲೆಯ ಅರಕಲಗೂಡ ತಾಲ್ಲೂಕಿನ ಬಸವಾಪಟ್ಟಣ ಗ್ರಾಮದಲ್ಲಿ ಮಧ್ಯಮ ವರ್ಗದ ರೈತ ಕುಟುಂಬದ ಶ್ರೀ ಶಿವರಾಮಯ್ಯ ಮತ್ತು ಶ್ರೀಮತಿ ಸುಶೀಲಮ್ಮ ದಂಪತಿಗಳಿಗೆ ಪುತ್ರನಾಗಿ ದಿನಾಂಕ 14-04-1962ರಲ್ಲಿ ಜನಿಸಿದರು. ಅವರು ಡಿಪ್ಲೋಮಾವರೆಗೆ ಶಿಕ್ಷಣ ಪೂರೈಸಿರುತ್ತಾರೆ.

ಬಾಲ್ಯದಿಂದಲೂ ಸಮಾಜದ ಶೋಷಿತ ವರ್ಗದ ಅಭಿವೃದ್ಧಿಯ ಬಗ್ಗೆ ಕಾಳಜಿ. ಮಕ್ಕಳಿಗೆ ಶಿಕ್ಷಣ ಹಾಗೂ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ಕೊಡುವಂತೆ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ನಿರಂತರ ಪ್ರಯತ್ನ ಮಾಡುತ್ತಾ ಬಂದಿರುವ ಶ್ರೀಯುತರು ಸಹಕಾರ ಕ್ಷೇತ್ರದ ಮೂಲಕ ಬಡವರಿಗೆ, ಸಮಾಜದ ಹಿಂದುಳಿದ ವರ್ಗದವರಿಗೆ, ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಹಾಯ ಮಾಡಲು ಎಂದು ತಿಳಿದು ಸಹಕಾರ ತತ್ವಗಳನ್ನು ಅಧ್ಯಯನ ಮಾಡಿ, ತಮ್ಮ ಸ್ನೇಹಿತರ ಹಾಗೂ ಸಮಾನ ಮನಸ್ಕರ ನೆರವಿನಿಂದ ಬೆಂಗಳೂರಿನ ಹನುಮಂತನಗರದಲ್ಲಿ ಜನವರಿ 1996ರಲ್ಲಿ ತಮ್ಮ ಮನೆಯ ಒಂದು ಚಿಕ್ಕ ಕೊಠಡಿಯಲ್ಲಿ ಉದಯ ಸಹಕಾರ ಸಂಘವನ್ನು ಸ್ಥಾಪಿಸಿದರು. ನಂತರ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ನಂತರ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಹಕಾರಿಗಳಿಗೆ ಸ್ವಾಯತ್ತತೆ ಹಾಗೂ ವ್ಯಾವಹಾರಿಕ ಸ್ವಾತಂತ್ರ್ಯ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಈ ಧ್ಯೇಯವನ್ನು ಒಪ್ಪಿಕೊಂಡು 2004ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಆಯ್ಕೆ ಮಾಡಿಕೊಂಡರು.



1996-97ರ ಪ್ರಥಮ ವರ್ಷದಲ್ಲಿ ಕೇವಲ 597 ಸದಸ್ಯರು, 6.63 ಲಕ್ಷ ರೂ.ಗಳ ಪಾಲು ಬಂಡವಾಳದಿಂದ ಪ್ರಾರಂಭಿಸಿ, 7.13 ಲಕ್ಷ ರೂ.ಗಳ ಠೇವಣಿ ಸಂಗ್ರಹಿಸಿ, 15.11 ಲಕ್ಷ ರೂ.ಗಳ ಸಾಲ ನೀಡಿ, ವರ್ಷಾಂತ್ಯಕ್ಕೆ ಒಂದು ಲಕ್ಷ ರೂ.ಗಳ ಲಾಭ ಸಂಪಾದಿಸಿ ಪ್ರತಿಭಾವಂತ ಯುವ ಸಹಕಾರಿಯೆಂದು ಗುರುತಿಸಿಕೊಂಡವರು.

31-03-2017ರಲ್ಲಿ ಅಂದರೆ 21 ವರ್ಷಗಳ ನಂತರದ 3941 ಸದಸ್ಯರು, ರೂ. 3 ಕೋಟಿ 1ಲಕ್ಷ ಶೇರು ಬಂಡವಾಳ, ರೂ. 68.44 ಕೋಟಿಗೂ ಹೆಚ್ಚು ಠೇವಣಿಗಳು, ರೂ. 69.68 ಕೋಟಿ ಸಾಲಗಳು, ರೂ. 84.03 ದುಡಿಯುವ ಬಂಡವಾಳ, ರೂ. 10.05 ಕೋಟಿ ಹೂಡಿಕೆ ಇದ್ದು, ರೂ. 1.86 ಕೋಟಿ ಲಾಭ ಗಳಿಸಿ, 32000 ಚದರ ಅಡಿಗಳ ನಿವೇಶನದಲ್ಲಿ 4 ಅಂತಸ್ತಿನ ಸ್ವಂತ ಕಟ್ಟಡ ನಿರ್ಮಾಣವಾಗುತ್ತಿರುವುದನ್ನು ಗಮನಿಸಿದರೆ ಶ್ರೀಯುತರ ಸಹಕಾರಿ ನಾಯಕತ್ವ ಹಾಗೂ ಅವರ ಆಡಳಿತ ಮಂಡಲಿಯವರ ಸಹಯೋಗ ಹಾಗೂ ಸಿಬ್ಬಂದಿಯವರ ದಕ್ಷತೆ ಅಭಿನಂದನಾರ್ಹ.

ಶ್ರೀಯುತರು ವಿಶೇಷವಾಗಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವು ನೀಡಿ ಅವರನ್ನು ದೇಶದ ಅಮೂಲ್ಯ ಆಸ್ತಿವಂತರನ್ನಾಗಿ ಮಾಡುವುದು ಯುವಕರನ್ನು ಉದ್ಯೋಗಸ್ಥರನ್ನಾಗಿ ಮಾಡುವುದಕ್ಕೆ ಸಹಕಾರಿಯ ಮೂಲಕ ಸಣ್ಣ ಕೈಗಾರಿಕೆಗಳಿಗೆ ಸಾಲ ನೀಡಿ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಉದಯ ಸಹಕಾರಿಯಲ್ಲಿ ಸಾಂಪ್ರದಾಯಿಕ ಠೇವಣಿ ಸ್ವೀಕರಿಸುವುದು, ಸಾಲಕೊಡುವುದು ಜೊತೆಗೆ ಚೀಟಿಗಳನ್ನು ನಡೆಸುವುದು ಒಂದು ವಿಶೇಷ ವ್ಯವಹಾರ, ಪ್ರಸ್ತುತ 27 ಚೀಟಿಗಳನ್ನು ನಡೆಸುತ್ತಿದ್ದಾರೆ.

ಇ ಸ್ಟಾಂಪಿಂಗ್ ವ್ಯವಹಾರ, ಸದಸ್ಯರಿಗೆ ಆರೋಗ್ಯ ನಿಧಿ, ಮರಣೋತ್ತರ ಪರಿಹಾರ ನಿಧಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಮಾಡುವುದು, ವಿಶೇಷವಾಗಿ ಸಾರ್ವಜನಿಕರಲ್ಲಿ ಸಂತೋಷ, ಸಂಸ್ಕಾರ ಹಾಗೂ ಜಾಗೃತಿಯನ್ನು ಹೆಚ್ಚಿಸುವ ಹಬ್ಬ ಹರಿದಿನಗಳ ಮತ್ತು ರಾಷ್ಟ್ರೀಯ ದಿನಗಳ ಆಚರಣೆಗೆ ಹೆಚ್ಚು ಒತ್ತು ನೀಡುವುದು ಇವರ ಸೇವೆಯ ವಿಶೇಷ.

ಹಿರಿಯ ನಾಗರೀಕರಿಗೆ ಯಾವಾಗಲೂ ಗೌರವಿಸುವ ಮತ್ತು ಅವರ ಕುಂದು-ಕೊರತೆಗಳಿಗೆ ಸ್ಪಂದಿಸುವ ಅದರಂತೆ ಸಹಕಾರಿಯ ಸಿಬ್ಬಂದಿಯವರಿಗೆ ಕೈತುಂಬ ಕೆಲಸ, ಉತ್ತಮ ವೇತನ ಶ್ರೇಣಿ ಮತ್ತು ಹಲವು ವಿಧವಾದ ಸೌಲಭ್ಯಗಳನ್ನು ನೀಡಿ ಅವರನ್ನು ಪ್ರೋತ್ಸಾಹಿಸುತ್ತಾ ಬಂದಿರುವ ಶ್ರೀಯುತರು ಒಂದು ಉತ್ತಮ ಸಮಾಜ ನಿರ್ಮಾಣಕ್ಕೆ ಒಬ್ಬ ಸಹಕಾರಿ ನಾಯಕ, ಒಬ್ಬ ಸಮಾಜ ಸೇವಕರು ಹೊಂದಿರಬಹುದಾದ ಎಲ್ಲ ಗುಣಗಳನ್ನು ಹೊಂದಿದ್ದಾರೆ.

ಶ್ರೀಯುತರು ಸಂಯುಕ್ತ ಸಹಕಾರಿಯಲ್ಲಿ ದಿನಾಂಕ 28-07-2017ರಂದು ನಡೆದ ಆಡಳಿತ ಮಂಡಲಿಯ ಚುನಾವಣೆಯಲ್ಲಿ ಬೆಂಗಳೂರು ವಿಭಾಗದಿಂದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

## ಶ್ರೀ ಎ ಆರ್ ಪ್ರಸನ್ನಕುಮಾರ್

ಶ್ರೀ ಎ ಆರ್ ಪ್ರಸನ್ನಕುಮಾರ್ ಇವರು ಮೂಲತಃ ತೀರ್ಥಹಳ್ಳಿಯವರಾಗಿದ್ದು, ದಿನಾಂಕ 19-06-1963ರಲ್ಲಿ ಶ್ರೀ ರಾಜಾಚಾರ್ ಮತ್ತು ಶ್ರೀಮತಿ ಮಧುರಾಬಾಯಿ ಇವರ 4ನೇ ಪುತ್ರರಾಗಿ ಜನನ. ಶ್ರೀಯುತರು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮುಗಿಸಿ 1985 ರಿಂದ ತೀರ್ಥಹಳ್ಳಿ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ತಾಂತ್ರಿಕ ಸಲಹೆಗಾರರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಆ ದಿನಗಳಿಂದಲೇ ತಮ್ಮನ್ನು ತಾವು ಸಾರ್ವಜನಿಕ ಜೀವನದಲ್ಲಿ ತೊಡಗಿಸಿ ಕೊಂಡಿರುತ್ತಾರೆ.



ತಮ್ಮ ವೃತ್ತಿ ಜೀವನದ ಜೊತೆಗೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ಉತ್ತಮ ಕೃಷಿಕರಾಗಿರುತ್ತಾರೆ, 2005ನೇ ಇಸವಿಯಿಂದ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದು, ಶ್ರೀಯುತರು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಶಿವಮೊಗ್ಗ ಸಹಕಾರಿಯ ಸ್ಥಾಪಕ ನಿರ್ದೇಶಕರಾಗಿ ನಂತರ ಉಪಾಧ್ಯಕ್ಷರಾಗಿ ಕಳೆದ 6 ವರ್ಷಗಳಿಂದ ಅಧ್ಯಕ್ಷರಾಗಿ ಸಂಸ್ಥೆಯನ್ನು ಜಿಲ್ಲೆಯ ಪ್ರತಿಷ್ಠಿತ ಸಂಸ್ಥೆಯನ್ನಾಗಿ ಮಾಡಲು ಶ್ರಮಿಸಿರುತ್ತಾರೆ.

ಸುಮಾರು 300 ಕೋಟಿ ರೂ.ಗಳ ವ್ಯವಹಾರ ನಡೆಸುವ ಹಾಸನ ವಲಯ ಅಡಿಕೆ ಬೆಳೆಗಾರರ ಸಂಘದ ನಿರ್ದೇಶಕರಾಗಿ ಕಳೆದ 7 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ತಾಲ್ಲೂಕು ವೆನಿಲಾ ಬೆಳೆಗಾರರ ಸಂಘದ ನಿರ್ದೇಶಕರಾಗಿರುತ್ತಾರೆ. ತೀರ್ಥಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾಗಿ ಕಾಲೇಜಿನ ಅಭಿವೃದ್ಧಿಯಲ್ಲಿ ತಮ್ಮ ಕೊಡುಗೆಯನ್ನು ನೀಡಿರುತ್ತಾರೆ. ಪ್ರಸ್ತುತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ನಿರ್ದೇಶಕರಾಗಿ ಬೆಂಗಳೂರು ವಿಭಾಗವನ್ನು ಪ್ರತಿನಿಧಿಸುತ್ತಿದ್ದಾರೆ.

## ಸೂಚಿತ ಕ್ರಿಯಾ ಯೋಜನೆ

(ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಹಾಗೂ ಸಂಯುಕ್ತ ಸಹಕಾರಿಯೂ ದೇಶದಲ್ಲಿಯೇ ಒಂದು ಉತ್ತಮ ಕಾರ್ಪೋರೇಟ್ ಮಾದರಿ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವಂತಾಗಲು ಈ ಕೆಳಗಿನ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಈಗಾಗಲೇ ಕಳುಹಿಸಲಾಗಿದೆ. ಮಾನ್ಯ ಸಹಕಾರಿಗಳ ಮುಕ್ತ ಅಭಿಪ್ರಾಯ ಸಂಗ್ರಹಣೆಗಾಗಿ ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ)

1. ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ, 1997 ಜಾರಿಗೆ ಬಂದದ್ದು 01–01–2001. ಈ ಕಾಯ್ದೆಯ ಮೂಲ ಆಶಯಗಳ ಪುನರ್ ಸ್ಥಾಪನೆಗೆ ಕ್ರಮವಿಡುವುದು.
2. ಸಂಯುಕ್ತ ಸಹಕಾರಿಗೆ ಒಂದು ಸುಸಜ್ಜಿತ ಕಟ್ಟಡ ನಿರ್ಮಾಣ. ಅದರಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಆಡಳಿತ ಮಂಡಲಿಯ ಸಭಾಂಗಣ, ತರಬೇತಿ ಸಭಾಂಗಣ, ಗ್ರಂಥಾಲಯ, ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಬೆಂಗಳೂರಿಗೆ ಬಂದಾಗ ಉಳಿದುಕೊಳ್ಳುವ ಸಲುವಾಗಿ ಅತಿಥಿ ಗೃಹ ನಿರ್ಮಾಣ ವ್ಯವಸ್ಥೆ.
3. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳ ಒಕ್ಕೂಟ ಸ್ಥಾಪಿಸುವುದು ಮತ್ತು ಸೌಹಾರ್ದ ಸಹಕಾರಿಗಳ ಕೆಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ರಾಜ್ಯದ ಎಲ್ಲಾ ಒಕ್ಕೂಟಗಳ ರಾಜ್ಯ ಮಟ್ಟದ ಒಕ್ಕೂಟ ಸ್ಥಾಪನೆಗೆ ಕ್ರಮವಿಡುವುದು.
4. ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗಳಿಗೆ ಸ್ವಂತ ನಿವೇಶನ ಹೊಂದುವುದು ಮತ್ತು ಕಟ್ಟಡ ನಿರ್ಮಾಣ ಮಾಡುವುದು.
5. ಪ್ರತಿ ಕಂದಾಯ ವಿಭಾಗದಲ್ಲಿ (ಬೆಳಗಾವಿ, ಕಲಬುರಗಿ, ಮೈಸೂರು ಹಾಗೂ ಬೆಂಗಳೂರು) ವಿಭಾಗದ ಪ್ರತಿ ಜಿಲ್ಲೆಯನ್ನು ಪ್ರತಿನಿಧಿಸುವ ಅವಕಾಶ ಕಲ್ಪಿಸುವ ವಿಭಾಗ ಉಸ್ತುವಾರಿ ಸಮಿತಿಯನ್ನು ರಚಿಸಿ, ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಹಾಗೂ ಬಲಸಂವರ್ಧನೆಗಾಗಿ ಶ್ರಮಿಸುವುದು.
6. ರಾಜ್ಯದ 25–26 ಜಿಲ್ಲೆಗಳಿಗೆ ಮಹಾದ್ವಾರವೆನಿಸಿರುವ ಪೂನಾ–ಬೆಂಗಳೂರು ರಸ್ತೆಯಲ್ಲಿ ನೆಲಮಂಗಲದ ಆಸುಪಾಸಿನಲ್ಲಿ ಬೆಂಗಳೂರಿಗೆ ಹತ್ತಿರದಲ್ಲಿ 5 ಎಕರೆ ಭೂಮಿಯಲ್ಲಿ ಉನ್ನತ ಮಟ್ಟದ ತರಬೇತಿ ಕೇಂದ್ರ, ವಸತಿ ಸಮುಚ್ಛಯ ಅತಿಥಿ ಗೃಹ, ಸಂಶೋಧನೆ ಹಾಗೂ ಅಧ್ಯಯನ ಕೇಂದ್ರಗಳನ್ನು ರಚಿಸುವುದು.
7. ಪ್ರತಿ ವಿಭಾಗಕ್ಕೆ ಒಂದು ಸೌಹಾರ್ದ ಸಹಕಾರಿ ನ್ಯಾಯಾಲಯ ರಚನೆ.
8. ಪ್ರತಿ ಜಿಲ್ಲೆಗೆ ಒಂದು ಸಂಯುಕ್ತ ಸಹಕಾರಿಯ ಕಛೇರಿ ಸ್ಥಾಪನೆ.
9. ಕೇಂದ್ರ ಸ್ಥಾನದಲ್ಲಿ ಮಾಹಿತಿ ಸಂರಕ್ಷಣಾ ಕೇಂದ್ರವನ್ನು ಸ್ಥಾಪಿಸುವುದು.
10. ಕ್ರೆಡಿಟ್ ಸೌಹಾರ್ದ ಸಹಕಾರಿಗಳಿಗೆ ಬಾಧಿಸುತ್ತಿರುವ ಆದಾಯ ತೆರಿಗೆ ತೊಂದರೆಗಳನ್ನು ಶಾಶ್ವತವಾಗಿ ಪರಿಹರಿಸಲು ಪ್ರಬಲವಾಗಿ ಪ್ರಯತ್ನಿಸುವುದು.
11. ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ನಿಯಮಗಳಲ್ಲಿರುವ ತೊಡಕುಗಳ ನಿವಾರಣೆಗೆ ಪ್ರಯತ್ನಿಸಿ, ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯದಂತೆ, ಸೌಹಾರ್ದ ಸಹಕಾರಿಗಳಿಗೆ ಸ್ವಾಯತ್ತತೆ ಉಳಿವಿಗಾಗಿ ಪ್ರಯತ್ನ.
12. ಠೇವಣಿ ಖಾತರಿ ಯೋಜನೆಯನ್ನು ಜಾರಿಗೊಳಿಸುವುದು (ಸದಸ್ಯರ ಡಿಪಾಸಿಟ್ ಇನ್ಶೂರೆನ್ಸ್ ಯೋಜನೆ).
13. ಸಹಕಾರಿಗಳಿಗಾಗಿ ಕಾಮನ್ ಸಾಫ್ಟ್‌ವೇರ್ ಸಿದ್ಧಪಡಿಸುವುದು.
14. ಕ್ರೆಡಿಟ್ ಸಹಕಾರಿ ಸಂಸ್ಥೆಗಳನ್ನು ಮಿನಿ ಬ್ಯಾಂಕಿನಂತೆ ಪರಿಗಣಿಸಲು ರಿಸರ್ವ್ ಬ್ಯಾಂಕಿನೊಂದಿಗೆ ವ್ಯವಹರಿಸುವುದು.
15. ಸೌಹಾರ್ದ ಸಹಕಾರಿಗಳ ಗುಣಾತ್ಮಕ ಹಾಗೂ ತಾಂತ್ರಿಕ ಬೆಳವಣಿಗೆಗೆ ಯೋಜನೆ ರೂಪಿಸಿ ಕಾರ್ಯಗತಗೊಳಿಸುವುದು.
16. ಸದಸ್ಯ ಸಹಕಾರಿಗಳಿಗೆ ಆಕರ್ಷಕ ವ್ಯವಹಾರ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಸಿದ್ಧಪಡಿಸುವುದು.
17. ಪತ್ತೇತರ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡುವುದು.
18. ಡಿಜಿಟಲ್ ಸೌಹಾರ್ದ ಸಹಕಾರಿಯಾಗಿ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವಂತೆ ಪ್ರಯತ್ನಿಸುವುದು.
19. 6 ತಿಂಗಳ ಅವಧಿಯ ದೂರ ಶಿಕ್ಷಣ ತರಬೇತಿ (Distance Courses).
20. ಸೌಹಾರ್ದ ಸಹಕಾರಿಗಳು ಸೂಚಿಸುವ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಪರ ಸೂಕ್ತ ವಿಷಯಗಳು.

**ಮಾನ್ಯ ಸಹಕಾರಿಗಳೇ,**

ಕ್ರಿಯಾ ಯೋಜನೆಗೆ ತಾವು ಸಮ್ಮತಿಸುವುದರ ಜೊತೆಗೆ ತಮ್ಮ ಅಭಿಪ್ರಾಯಗಳನ್ನು ಕಳುಹಿಸುವುದು. ವಾರ್ಷಿಕ ಸಾಮಾನ್ಯ ಸಭೆಯ ಒಪ್ಪಿಗೆ ಪಡೆದ ನಂತರವೇ ಅಧಿಕೃತವಾಗಿ ಈ ಕಾರ್ಯಗಳ ತ್ವರಿತ ಅನುಷ್ಠಾಕ್ಕೆ ಕ್ರಮವಿಡಲಾಗುವುದು. ಕ್ರಿಯಾ ಯೋಜನೆಗಳ ಅನುಷ್ಠಾನ ಸಂದರ್ಭದಲ್ಲಿ ವಿಶೇಷವಾಗಿ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳು ಉದಾರ ಧನ ಸಹಾಯ ನೀಡುವುದರ ಜೊತೆಗೆ ಸಕ್ರಿಯ ಸಹಕಾರವನ್ನು ನೀಡಲು ಕೋರಿದೆ.

| | |
|---|---|
| **ಸಹಿ/–** | **ಸಹಿ/–** |
| **ಜಗದೀಶ ಕವಟಗಿಮಠ** | **ಬಿ.ಹೆಚ್.ಕೃಷ್ಣಾರೆಡ್ಡಿ** |
| **ಉಪಾಧ್ಯಕ್ಷರು** | **ಅಧ್ಯಕ್ಷರು** |

**ಹಾಗೂ ಆಡಳಿತ ಮಂಡಲಿ ಸದಸ್ಯರು**

## ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಹಾಗೂ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಹಕಾರಿಗಳ ಸಂಪರ್ಕ ಸಭೆಗಳು, ನಡೆಸಿದ ಪತ್ರಿಕಾಗೋಷ್ಠಿ ಮತ್ತು ಗಣ್ಯರನ್ನು ಭೇಟಿ ಮಾಡಿ ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಮಾಲೋಚನೆಗಳನ್ನು ನಡೆಸಿದ ಛಾಯಾಚಿತ್ರಗಳು

### ಗಣ್ಯರ ಭೇಟಿ



ಕೇಂದ್ರದ ಸಂಸದೀಯ ವ್ಯವಹಾರ ಹಾಗೂ ರಾಸಾಯನಿಕ & ರಸಗೊಬ್ಬರ ಖಾತೆ ಸಚಿವರಾದ ಶ್ರೀ ಅನಂತಕುಮಾರ್ ಅವರನ್ನು ಸಂಯುಕ್ತ ಸಹಕಾರಿಯ 16ನೇ ಸಾಮಾನ್ಯ ಸಭೆಗೆ ಭಾಗವಹಿಸಲು ಮನವಿ.



ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸತ್ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪರವರ ಭೇಟಿ.



ಶ್ರೀ ಹೆಚ್. ಕೆ.ಪಾಟೀಲರವರನ್ನು ಭೇಟಿ ಮಾಡಿ, ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಪ್ರೋತ್ಸಾಹಿಸಲು ಹಾಗೂ ಅಭಿವೃದ್ಧಿಗೆ ಸಹಕರಿಸಲು ಮನವಿ.



ಕೆಓಎಫ್ ಅಧ್ಯಕ್ಷರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆರವರ ಬೀರೇಶ್ವರ ಕ್ರೆಡಿಟ್ ಸಹಕಾರಿಗೆ ಭೇಟಿ.



ಮಾಜಿ ಸಹಕಾರ ಸಚಿವರಾದ ಶ್ರೀ ಲಕ್ಷ್ಮಣ ಸವದಿರವರ ಭೇಟಿ.

## ಅಧಿಕಾರಿಗಳ ಭೇಟಿ



ಸಹಕಾರ ಇಲಾಖೆಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಶ್ರೀ ಮಹೇಶ್ವರ್‌ರಾವ್ ರವರನ್ನು ಭೇಟಿ ಮಾಡಿ, ಈಗಾಗಲೇ ಹೊರಡಿಸಿರುವ ಲೆಕ್ಕಪರಿಶೋಧನಾ ಶುಲ್ಕಕ್ಕೆ ಸಂಬಂಧಿಸಿದ ಸುತ್ತೋಲೆಯನ್ನು ಪರಿಷ್ಕರಿಸುವ ಕುರಿತು ಮನವಿ.



ಶ್ರೀ ಎಂ.ಸಿ. ಮುನಿಯಪ್ಪ, ಮಾನ್ಯ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ ಇವರ ಭೇಟಿ.



ಸಹಕಾರ ಲೆಕ್ಕ ಪರಿಶೋಧನಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್.ಎಲ್. ಪ್ರಶಾಂತ್ ಕುಮಾರ್, ನಿರ್ದೇಶಕರು ಹಾಗೂ ಶ್ರೀ ಪ್ರಕಾಶ್ ಮಜ್ಜಿಗೆ, ಅಪರ ನಿರ್ದೇಶಕರು, ಬೆಂಗಳೂರು ವಿಭಾಗೀಯ ಜಂಟಿ ನಿರ್ದೇಶಕರಾದ ಶ್ರೀ ಶಶಿಧರ ಹಾಗೂ ಬೆಳಗಾವಿ ಜಂಟಿ ನಿರ್ದೇಶಕರಾದ ಶ್ರೀ ಅಶೋಕ ಕುಮಾರ್ ರವರ ಭೇಟಿ



ಸಹಕಾರಿಗಳ ಅಪರ ನಿಬಂಧಕರಾದ ಶ್ರೀ ಕೆ.ಎಸ್.ನವೀನ್ ರವರ ಭೇಟಿ.



ಅಪೆಕ್ಸ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಮಣ ರೆಡ್ಡಿರವರ ಭೇಟಿ.



ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಪೀಠಾಧಿಕಾರಿಯಾದ ಶ್ರೀಮತಿ ಕೆ.ಎಂ. ಆಶಾರವರ ಭೇಟಿ.

## ವಿವಿಧ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳ ಭೇಟಿ



ವೇಮನ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿ., ಗೌರಿಬಿದನೂರು ಸಹಕಾರಿಗೆ ಭೇಟಿ. ಇದೇ ಸಂದರ್ಭದಲ್ಲಿ ಆಶೀರ್ವಾದ್ ಸೌಹಾರ್ದ ಸಹಕಾರಿ ನಿ., ಗೌರಿಬಿದನೂರು ಸಹಕಾರಿಗೆ ಭೇಟಿ ನೀಡಲಾಯಿತು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿತ್ತು.



ಶ್ರೀ ಗುರುಮಾತೆಯರ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿ ವತಿಯಿಂದ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರಿಗೆ ಸನ್ಮಾನ.



ಚಿಕ್ಕೋಡಿಯ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಭೇಟಿ.



ಅಭಯಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಸಹಕಾರಿಗೆ ಭೇಟಿ.



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಹಾಗೂ ವಿಜಯಪುರ ಜಿಲ್ಲೆಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಉಪ್ಪಿನರವರಿಗೆ ಅಭಿನಂದನೆ. ಈ ಸಂದರ್ಭದಲ್ಲಿ ಶ್ರೀ ಅರುಣ ಶಹಾಪುರ, ವಿಧಾನ ಪರಿಷತ್ ಸದಸ್ಯರು, ಶ್ರೀ ಎಂ.ಜಿ.ಪಾಟೀಲ, ಅಪರ ನಿಬಂಧಕರು (ನಿವೃತ್ತ) ಮತ್ತಿತ್ತರು ಉಪಸ್ಥಿತರಿದ್ದರು.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
**(ಐಎಸ್‌ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರಿ ಸಂಸ್ಥೆ)**
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph : 080–23378375–80 Email : souharda@souharda.coop

ಸಂಖ್ಯೆ : ಕರಾಸೌಸಂಸನಿ/ಸುತ್ತೋಲೆ/ಆ–4/2017–18 ದಿನಾಂಕ : 23.08.2017

**ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ**
**ಮುಖ್ಯ ಕಾರ್ಯನಿರ್ವಾಹಕರುಗಳಿಗೆ**

**ವಿಷಯ : ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ಹಾಗೂ ಲೆಕ್ಕಪರಿಶೋಧಕರ ಸಂಭಾವನೆ ಕುರಿತು.**

**ಉಲ್ಲೇಖ : 1) ದಿನಾಂಕ 20–04–2017ರ ಪತ್ರ ಸಂಖ್ಯೆ–ಆರ್‌ಎಸ್‌ಆರ್/ಎಕ್ಸ್‌ಎಂಸಿ/ಲೆ.ಪ/09/2017–18.**
**2) ದಿನಾಂಕ 16–03–2017ರ ಪತ್ರ ಸಂಖ್ಯೆ–ಎಡಿಎಫ್/ಎಡಿಸಿ/51/2013–14.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರು ಉಲ್ಲೇಖ 1ರ ಪತ್ರವನ್ನು ಬರೆದಿರುತ್ತಾರೆ. ಅದರಂತೆಯೇ ಎಲ್ಲಾ ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮಗಳು ಪಾಲಿಸುವುದು ಕಡ್ಡಾಯವಾಗಿದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 33(1)ರಂತೆ "ಪ್ರತಿಯೊಂದು ಸಹಕಾರಿಯು ಕನಿಷ್ಠ ವರ್ಷಕ್ಕೊಮ್ಮೆಯಾದರೂ ತನ್ನ ಲೆಕ್ಕಪತ್ರಗಳನ್ನು ಪ್ರತಿ ಸಹಕಾರಿ ವರ್ಷದ ಮುಕ್ತಾಯದ ನಂತರ ಮುಂಬರುವ ಸೆಪ್ಟೆಂಬರ್ ತಿಂಗಳ ಒಂದರೊಳಗಾಗಿ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿರುವ ಹಾಗೂ ಸದರಿ ಸಹಕಾರಿಯ ಸಾಮಾನ್ಯ ನಿಕಾಯದಿಂದ ನೇಮಕವಾದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪರಿಶೋಧನೆ ಮಾಡಿಸತಕ್ಕದ್ದು" ಎಂದು ಇರುತ್ತದೆ. ಆದರೆ, ರಾಜ್ಯದ ಕೆಲವು ಸೌಹಾರ್ದ ಸಹಕಾರಿಗಳು ಇದನ್ನು ಪಾಲನೆ ಮಾಡದೇ, ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆಯ ನಿರ್ದೇಶಕರಿಂದ ಅನುಮೋದನೆಗೊಂಡ ಲೆಕ್ಕಪರಿಶೋಧಕರ/ಸಂಸ್ಥೆಗಳಿಂದ ಸಹಕಾರಿಯ ಲೆಕ್ಕಪರಿಶೋಧನೆ ಮಾಡಿಸದೇ ತಮ್ಮ ಇಚ್ಛಾನುಸಾರ ಮಾಡಿಸುತ್ತಿದ್ದು, ಕಲಂ 33(1)ರ ವಿರುದ್ಧ ಲೆಕ್ಕಪರಿಶೋಧನೆ ಮಾಡಿಸಿದ್ದಲ್ಲಿ ಅದು ಅಸಿಂಧು ಮತ್ತು ಅನೂರ್ಜಿತವಾಗಲಿದ್ದು, ಅಂತಹ ಸಹಕಾರಿಗಳ ವಿರುದ್ಧ ಕಾನೂನು ಕ್ರಮಕ್ಕೆ ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ.

ಆದ್ದರಿಂದ, ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರಿಂದ ಅನುಮೋದನೆಗೊಂಡ ಲೆಕ್ಕಪರಿಶೋಧಕರಿಂದ/ಲೆಕ್ಕಪರಿಶೋಧನಾ ಸಂಸ್ಥೆಗಳಿಂದ ಸಾಮಾನ್ಯ ಸಭೆಯ ಅನುಮೋದನೆ ಪಡೆದು ಸಹಕಾರಿಯ ಲೆಕ್ಕಪರಿಶೋಧನೆ ಮಾಡಿಸಲು ಹಾಗೂ ತಾವು ಸಾಮಾನ್ಯ ಸಭೆಯಲ್ಲಿ ಆಯ್ಕೆ ಮಾಡಿಕೊಂಡ ಲೆಕ್ಕಪರಿಶೋಧಕರ ಮಾಹಿತಿಯನ್ನು ತಮ್ಮ ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರ ಕಛೇರಿಗೆ ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಸಲ್ಲಿಸಲು ಈ ಮೂಲಕ ಸೂಚಿಸಿದೆ ಹಾಗೂ ಈ ಕೆಳಗಿನ ಅಂಶಗಳನ್ನು ಗಮನಿಸಲು ಸೂಚಿಸಿದೆ.

1. ಸಾಮಾನ್ಯ ಸಭೆಯಲ್ಲಿ ನಿರ್ಧರಣೆ ಮಾಡುವ ಲೆಕ್ಕಪರಿಶೋಧನಾ ಸಂಭಾವನೆಯು ಪ್ರಯಾಣ ವೆಚ್ಚ, ವರದಿ ಸಿದ್ಧತೆ ವೆಚ್ಚಗಳನ್ನು ಒಳಗೊಂಡಿರುವುದು.
2. ಸಂಬಂಧಪಟ್ಟ ಲೆಕ್ಕಪರಿಶೋಧಕರು/ಲೆಕ್ಕಪರಿಶೋಧಿಸುವ ಸಂಸ್ಥೆ ಲೆಕ್ಕಪರಿಶೋಧನಾ ವರದಿ ಬಿಡುಗಡೆ ಮಾಡಿದ ನಂತರ, ಲೆಕ್ಕಪರಿಶೋಧನಾ ಸಂಭಾವನೆ ಪಾವತಿಸಲು ಸಂಸ್ಥೆಗೆ ಬಿಲ್ಲನ್ನು ನೀಡಿ ಸಂಸ್ಥೆಯಿಂದ ಸಂಭಾವನೆಯನ್ನು ನೇರವಾಗಿ ಪಡೆಯುವುದು ಮತ್ತು ಸಹಕಾರಿಗೆ ಅಧಿಕೃತ ರಶೀದಿಯನ್ನು ನೀಡತಕ್ಕದ್ದು.

ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿಯ ಉಲ್ಲೇಖ 2ರ ಪತ್ರದಂತೆ, ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) 2013ರ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ, ವಿಶೇಷ ರಾಜ್ಯ ಪತ್ರಿಕೆ ಶೀರ್ಷಿಕೆಯಡಿ ಅಧಿಸೂಚನೆ ಸಂಖ್ಯೆ : ಸಿಒ15ಸಿಎಲ್‌ಎಂ 2013 ದಿನಾಂಕ : 19–09–2013 ರಂತೆ ಸೌಹಾರ್ದ ಸಹಕಾರಿಗಳು ಸಹಕಾರಿ ವರ್ಷದ ಲೆಕ್ಕಪತ್ರಗಳನ್ನು ಪರಿಶೋಧಿಸಲು ಅಥವಾ ಲೆಕ್ಕಪರಿಶೋಧನೆ ಮಾಡಿಸಿದ್ದಲ್ಲಿ ಆ ಬಗ್ಗೆ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ನೀಡುವ ಸಂಭಾವನೆಯನ್ನು ಸಂಧಾನದ ಮೂಲಕ ಸ್ವತಂತ್ರ್ಯವಾಗಿ ತೀರ್ಮಾನಿಸಿಕೊಳ್ಳಲು ಇದ್ದ ಷರತ್ತನ್ನು ತೆಗೆದುಹಾಕಿರುತ್ತಾರೆ. ಇನ್ನುಳಿದಂತೆ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಸಹಕಾರಿಗಳು ನೀಡುವ ಸಂಭಾವನೆಯ ಮಾರ್ಗಸೂಚಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಸಹಕಾರಿಗಳು ಸಹಕಾರಿ ವರ್ಷದ ಲೆಕ್ಕಪತ್ರಗಳನ್ನು ಪರಿಶೋಧಿಸಲು ಅಥವಾ ಲೆಕ್ಕಪರಿಶೋಧನೆ ಮಾಡಿಸಿದ್ದಲ್ಲಿ ಆ ಬಗ್ಗೆ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ನೀಡುವ ಸಂಭಾವನೆಯನ್ನು ಸಹಕಾರಿ ಸಂಸ್ಥೆಯ ಸಾಮಾನ್ಯ ಸಭೆಯು ಸಹಕಾರ ಸಂಘಗಳ ಲೆಕ್ಕಪರಿಶೋಧಕರಿಂದ ದುಡಿಯುವ ಬಂಡವಾಳ ಮತ್ತು ವ್ಯಾಪಾರ ವಹಿವಾಟು ಆಧರಿಸಿ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳನ್ವಯ ನಿಗದಿಪಡಿಸಿಕೊಳ್ಳಲು ಅವಕಾಶವಿರುತ್ತದೆ. ಈ ಕುರಿತು ದಿನಾಂಕ 21.09.2013 ರಂದು ಲೆಕ್ಕಪರಿಶೋಧನಾ ನಿರ್ದೇಶಕರು ಮಾರ್ಗದರ್ಶಿಯನ್ನು ನೀಡಿರುತ್ತಾರೆ. ಈ ಮಾರ್ಗದರ್ಶಿಯ 2ನೇ ಖಂಡಿಕೆಯಲ್ಲಿ "ಲೆಕ್ಕಪರಿಶೋಧಕರ ಸಂಭಾವನೆಯನ್ನು ಸಂಧಾನದ ಮೂಲಕ ನಿಗದಿಪಡಿಸಿಕೊಳ್ಳಲು ಸಹಕಾರಿಗಳಿಗೆ ಅವಕಾಶ" ನೀಡಲಾಗಿತ್ತು.

**ದಿನಾಂಕ : 16.03.2017ರ ಮಾರ್ಗಸೂಚಿ ಸುತ್ತೋಲೆಯ ಮೂಲಕ ಸದರಿ ಅವಕಾಶವನ್ನು ಹಿಂಪಡೆಯಲಾಗಿರುತ್ತದೆ. ಆದರೆ, 2016–17ನೇ ಸಾಲಿನ ಲೆಕ್ಕಪರಿಶೋಧಕರನ್ನು 2015–16ನೇ ಸಾಲಿನ ಸಾಮಾನ್ಯ ಸಭೆಯಲ್ಲೇ ನೇಮಿಸಿಕೊಳ್ಳಲಾಗಿ, 2016–17ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಲೆಕ್ಕಪರಿಶೋಧಕರ ಸಂಭಾವನೆಯನ್ನು 2015–16ನೇ ಸಾಲಿನ ಸಾಮಾನ್ಯ ಸಭೆಯಲ್ಲೇ ನಿರ್ಧರಿಸಲಾಗಿರುತ್ತದೆ. ಆದ್ದರಿಂದ, 2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಈ ಸುತ್ತೋಲೆಯು ಅನ್ವಯಿಸುವುದಿಲ್ಲವೆಂದು ಸಂಯುಕ್ತ ಸಹಕಾರಿಯು ಈ ಮೂಲಕ ಸ್ಪಷ್ಟಪಡಿಸಿದೆ ಹಾಗೂ ಲೆಕ್ಕಪರಿಶೋಧನಾ ಸಂಭಾವನೆಯ ಕುರಿತ ಈ ಸುತ್ತೋಲೆಯನ್ನು ಮಾರ್ಪಡಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ತನ್ನ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ.**

ವಂದನೆಗಳೊಂದಿಗೆ

ಸಹಿ/–
**(ಶರಣಗೌಡ ಜಿ ಪಾಟೀಲ)**
ವ್ಯವಸ್ಥಾಪಕ ನಿರ್ದೇಶಕರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
**(ಐಎಸ್‌ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರಿ ಸಂಸ್ಥೆ)**
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph : 080–23378375–80 Email : souharda@souharda.coop

ಸಂಖ್ಯೆ : ಕರಾಸೌಸಂಸನಿ/ಸುತ್ತೋಲೆ/ಆ–5/2017–18 ದಿನಾಂಕ : 23.08.2017

**ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ**
**ಮುಖ್ಯ ಕಾರ್ಯನಿರ್ವಾಹಕರುಗಳಿಗೆ**

**ವಿಷಯ : ಸಹಕಾರಿಯ ಶಾಸನಬದ್ಧ ಕರ್ತವ್ಯಗಳ ಕುರಿತು.**

**ಉಲ್ಲೇಖ: ಸಂಯುಕ್ತ ಸಹಕಾರಿಯ ಸುತ್ತೋಲೆ ಸಂಖ್ಯೆ : ಕರಾಸೌಸಂಸನಿ/ಸುತ್ತೋಲೆ/ಆ–1/2016–17, ದಿನಾಂಕ: 28.04.2016**

ತಮ್ಮ ಸಹಕಾರಿಯ ಲೆಕ್ಕಪರಿಶೋಧನೆ ಮುಕ್ತಾಯವಾಗಿ ಸಾಮಾನ್ಯ ಸಭೆಯ ತಯಾರಿಯಲ್ಲಿರಬಹುದು. ಕೆಲವು ಸಹಕಾರಿಗಳು ಸಾಮಾನ್ಯ ಸಭೆಯನ್ನು ಸಹ ಮುಗಿಸಿರಬಹುದು. ಪ್ರತಿಯೊಂದು ಕಾಯ್ದೆಯನುಸಾರ ನಿರ್ವಹಿಸಲೇಬೇಕಾದ ಶಾಸನಾತ್ಮಕ ಕರ್ತವ್ಯಗಳನ್ನು ಉಲ್ಲೇಖದ ಸುತ್ತೋಲೆಯೊಡನೆ ತಮ್ಮ ಗಮನಕ್ಕೆ ತರಲಾಗಿತ್ತು. ಹಿಂದಿನ ಸಾಲಿನಲ್ಲಿ ಅನೇಕ ಸಹಕಾರಿಗಳು ಇವುಗಳನ್ನು ನಿಗದಿತ ಸಮಯದಲ್ಲಿ ನಿರ್ವಹಿಸಿಲ್ಲದ ಕುರಿತು ದೂರುಗಳು ಸಲ್ಲಿಕೆಯಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಈ ಅಂಶಗಳ ಕುರಿತು ಇನ್ನೊಮ್ಮೆ ಗಮನ ಹರಿಸಲು ಸೂಚಿಸಿದೆ.

**1. ಲೆಕ್ಕ ಪರಿಶೋಧನೆ :**

ಅ) ಲೆಕ್ಕಪರಿಶೋಧನೆ ನಡೆಸಲು ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನೇಮಕವಾದ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ನಡೆಸಬೇಕು.

ಆ) ಲೆಕ್ಕಪರಿಶೋಧನಾ ವರದಿಯನ್ನು ಸೆಪ್ಟೆಂಬರ್ 1, 2017ರೊಳಗೆ ಸಂಯುಕ್ತ ಸಹಕಾರಿಗೆ, ಲೆಕ್ಕಪರಿಶೋಧನಾ ನಿರ್ದೇಶಕರಿಗೆ, ಸಂಬಂಧಿಸಿದ ರಿಜಿಸ್ಟ್ರಾರರಿಗೆ ಲೆಕ್ಕಪರಿಶೋಧಕರು ಸಲ್ಲಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**2. ಸಾಮಾನ್ಯ ಸಭೆ :**

ಅ) ಕಾಯ್ದೆ ಕಲಂ 30(1)ರಂತೆ ಸೆಪ್ಟೆಂಬರ್ 25, 2017 ರೊಳಗಾಗಿ ಎಲ್ಲಾ ಸಹಕಾರಿಗಳೂ ತಮ್ಮ ಸಾಮಾನ್ಯ ಸಭೆ ನಡೆಸತಕ್ಕದ್ದು.

ಆ) ಸಾಮಾನ್ಯ ಸಭೆಗೆ ಸ್ಪಷ್ಟ ಹದಿನೈದು ದಿನಗಳ, ಆದರೆ ಉಪವಿಧಿಗಳ ತಿದ್ದುಪಡಿ ಸಂದರ್ಭದಲ್ಲಿ ಸ್ಪಷ್ಟ ಇಪ್ಪತ್ತು ದಿನಗಳ ಮುಂಚೆ ಸೂಚನಾ ಪತ್ರವನ್ನು ಪ್ರತಿಯೊಬ್ಬ ಅರ್ಹ ಸದಸ್ಯನಿಗೂ ಕಳುಹಿಸಿಕೊಡತಕ್ಕದ್ದು ಹಾಗೂ ಕಾರ್ಯ ಕ್ಷೇತ್ರದಲ್ಲಿ ಹೆಚ್ಚು ಪರಿಚಲನೆಯಲ್ಲಿರುವ ವೃತ್ತಪತ್ರಿಕೆಯಲ್ಲಿ ಸೂಚನಾ ಪತ್ರ ಕಳುಹಿಸಿದ ದಿನವೇ ಸಂಕ್ಷಿಪ್ತವಾಗಿ ಪ್ರಕಟಿಸತಕ್ಕದ್ದು.

ಇ) ಮುಂದಿನ ಸಾಲಿನ ಲೆಕ್ಕ ಪರಿಶೋಧಕರನ್ನಾಗಿ ಲೆಕ್ಕಪರಿಶೋಧನಾ ನಿರ್ದೇಶಕರು ಇಲಾಖಾ ವೆಬ್‌ಸೈಟ್ (www.sahakaradarpana.kar.nic.in) ನಲ್ಲಿ ಪ್ರಕಟಿಸಿದ ಪಟ್ಟಿಯಲ್ಲಿರುವವರನ್ನು ಸಾಮಾನ್ಯ ಸಭೆಯೇ ನೇಮಕ ಮಾಡತಕ್ಕದ್ದು. ಹಾಗೇ ನೇಮಕಗೊಂಡ ಲೆಕ್ಕ ಪರಿಶೋಧಕರಿಗೆ ಸಾಮಾನ್ಯ ಸಭೆ ಮುಗಿದ 7 ದಿನದೊಳಗೆ ನೇಮಕಾತಿ ಪತ್ರ ನೀಡತಕ್ಕದ್ದು. ಅಂತಹ ಪತ್ರದ ಪ್ರತಿಯನ್ನು ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಸಹ ಕಳುಹಿಸತಕ್ಕದ್ದು.

ಈ) ಸಾಮಾನ್ಯ ಸಭೆಯ ನೋಟೀಸಿನ ಪ್ರತಿಯೊಂದನ್ನು ಸದಸ್ಯರಿಗೆ ಕಳುಹಿಸುವಾಗ ಸಂಯುಕ್ತ ಸಹಕಾರಿಗೂ ಕಳುಹಿಸತಕ್ಕದ್ದು.

ಉ) ಸಾಮಾನ್ಯ ಸಭೆ ಮುಗಿದ 30 ದಿನಗಳಲ್ಲಿ ಸಭೆಯ ನಡವಳಿಗಳನ್ನು ಹಾಗೂ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಸಂಯುಕ್ತ ಸಹಕಾರಿಗೆ, ತಮ್ಮ ವ್ಯಾಪ್ತಿಯ ರಿಜಿಸ್ಟ್ರಾರರಿಗೆ ಹಾಗೂ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಕಳುಹಿಸತಕ್ಕದ್ದು.

ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ ನಿಯಮ 6ಸಿ ಯಲ್ಲಿ ವಿವರವಾಗಿ ಹೇಳಿದ್ದು, ಅದನ್ನು ಪಾಲಿಸಲು ಸೂಚಿಸಿದೆ.

**3. ಸಂಯುಕ್ತ ಸಹಕಾರಿಗೆ ಮತ್ತು ರಿಜಿಸ್ಟ್ರಾರರಿಗೆ ಮಾಹಿತಿ ಸಲ್ಲಿಸುವುದು :**

ಸೆಪ್ಟೆಂಬರ್ 30ರೊಳಗೆ ತಮ್ಮ ಸಹಕಾರಿಯ ಹಿಂದಿನ ಸಹಕಾರಿ ವರ್ಷದ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿ, ಮುಂದಿನ ಸಹಕಾರಿ ವರ್ಷದ ಕಾರ್ಯಕ್ರಮಗಳು, ಲೆಕ್ಕಪರಿಶೋಧನಾ ವರದಿ, ಸಾಮಾನ್ಯ ಸಭೆಯ ವರದಿ, ಲಾಭಾಂಶ ವಿಲೇವಾರಿ ವಿವರ, ನಿರ್ದೇಶಕರುಗಳ ಪಟ್ಟಿ ಮತ್ತು ಅವರ ಪದಾವಧಿ, ಉಪವಿಧಿ ತಿದ್ದುಪಡಿ ಇದ್ದಲ್ಲಿ ಅದರ ವಿವರ, ಚುನಾವಣೆ ನಡೆಸಿದ್ದಲ್ಲಿ ಅದರ ವಿವರ ಇತ್ಯಾದಿ ಕಾಯ್ದೆ ಕಲಂ 34ರಲ್ಲಿ ಹೇಳಿರುವ ಮಾಹಿತಿಗಳನ್ನು ತಮ್ಮ ವ್ಯಾಪ್ತಿಯ ರಿಜಿಸ್ಟ್ರಾರರಿಗೆ ಮತ್ತು ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.

ಅನೇಕ ಸಹಕಾರಿಗಳು ಇದನ್ನು ಸರಿಯಾಗಿ ಸಲ್ಲಿಸುತ್ತಿಲ್ಲ. ಆದ್ದರಿಂದ, ಕಲಂ 34ರಡಿ ಮಾಹಿತಿ ಸಲ್ಲಿಸಲು ಮಾದರಿಯನ್ನು ಲಗತ್ತಿಸಿದೆ. ಇದನ್ನು ಅಗತ್ಯ ಲಗತ್ತುಗಳೊಡನೆ ಸೆಪ್ಟೆಂಬರ್ 30ರೊಳಗೆ ಸಂಯುಕ್ತ ಸಹಕಾರಿಗೆ ಮತ್ತು ಸಂಬಂಧಿಸಿದ ನಿಬಂಧಕರಿಗೆ ಸಲ್ಲಿಸಲು ಸೂಚಿಸಿದೆ. ಈಗಾಗಲೇ ಲೆಕ್ಕಪರಿಶೋಧನಾ ವರದಿ/ ಸಾಮಾನ್ಯ ಸಭೆಯ ನಡವಳಿ/ ಚುನಾವಣಾ ವರದಿಗಳನ್ನು ಸಲ್ಲಿಸಿದ್ದರೂ ಸಹ ಕಲಂ 34ರ ಮಾಹಿತಿಯೊಡನೆ ಅಗತ್ಯ ದಾಖಲೆಗಳನ್ನು ಇನ್ನೊಮ್ಮೆ ಲಗತ್ತಿಸಬೇಕು.

**4. ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ :**

ಅ) ಕಾಯ್ದೆ ಕಲಂ 62 ಹಾಗೂ ಸಂಯುಕ್ತ ಸಹಕಾರಿಯ ಉಪವಿಧಿ 38ರಂತೆ ಪ್ರತಿ ಸಹಕಾರಿಯು ತನ್ನ ದುಡಿಯುವ ಬಂಡವಾಳಕ್ಕನುಗುಣವಾಗಿ ಸೆಪ್ಟೆಂಬರ್ 30ರೊಳಗೆ ಸಂಯುಕ್ತ ಸಹಕಾರಿಗೆ ಪಾವತಿ ಮಾಡತಕ್ಕದ್ದು ಮತ್ತು ಕಾಯ್ದೆ ಕಲಂ 62ಎ ರಂತೆ ಶಿಕ್ಷಣ ನಿಧಿಯನ್ನು ಸಾಮಾನ್ಯ ಸಭೆ ಮುಗಿದ ಮೂವತ್ತು ದಿನಗಳೊಳಗೆ ಪಾವತಿ ಮಾಡತಕ್ಕದ್ದು. ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಗಳನ್ನು ಪ್ರತ್ಯೇಕ ಡಿಡಿಗಳ ಮೂಲಕ ಪಾವತಿಸಿ.

ಆ) ಸಂಯುಕ್ತ ಸಹಕಾರಿಯಿಂದ ಕೋರಿಕೆ ಬರುವುದಕ್ಕೆ ಕಾಯದೇ, ನಿಗದಿತ ಸಮಯದಲ್ಲಿ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿಗಳನ್ನು ಪಾವತಿಸಿ ಮುಂದಿನ ದಿನದಲ್ಲಿ ತಮ್ಮ ಸಹಕಾರಿಯು ವಿವಿಧ ಅನರ್ಹತೆಗೊಳಗಾಗುವುದನ್ನು ತಪ್ಪಿಸಿ.

5. **ನೆನಪಿನಲ್ಲಿಡಬೇಕಾದ ಪ್ರಮುಖ ದಿನಗಳು :**

| | |
|---|---|
| ಲೆಕ್ಕಪರಿಶೋಧನಾ ವರದಿ ಸಲ್ಲಿಸಲು ಅಂತಿಮ ದಿನ | ಸೆಪ್ಟೆಂಬರ್ 1 |
| ವಾರ್ಷಿಕ ಸಾಮಾನ್ಯ ಸಭೆ ನಡೆಸಲು ಅಂತಿಮ ದಿನ | ಸೆಪ್ಟೆಂಬರ್ 25 |
| ಕಲಂ 34ರಡಿ ಮಾಹಿತಿ/ ವರದಿ ಸಲ್ಲಿಸಲು ಹಾಗೂ ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ ಪಾವತಿಸಲು ಅಂತಿಮ ದಿನ | ಸೆಪ್ಟೆಂಬರ್ 30 |
| ಲೆಕ್ಕಪರಿಶೋಧಕರಿಗೆ ನೇಮಕಾತಿ ಪತ್ರ ಕಳುಹಿಸಲು ಅಂತಿಮ ದಿನ | ಸಾಮಾನ್ಯ ಸಭೆಯಿಂದ 7 ದಿನಗಳು |
| ಸಾಮಾನ್ಯ ಸಭೆಯ ನಡವಳಿ ಕಳುಹಿಸಲು, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಕಳುಹಿಸಲು ಹಾಗೂ ಸಂಯುಕ್ತ ಸಹಕಾರಿಗೆ ಶಿಕ್ಷಣ ನಿಧಿ ಪಾವತಿಸಲು ಅಂತಿಮ ದಿನ | ಸಾಮಾನ್ಯ ಸಭೆಯಿಂದ 30 ದಿನಗಳು |

ಸಹಿ/–
**(ಶರಣಗೌಡ ಜಿ ಪಾಟೀಲ)**
ವ್ಯವಸ್ಥಾಪಕ ನಿರ್ದೇಶಕರು

**ಗಮನಿಸಿ :** ಸಂಯುಕ್ತ ಸಹಕಾರಿಯು ಪ್ರತಿ ಸದಸ್ಯ ಸಹಕಾರಿಗೂ ಕೂಡ ಸದಸ್ಯತ್ವ ಸಂಖ್ಯೆಯನ್ನು ನೀಡಿದೆ. ತಮ್ಮ ಸಹಕಾರಿಯ ಸದಸ್ಯತ್ವ ಸಂಖ್ಯೆಯನ್ನು ತಮಗೆ ಕಳುಹಿಸುವ ಎಲ್ಲಾ ಪತ್ರ ವ್ಯವಹಾರದ ಲಕೋಟೆಯ ಮೇಲೆ ವಿಳಾಸದ ಮೊದಲು ಬರೆದಿರುತ್ತದೆ. ಸಂಯುಕ್ತ ಸಹಕಾರಿಯ ಜೊತೆ ವ್ಯವಹರಿಸುವ ಸಂದರ್ಭಗಳಲ್ಲಿ ತಮ್ಮ ಸಹಕಾರಿಯ ಸದಸ್ಯತ್ವ ಸಂಖ್ಯೆಯನ್ನು ತಪ್ಪದೇ ನಮೂದಿಸಲು ಸೂಚಿಸಿದೆ.

## ಸಹಕಾರಿಯ ಲೆಟರೆಡ್

ಸಂಖ್ಯೆ: ದಿನಾಂಕ :

**ಮಾನ್ಯ ವ್ಯವಸ್ಥಾಪಕ ನಿರ್ದೇಶಕರು**
**ಸಂಯುಕ್ತ ಸಹಕಾರಿ /**
**ಮಾನ್ಯ ಸಹಕಾರಿಗಳ ...... ನಿಬಂಧಕರು**

**ವಿಷಯ : ಕಾಯ್ದೆ ಕಲಂ 34ರಡಿ ಮಾಹಿತಿ.**

**ಕಾಯ್ದೆ ಕಲಂ 34ರಡಿ ಸಲ್ಲಿಸಬೇಕಾದ ಮಾಹಿತಿಗಳನ್ನು ಈ ಮೂಲಕ ಸಲ್ಲಿಸಿದೆ.**

| | | |
|---|---|---|
| ಎ. | ಹಿಂದಿನ ವರ್ಷದ ಚಟುವಟಿಕೆಗಳ ವಾರ್ಷಿಕ ವರದಿ | ಲಗತ್ತಿಸಿದೆ (ಅನುಬಂಧ) |
| | ಮತ್ತು ಮುಂದಿನ ವರ್ಷದ ಕಾರ್ಯಕ್ರಮ | ಲಗತ್ತಿಸಿದೆ (ಅನುಬಂಧ) |
| ಬಿ. | ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳು (ಲೆಕ್ಕಪರಿಶೋಧಕರಿಂದ ದೃಢೀಕೃತ ಜಮಾ–ಖರ್ಚು ತಃಖ್ತೆ, ಆದಾಯ–ವೆಚ್ಚ ತಃಖ್ತೆ ಹಾಗೂ ಆಸ್ತಿ–ಜವಾಬ್ದಾರಿ ತಃಖ್ತೆಗಳು) | ಲಗತ್ತಿಸಿದೆ (ಅನುಬಂಧ) |
| ಸಿ. | ಸಾಮಾನ್ಯ ಸಭೆಯು ಅನುಮೋದಿಸಿದ ಹೆಚ್ಚುವರಿ ಅಥವಾ ಉಳಿತಾಯ ವಿಲೇವಾರಿಯ ಯೋಜನೆ | ಲಗತ್ತಿಸಿದೆ (ಅನುಬಂಧ)/ ಸಹಕಾರಿಯು ನಷ್ಟದಲ್ಲಿರುವ ಕಾರಣ ಅನ್ವಯಿಸುವುದಿಲ್ಲ. |
| ಡಿ. | ಸಹಕಾರಿಯ ಉಪವಿಧಿ ತಿದ್ದುಪಡಿಗಳ ಪಟ್ಟಿ | ಲಗತ್ತಿಸಿದೆ (ಅನುಬಂಧ)/ ಯಾವುದೇ ತಿದ್ದುಪಡಿಗಳನ್ನು ಮಾಡಿಕೊಂಡಿರುವುದಿಲ್ಲ. |
| ಇ. | ಸಾಮಾನ್ಯ ಸಭೆಯನ್ನು ನಡೆಸಿದ ದಿನಾಂಕ ಮತ್ತು | ಸಾಮಾನ್ಯ ಸಭೆಯನ್ನು ದಿನಾಂಕ ___ ರಂದು ___ ಸ್ಥಳದಲ್ಲಿ ನಡೆಸಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ. ಸಾಮಾನ್ಯ ಸಭೆಗೆ ಅರ್ಹ ಸದಸ್ಯರು ___ ಭಾಗವಹಿಸಿದ ಸದಸ್ಯರು___ ಕೋರಂಗೆ ಅಗತ್ಯ ಸಂಖ್ಯೆ ___ |
| | ಅಗತ್ಯವಿದ್ದಾಗ ಚುನಾವಣೆ ನಡೆಸಿದ ದಿನಾಂಕದ ಬಗ್ಗೆ ಘೋಷಣೆ | ಪ್ರಸಕ್ತ ಸಾಲಿನಲ್ಲಿ ಚುನಾವಣೆ ಇರುವುದಿಲ್ಲ / ದಿನಾಂಕ ___ ರಂದು ಚುನಾವಣೆಯನ್ನು ನಡೆಸಲಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ. |
| ಎಫ್. | ನಿರ್ದೇಶಕರುಗಳ ಪಟ್ಟಿ ಮತ್ತು ಪದಾವಧಿ | ಲಗತ್ತಿಸಿದೆ (ಅನುಬಂಧ) |
| | | |

ವಂದನೆಗಳೊಂದಿಗೆ,

**ಮುಖ್ಯಕಾರ್ಯನಿರ್ವಾಹಕ**

### ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರಿಗೆ ಅಭಿನಂದನೆ

## ಸಂಯುಕ್ತ ಸಹಕಾರಿಯ ಮತ್ತು ಸೌಹಾರ್ದ ಸಹಕಾರಿಗಳ ಭಾಂದವ್ಯ ಅಭಿವೃದ್ಧಿಗೆ ಆದ್ಯತೆ : ಶ್ರೀ ಎ.ಆರ್.ಪ್ರಸನ್ನಕುಮಾರ್

**ಶಿವಮೊಗ್ಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಶ್ರೀ ಎ.ಆರ್.ಪ್ರಸನ್ನ ಕುಮಾರ್ ಇವರನ್ನು ಆಯ್ಕೆ ಮಾಡಿದ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿಯು ವಿಪ್ರ ಸಭಾಭವನದಲ್ಲಿ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರಿಗೆ ಹಾಗೂ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ನೂತನ ಆಡಳಿತ ಮಂಡಲಿಯವರಿಗೆ ಅಭಿನಂದನೆಯನ್ನು ಆಯೋಜಿಸಿತ್ತು. ಶ್ರೀ ಶಂಕರ್ ಶಾನ್‌ಭಾಗ್, ಶ್ರೀ ಮಹಾಬಲೇಶ್ವರ್, ಶ್ರೀ ಅರಸಾಳು ರಂಗನಾಥ್, ಶ್ರೀಮತಿ ಶಾಂತ ಸುರೇಂದ್ರ ಇವರುಗಳು ಆಯ್ಕೆಯಾದ ನಿರ್ದೇಶಕರಿಗೆ ಪುಷ್ಪ ಹಾರ ನೀಡಿ ಅಭಿನಂದಿಸಿದರು. ಅಭಿನಂದಿತರ ಪರವಾಗಿ ಶ್ರೀ ಶಂಕರ್ ಶಾನ್‌ಭಾಗ್ ಮಾತನಾಡಿದರು.

ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ಸಹಕಾರಿಗಳಿಗೆ ಆಗಬೇಕಾದ ಕೆಲಸಗಳ ಬಗ್ಗೆ ಆಸಕ್ತಿ ವಹಿಸಿ ಮಾಡಿಸಿ ಕೊಡಬೇಕೆಂದು ತಿಳಿಸಿದರಲ್ಲದೇ ಕಾಯ್ದೆಯಲ್ಲಿಯೂ ಕೆಲವು ಬದಲಾವಣೆಗಳನ್ನು ಮಾಡಿ ಸಹಕಾರಿಗಳಿಗೆ ಕಡಿವಾಣ ಹಾಕಿದ್ದು, ಈ ಬಗ್ಗೆಯೂ ಗಮನಹರಿಸಬೇಕೆಂದು ವಿನಂತಿಸಿದರು. ರಾಮಾನುಜ ಸೌಹಾರ್ದ, ಸಿರಿ ಸೌಹಾರ್ದ, ಛಾಯಾಗ್ರಾಹಕರ ಸೌಹಾರ್ದ, ಸುಭಾಷ್ ಸೌಹಾರ್ದ, ಕಲಾವಿದರ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವಿಭಾಗಾಧಿಕಾರಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ರವಿಕುಮಾರ.ಹೆಚ್.ವಿ. ಇವರಿಗೆ ಅಭಿನಂದಿಸಲಾಯಿತು.

ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಗೆ ಆಯ್ಕೆಯಾದ ನಿರ್ದೇಶಕರೂ ಆದ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರು ವಿವಿಧ ಸಹಕಾರಿಗಳಿಂದ ಅಭಿನಂದನೆ ಸ್ವೀಕರಿಸಿದರು. ಸಂಯುಕ್ತ ಸಹಕಾರಿಯ ಮತ್ತು ಸೌಹಾರ್ದ ಸಹಕಾರಿಗಳ ಭಾಂದವ್ಯ ಮತ್ತಷ್ಟು




ಉತ್ತಮಗೊಳ್ಳುವಲ್ಲಿ ಶ್ರಮಿಸುವುದಾಗಿ ತಿಳಿಸಿದರು ಹಾಗೂ ಸರ್ಕಾರವು ಅನೇಕ ವಿಧದಲ್ಲಿ ನಿಯಮ ರೂಪಿಸಿ, ಸಹಕಾರಿಯ ಸ್ವಾಯತ್ತತೆಗೆ ಧಕ್ಕೆ ತಂದಿರುವ ಬಗ್ಗೆ ಆಡಳಿತ ಮಂಡಲಿಯಲ್ಲಿ ವಿಷಯ ಮಂಡಿಸಿ, ಸಹಕಾರಿಗಳನ್ನು ಸಂಘಟಿಸಿ, ಕಾಯ್ದೆಯ ಪ್ರತಿಕೂಲ ಕಲಂಗಳ ನಿವಾರಣೆಗೆ ಹೋರಾಡುವುದಾಗಿ ತಿಳಿಸಿದರು.

ಸೌಹಾರ್ದ ನಿಯಮ ಮೀರಿ ಯಾವುದೇ ಸೌಹಾರ್ದ ಸಹಕಾರಿಗಳು ಆಡಳಿತ ನಡೆಸಬಾರದು, ರಾಜ್ಯದಲ್ಲಿ ಉತ್ತಮ ಆಡಳಿತ ನಡೆಸಿ ಮಾದರಿ ಸೌಹಾರ್ದ ಸಹಕಾರಿಗಳಾಗಿ ಕಾರ್ಯನಿರ್ವಹಿಸಬೇಕೆಂದು ವಿನಂತಿಸಿದರು. ಕೇಂದ್ರ ಸರ್ಕಾರದ ಸುತ್ತೋಲೆ ಜಿಎಸ್‌ಟಿ ಬಗ್ಗೆ ಸಾಗರದ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ್‌ರವರು ಸಹಕಾರಿಗಳಿಗೆ ಪ್ರಾತ್ಯಕ್ಷಿಕೆ ಮೂಲಕ ವಿವರ ನೀಡಿ, ಕಾಯ್ದೆಯನ್ನು ಸಹಕಾರಿಯ ವ್ಯವಹಾರದಲ್ಲಿ ಅಳವಡಿಸಿಕೊಳ್ಳಲು ತಿಳಿಸಿದರು.

ಶ್ರೀಮತಿ ವಾರಿಜಾ ಜಗದೀಶ್‌ರವರು ಸ್ವಾಗತ ಕೋರಿದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್.ಎ.ನಾರಾಯಣ ಮೂರ್ತಿರವರು ವಂದನೆ ಸಲ್ಲಿಸಿದರು. ಕು॥ ಸಂಗೀತಾ ಹೆಗಡೆ ಇವರು ಪ್ರಾರ್ಥನೆ ಹಾಗೂ ಶ್ರೀಮತಿ ಎಂ.ಪಿ.ಮಾಲತಿಯವರು ಕಾರ್ಯಕ್ರಮ ನಿರೂಪಣೆ ಮಾಡಿದರು.

### ಕಾನೂನು ಅರಿವು ಮಾಹಿತಿ ಕಾರ್ಯಗಾರ

**ಕಡಬ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಸಹ ಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಇದರ ವತಿಯಿಂದ ನಡೆಯುತ್ತಿರುವ ಮಹಿಳಾ ಸಬಲೀಕರಣ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಉಚಿತ ಟೈಲರಿಂಗ್ ತರಬೇತಿಯ ಶಿಬಿರಾರ್ಥಿಗಳಿಗೆ "ಕಾನೂನು ಅರಿವು ಮಾಹಿತಿ ಕಾರ್ಯಾಗಾರ"ವನ್ನು ದಿನಾಂಕ 18.08.2017ರಂದು ಕಡಬದ ಸೌರಭ ಟವರ್ಸ್‌ನ ಶ್ರೀ ಮಹಾಲಿಂಗೇಶ್ವರ ಕೌಶಲ್ಯ ತರಬೇತಿ ಕೇಂದ್ರದಲ್ಲಿ ನಡೆಯಿತು. ಕಾರ್ಯಕ್ರಮವನ್ನು ನಿವೃತ ಶಿಕ್ಷಕರಾದ ಶ್ರೀ ಸಾಂತಪ್ಪ ಗೌಡ ಪಿಜಕ್ಕಳರವರು ಉದ್ಘಾಟಿಸಿ ಶುಭಹಾರೈಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಕಡಬದ ವಕೀಲರಾದ ಶ್ರೀ ಪ್ರಶಾಂತ್ ಪಂಜೋಡಿಯವರು ಮಾಹಿತಿ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಸಹಕಾರಿಯ ಸಿಬ್ಬಂದಿಯಾದ ಶ್ರೀ ಉಮೇಶ್.ಕೆ.ರವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸರಸ್ವತಿ ಸಹಕಾರಿಯ ಕಡಬ ಶಾಖಾ ವ್ಯವಸ್ಥಾಪಕರಾದ ಶ್ರೀ ಪ್ರಕಾಶ್ಚಂದ್ರ ರೈ ನಿರೂಪಿಸಿ, ಮಹಾಲಿಂಗೇಶ್ವರ ತರಬೇತಿ ಕೇಂದ್ರದ ಮಾಲೀಕರಾದ ಶ್ರೀಮತಿ ಶಶಿಪ್ರಭಾ ಎಂ. ಶೆಟ್ಟಿರವರು ಸ್ವಾಗತಿಸಿದರು. ಶಿಬಿರಾರ್ಥಿ ಪ್ರೀತಾ ಗಣೇಶ್‌ರವರು ಧನ್ಯವಾದಗೈದರು.

# ಸಂಯುಕ್ತ ಸಹಕಾರಿಯ ಮುಂಬರುವ ಕಾರ್ಯಕ್ರಮಗಳು

| ಕ್ರ.ಸಂ. | ದಿನಾಂಕ | ಸ್ಥಳ | ಕಾರ್ಯಕ್ರಮಗಳ ವಿವರ |
|---|---|---|---|
| 1. | 06.09.2017 | ಹೋಟೆಲ್ ಪಾರಿಜಾತ ಗೇಟ್‌ವೇ, ರಾಜಾಜಿನಗರ, ಬೆಂಗಳೂರು. | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ ಮತ್ತು ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಕುರಿತು ಉಪನ್ಯಾಸ. |
| 2. | 06.09.2017 | ಮಧ್ಯಾಹ್ನ 3.00 ಗಂಟೆಗೆ ಪಾರಿಜಾತ ಗೇಟ್‌ವೇ, ಬೆಂಗಳೂರು | ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದ ಪುನರ್ ಸ್ಥಾಪನೆ, ಸೌಹಾರ್ದ ಸಹಕಾರಿ ಅಧಿನಿಯಮಕ್ಕೆ ಆಗಬೇಕಾದ ಅಗತ್ಯ ತಿದ್ದುಪಡಿ, ಕೇಂದ್ರ ಕಾಯ್ದೆಗಳಿಂದ ಆಗುತ್ತಿರುವ ತೊಂದರೆಗಳು, ಆದಾಯ ತೆರಿಗೆ ಹಾಗೂ ಜಿಎಸ್‌ಟಿ ಕುರಿತು ಚರ್ಚಿಸಲು ಸೌಹಾರ್ದ ಸಹಕಾರಿಗಳು ಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು, ಲೆಕ್ಕಪರಿಶೋಧಕರು, ನ್ಯಾಯವಾದಿಗಳ ಸಭೆಯನ್ನು ಕರೆಯಲಾಗಿದೆ. |
| 3. | 07.09.2017 | ಹೊಸಪೇಟೆ | ಹೊಸಪೇಟೆಯಲ್ಲಿ ಸಂಪರ್ಕ ಸಭೆ |
| 4. | 07.09.2017 | ಗಂಗಾವತಿ | ಗಂಗಾವತಿಯಲ್ಲಿ ಸಂಪರ್ಕ ಸಭೆ |
| 5. | 08.09.2017 | ಸಿಂಧನೂರು | ಸಿಂಧನೂರಿನಲ್ಲಿ ಸಂಪರ್ಕ ಸಭೆ |
| 6. | 11.09.2017 | ಎಸ್‌ಐಟಿ ಮಿಡಿಯಾ ಸೆಂಟರ್, ಎಸ್.ಐ.ಟಿ ಕ್ಯಾಂಟಿನ್ ಪಕ್ಕ, ಸಿದ್ದಗಂಗಾ ತಾಂತ್ರಿಕಾ ಮಹಾವಿದ್ಯಾಲಯ, ಎಸ್ ಐಟಿ ಆವರಣ, ಬಿ.ಹೆಚ್ ರಸ್ತೆ, ತುಮಕೂರು. | ಪತ್ರಿಕಾಗೋಷ್ಠಿ ಮತ್ತು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ ಮತ್ತು ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಕುರಿತು ಉಪನ್ಯಾಸ. |
| 7. | 12.09.2017 | ಪೂಜಾ ಇಂಟರ್ ನ್ಯಾಷನಲ್ ಹೋಟೆಲ್, ಪಿ ಬಿ ರಸ್ತೆ, ದಾವಣಗೆರೆ. | ಪತ್ರಿಕಾಗೋಷ್ಠಿ ಹಾಗೂ ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ ಮತ್ತು ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಕುರಿತು ಉಪನ್ಯಾಸ. |
| 8. | 12.09.2017 | ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಜೆಸಿಆರ್ ಬಡಾವಣೆ ಶಾಖೆ, 4ನೇ ತಿರುವು, ಗಣಪತಿ ದೇವಸ್ಥಾನ ಹತ್ತಿರ, ಚಿತ್ರದುರ್ಗ. | ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಕುರಿತು ಉಪನ್ಯಾಸ. |
| 9. | 13.09.2017 | ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ, RTO ರಸ್ತೆ, ಶಿವಮೊಗ್ಗ. | ಪತ್ರಿಕಾಗೋಷ್ಠಿ ಹಾಗೂ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ ಮತ್ತು ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಕುರಿತು ಉಪನ್ಯಾಸ. |

## ದಿನಾಂಕ : 16-09-2017ರಂದು ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಸಂದರ್ಭದ ಕಾರ್ಯಕ್ರಮಗಳು

- ದಿನಾಂಕ : 16.09.2017ರಂದು ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದಲ್ಲಿ ಕೇಂದ್ರ ಕಾನೂನುಗಳಿಂದ ಸಹಕಾರ ಸಂಸ್ಥೆಗಳಿಗೆ ಆಗುತ್ತಿರುವ ಪರಿಣಾಮಗಳ ಕುರಿತು ಚರ್ಚೆ ಹಾಗೂ ನಂತರದಲ್ಲಿ ಎಲ್ಲಾ ಸಹಕಾರಿಗಳ ಪರವಾಗಿ ಅಹವಾಲು/ ಬಿನ್ನವತ್ತಳೆ ಸಲ್ಲಿಸುವ ನಿಮಿತ್ತ ವಿಶೇಷ ಸಭೆಯನ್ನು ಬೆಳಿಗ್ಗೆ 10.00 ಗಂಟೆಗೆ ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ ನೂತನ ಪ್ರಕಟಣೆಗಳ ಬಿಡುಗಡೆ ಕಾರ್ಯಕ್ರಮವನ್ನು ಕೂಡ ಆಯೋಜಿಸಲಾಗಿದೆ. ಈ ವಿಶೇಷ ಸಭೆಯಲ್ಲಿ ಶ್ರೀ ಅನಂತಕುಮಾರ್, ಮಾನ್ಯ ಸಂಸದೀಯ ವ್ಯವಹಾರ ಹಾಗೂ ರಾಸಾಯನಿಕ & ರಸಗೊಬ್ಬರ ಸಚಿವರು, ಭಾರತ ಸರ್ಕಾರ ಇವರು ಉಪಸ್ಥಿತರಿರುತ್ತಾರೆ.
- ದಿನಾಂಕ : 16.09.2017ರಂದು ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳು ಮುಕ್ತಾಯವಾದ ನಂತರ ಮಧ್ಯಾಹ್ನದ ಅವಧಿಯಲ್ಲಿ 'ಸಹಕಾರಿಗಳಿಗೆ ಆದಾಯ ತೆರಿಗೆ ಅನ್ವಯವಾಗುವ ಕುರಿತು ಇತ್ತೀಚಿನ ಸುಪ್ರೀಂ ಕೋರ್ಟ್ ತೀರ್ಪು ಹಾಗೂ ನೂತನ ಸರಕು ಹಾಗೂ ಸೇವಾ ತೆರಿಗೆ ಕಾಯ್ದೆ (GST)' ಕುರಿತು ತಜ್ಞರೊಡನೆ ಸಂವಾದವನ್ನು ಏರ್ಪಡಿಸಲಾಗಿದೆ.

## ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯ ವರದಿಗಳು



### ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ಶಿವಮೊಗ್ಗ :** ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 06.08.2017ರಂದು ಶ್ರೀ ಎ.ಆರ್.ಪ್ರಸನ್ನಕುಮಾರ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಎ.ಆರ್.ಪ್ರಸನ್ನಕುಮಾರ್‌ರವರಿಗೆ ಸಹಕಾರಿಯ ಶೇರುದಾರರಾದ ಶ್ರೀಮತಿ ಲೀಲಾವತಿ, ಶ್ರೀ ನಟರಾಜ್ ಭಾಗವತ್ ಹಾಗೂ ಇತರರು ಪುಷ್ಪಹಾರ ಹಾಕಿ ಅಭಿನಂದಿಸಿದರು.

### ಶ್ರೀ ಕೂಡಲ ಸಂಗಮ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆ

**ನೆಲಮಂಗಲ :** ಶ್ರೀ ಕೂಡಲ ಸಂಗಮ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ನೆಲಮಂಗಲ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 06.08.2017ರಂದು ಶ್ರೀ ಎಸ್.ಎಸ್.ಬಿರಾದಾರರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯ ಸದಸ್ಯರಿಗೆ ಶೇ.1 ರಷ್ಟು ಲಾಭಾಂಶವನ್ನು ವಿತರಿಸಲು ಘೋಷಿಸಲಾಯಿತು. ಇದೇ ಸಂದರ್ಭದಲ್ಲಿ ಉತ್ತರ ಕರ್ನಾಟಕ ಸಾಂಸ್ಕೃತಿಕ ವೇದಿಕೆ (ರಿ), ನೆಲಮಂಗಲದ ಸಹಯೋಗದೊಂದಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಆಯೋಜಿಸಲಾಗಿತ್ತು.





### ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ

ಸಾಲಿಗ್ರಾಮ : ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಆನದ ಸಿ. ಕುಂದರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯ ಸದಸ್ಯರು ಮತ್ತು ಸಹ ಸದಸ್ಯರಿಗೆ ಶೇ.25 ರ ಡಿವಿಡೆಂಡ್ ಘೋಷಿಸಲಾಯಿತು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾಗಿ ಆಯ್ಕೆಯಾದ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ.ಎಸ್.ಕೆ. ಇವರನ್ನು ಅಭಿನಂದಿಸಲಾಯಿತು.

### ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ

**ಉಡುಪಿ :** ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 20.08.2017ರಂದು ಸಹಕಾರಿಯ ಅಧ್ಯಕ್ಷರಾದ ಮಂಚಿ ಶ್ರೀ ನಿತ್ಯಾನಂದ ನಾಯಕ್‌ರವರು ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ. 6.25 ಕೋಟಿ ರೂಪಾಯಿಗೂ ಅಧಿಕ ವ್ಯವಹಾರ ನಡೆಸಿ, ರೂ. 23.87 ಲಕ್ಷ ಲಾಭ ಗಳಿಸಿದೆ ಎಂದು ತಿಳಿಸಿದರು. ಸಹಕಾರಿಯ ಸದಸ್ಯರಿಗೆ ಶೇ. 16 ಲಾಭಾಂಶವನ್ನು ಘೋಷಿಸಿದರು.



### ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್‌ನ 8ನೇ ವಾರ್ಷಿಕ ಸಾಮಾನ್ಯ ಸಭೆ

**ಬೆಂಗಳೂರು :** ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ವಿ.ವಿ.ಪುರಂ, ಬೆಂಗಳೂರು ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 20.08.2017ರಂದು ಜರುಗಿತು.

ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ/ ಪಿ.ಯು.ಸಿ. ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಗಳನ್ನು ನೀಡಲಾಯಿತು.




ಸಹಕಾರಿಯು ರೂ.60 ಕೋಟಿಗಳಿಗೂ ಮೀರಿದ ದುಡಿಯುವ ಬಂಡವಾಳವನ್ನು ಹೊಂದಿದ್ದು, ಶೇ.18ರಂತೆ ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು.

## ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯ ವರದಿಗಳು

### ಸರಸ್ವತಿ ಸೌಹಾರ್ದ ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಸಭೆ

**ತೀರ್ಥಹಳ್ಳಿ :** ಸರಸ್ವತಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 20.08.2017ರಂದು ಜರುಗಿತು. ಬೆಳಿಗ್ಗೆ ಸಹಕಾರಿಯ ಸ್ವಂತ ಕಟ್ಟಡದ ಉದ್ಘಾಟನೆ ಮತ್ತು ಶಾಖಾ ಕಛೇರಿಯ ಉದ್ಘಾಟನೆಯನ್ನು ಮಾಜಿ ಶಾಸಕರಾದ ಶ್ರೀ ಆರಗ ಜ್ಞಾನೇಂದ್ರ ಹಾಗೂ ಶ್ರೀ ವಿನಾಯಕ ಕಾಮತ್, ಶ್ರೀ ನಾಗರಾಜ ಶೆಟ್ಟಿ, ಶ್ರೀ ಜಿ.ಎಸ್.ನಾರಾಯಣ ರಾವ್, ಡಾ॥ ನಾರಾಯಣ ಸ್ವಾಮಿ, ಶ್ರೀ ಪ್ರಸನ್ನ ಕುಮಾರ್ ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರ ವಹಿಸಿದ್ದರು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ



ಸಹಕಾರಿಗೆ ಶಿವಮೊಗ್ಗ ಜಿಲ್ಲೆಯಿಂದ ಆಯ್ಕೆಯಾದ ಶ್ರೀಎ.ಆರ್.ಪ್ರಸನ್ನ ಕುಮಾರ್‌ರವರಿಗೆ ಸನ್ಮಾನಿಸಲಾಯಿತು. ಸಹಕಾರಿಯು ಶೇ.10ರಂತೆ ಲಾಭಾಂಶ ವಿತರಿಸಲು ನಿರ್ಣಯಿಸಲಾಯಿತು.



### ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ಯರಗಟ್ಟಿ :** ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 22.08.2017ರಂದು ಜರುಗಿತು. ಉದ್ಘಾಟಕರಾಗಿ ಬಾಪೂಸಾಹೇಬ, ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿದ್ದು ಪೂಜೇರ ಹಾಗೂ ಶ್ರೀ ರೇವಣಸಿದ್ಧೇಶ್ವರ ಶರಣರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಕೃಷ್ಣಪ್ಪ ವೆಂಕಪ್ಪ ಸವಳೇಕರರವರನ್ನು ಸಹಕಾರಿಯ ತಜ್ಞರಾಗಿ ಆಯ್ಕೆ ಮಾಡಿ, ನೇಮಕಾತಿ ಆದೇಶ ನೀಡಿ ಸತ್ಕರಿಸಲಾಯಿತು.

### ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ 13ನೇ ವಾರ್ಷಿಕ ಸಾಮಾನ್ಯ ಸಭೆ



**ಸಿದ್ಧಾಪುರ :** ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸಿದ್ಧಾಪುರ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಆನಂದ ನಾಯ್ಕರವರ ಅಧ್ಯಕ್ಷತೆಯಲ್ಲಿ ನಡೆಯಿತು.

### ಶ್ರೀ ಮಹಾದೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆ



**ಶಿವಮೊಗ್ಗ :** ಶ್ರೀ ಮಹಾದೇಶ್ವರ ವಿವಿಧೋದ್ಧೇಶ ಸೌಹಾರ್ದ ಸಹಕಾರಿ ನಿ., ಇಂದಿರಾನಗರ, ಶಿವಮೊಗ್ಗ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 05.08.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಕುಮಾರ.ಬಿ.ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.4.56 ಲಕ್ಷ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.8ರಷ್ಟು ಡಿವಿಡೆಂಡ್ ನೀಡಲು ಸಭೆಯು ತೀರ್ಮಾನಿಸಿತು.



ವಿಶ್ವಚೇತನ ಸೌಹಾರ್ದ ಸಹಕಾರಿ ನಿ., ಹಿರಿಯೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀಶ ಎ ರವರ ಅಧ್ಯಕ್ಷತೆಯಲ್ಲಿ ಜರುಗಿತು.



ಸಿರಿ ಸಂಜೀವಿನಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



ಗಂಗಾ ಕಾವೇರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಇರಕಲ್ಲಗಡ ಸಹಕಾರಿಯ ಎರಡನೇ ವಾರ್ಷಿಕ ಆಚರಣೆ.

## ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯ ವರದಿಗಳು



ಪುತ್ತೂರು ಸೌಹಾರ್ದ ಸಹಕಾರಿ ನಿ., ಪುತ್ತೂರು ಸಹಕಾರಿಯ 2016-17ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 20.08.2017ರಂದು ಜರುಗಿತು.




ಅಶ್ವತ್ಥಪುರ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಆರ್.ರಮೇಶ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು.




ಜ್ಞಾನಶಾಲೆ ಸೌಹಾರ್ದ ಕೋ-ಆಪರೇಟಿವ್ ನಿ., 8ನೇ ವಾರ್ಷಿಕ ಸದಸ್ಯರ ಸಾಮಾನ್ಯ ಸಭೆ.



ಗೋಕುಲ ಪತ್ತಿನ ಸೌಹಾರ್ದ ಸಹಕಾರಿ ನಿ., ಸರ್ವ ಸದಸ್ಯರ ವಾರ್ಷಿಕ ಮಹಾಸಭೆ



ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

## ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ

**ಕಲಬುರಗಿ :** ಜೇವರ್ಗಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯ ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆಯನ್ನು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಬಿ.ಆರ್. ಪಾಟೀಲರವರು ನೆರವೇರಿಸಿದರು. ಉದ್ಘಾಟನೆಯಲ್ಲಿ ಜೇವರ್ಗಿ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಪೀತಾಂಬರರಾವ, ಆಡಳಿತ ಮಂಡಲಿ ಸದಸ್ಯರು ಹಾಗೂ ಕಲಬುರಗಿ ವಿಭಾಗೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ಮತ್ತು ಸಹಕಾರಿಯ ಸಿಬ್ಬಂದಿಗಳು ಹಾಜರಿದ್ದರು.






ನವಶಕ್ತಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ.

### ಅಧ್ಯಕ್ಷರು - ಉಪಾಧ್ಯಕ್ಷರ ಆಯ್ಕೆ

**ಶ್ರೀ ಕನ್ನಿಕಾ ಸೌಹಾರ್ದ ಸಹಕಾರಿ ನಿ., ಹಿರಿಯೂರು**



ಶ್ರೀ ಬಿ.ಎನ್.ತಿಪ್ಪೇಸ್ವಾಮಿ
**ಅಧ್ಯಕ್ಷರು**



ಶ್ರೀ ಹೆಚ್.ಎಸ್.ಅಮರ್‌ನಾಥ್
**ಉಪಾಧ್ಯಕ್ಷರು**

## ಗೌರಿ ಗಣೇಶ ಠೇವಣಿ ಯೋಜನೆ



**ಗೌರಿಬಿದನೂರು :** ಆಶೀರ್ವಾದ್ ಸೌಹಾರ್ದ ಸಹಕಾರಿ ನಿ., ಗೌರಿಬಿದನೂರು ಸಹಕಾರಿಯಲ್ಲಿನ ಸದಸ್ಯರಿಗೆ ಅನುಕೂಲವಾಗಲೆಂದು ಗೌರಿ ಗಣೇಶ ಠೇವಣಿ ಯೋಜನೆಯನ್ನು ಜಾರಿಗೊಳಿಸಲಾಗಿತ್ತು.

ಅದರಂತೆ ದಿನಾಂಕ 09.08.2017 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಎಸ್.ಸತೀಶ್ ಕುಮಾರ್ ಹಾಗೂ ನಿರ್ದೇಶಕರ ಸಮ್ಮುಖದಲ್ಲಿ ಆ ಯೋಜನೆಯಡಿ ಠೇವಣಿ ಇರಿಸಿದ ಎಲ್ಲಾ ಹೆಣ್ಣು ಮಕ್ಕಳಿಗೆ ಬಂದ ಠೇವಣಿಯ ಬಡ್ಡಿ ಹಣದ ಜೊತೆಗೆ ಅರಿಶಿಣ, ಕುಂಕುಮ, ಬಳೆ ಹಾಗೂ ಸಿಹಿಯನ್ನು ನೀಡಿ ಹಬ್ಬದ ಶುಭಾಷಯಗಳನ್ನು ತಿಳಿಸಲಾಯಿತು.

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

**– ಶ್ರೀಮತಿ ಶೋಭಾ ಆರ್,**
ಸೇವಾ ವಿಭಾಗ.

**ಪ್ರಶ್ನೆ 1 ಗ್ರಾಹಕರಿಗೆ ಇ–ಸ್ಟಾಂಪಿಂಗ್‌ನ ಉಪಯೋಗಗಳೇನು?**

1. ಇ–ಸ್ಟಾಂಪಿಂಗ್ ಸರ್ಟಿಫಿಕೇಟ್ ನಿಮಿಷಗಳಲ್ಲಿ ಸೃಷ್ಟಿಸಬಹುದು.
2. ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನಲ್ಲಿ ತಿದ್ದುಪಡಿಗೆ ಅವಕಾಶವಿಲ್ಲ.
3. ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ ಸತ್ಯಾಸತ್ಯೆಗಳನ್ನು ವಿಚಾರಣಾ ಘಟಕದ ಮೂಲಕ ತಿಳಿಯಬಹುದು.
4. ಇ–ಸ್ಟಾಂಪಿಂಗ್ ಸರ್ಟಿಫಿಕೇಟ್ ಒಂದು ವಿಶೇಷ ಗುರುತಿನ ಸಂಖ್ಯೆಯನ್ನು ಹೊಂದಿರುತ್ತದೆ.
5. ನಿರ್ದಿಷ್ಠ ವರ್ಗಗಳ ಮತ್ತು ಪಂಥಗಳ ವರ್ಗೀಕರಣದ ಅಗತ್ಯವಿಲ್ಲ.

**ಪ್ರಶ್ನೆ 2 ಇ–ಸ್ಟಾಂಪಿಂಗ್‌ನ ಲಕ್ಷಣಗಳೇನು?**

1. ಇ–ಸ್ಟಾಂಪಿಂಗ್ ಸರ್ಟಿಫಿಕೇಟ್ ಸುಲಭವಾಗಿ ಲಭ್ಯವಿದೆ ಹಾಗೂ ಶೀಘ್ರವಾಗಿ ಸಂಸ್ಕರಿಸಬಹುದು.
2. ಇ–ಸ್ಟಾಂಪಿಂಗ್ ಸರ್ಟಿಫಿಕೇಟ್ ಸುರಕ್ಷಿತವಾಗಿದೆ
3. ಇ–ಸ್ಟಾಂಪಿಂಗ್ ಸರ್ಟಿಫಿಕೇಟ್ ವೆಚ್ಚದ ಉಳಿತಾಯಕ್ಕೆ ಅನುಕೂಲಕರವಾಗಿದೆ.
4. ಇ–ಸ್ಟಾಂಪಿಂಗ್ ವಿಚಾರಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದಾಗಿದೆ.

**ಪ್ರಶ್ನೆ 3 ಇ–ಸ್ಟಾಂಪಿಂಗ್ ಸತ್ಯತೆಗಳನ್ನು ಹೇಗೆ ತಿಳಿಯಬಹುದು?**

ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ ಅಂಶಗಳನ್ನು www.shcilestamp.com ನಲ್ಲಿ verify ಕ್ಲಿಕ್ ಮಾಡಿ ಕೆಳಗಿನವುಗಳನ್ನು ಭರ್ತಿ ಮಾಡಬೇಕು.

1. ರಾಜ್ಯವನ್ನು ನಮೂದಿಸಬೇಕು.
2. ಸರ್ಟಿಫಿಕೇಟ್‌ನ ಸಂಖ್ಯೆ.
3. ಮುದ್ರಾಂಕ ಶುಲ್ಕದ ವಿಧ.
4. ಸರ್ಟಿಫಿಕೇಟ್ ಪಡೆದ ದಿನಾಂಕವನ್ನು ನಮೂದಿಸಬೇಕು.
5. ಅವಧಿಯ ಕೋಡ್‌ನ್ನು ನಮೂದಿಸಿ ಸರ್ಟಿಫಿಕೇಟ್‌ನ ಪೂರ್ಣ ವಿವರಗಳನ್ನು ತಿಳಿಯಬಹುದು.

**ಪ್ರಶ್ನೆ 4 ಹತ್ತಿರದ ಅಧಿಕೃತ ಸಂಗ್ರಹಣ ಕೇಂದ್ರಗಳನ್ನು ಹೇಗೆ ತಿಳಿಯುವುದು?**

www.shcilestamp.com ವೆಬ್‌ಸೈಟ್‌ನ ಸಂಪರ್ಕ ಸೇವೆಯಿಂದ ತಿಳಿಯಬಹುದು.

**ಪ್ರಶ್ನೆ 5 ರಾಜ್ಯದ ಅಧಿಕೃತ ಸಂಗ್ರಹಣ ಕೇಂದ್ರಗಳನ್ನು ಹೇಗೆ ತಿಳಿಯುವುದು?**

www.shcilestamp.com ವೆಬ್‌ಸೈಟ್‌ನಲ್ಲಿ ರಾಜ್ಯಗಳ ವಿವರಗಳಿವೆ. ಅವುಗಳಿಂದ ರಾಜ್ಯಗಳ ಅಧಿಕೃತ ಸಂಗ್ರಹಣ ಕೇಂದ್ರಗಳನ್ನು ತಿಳಿಯಬಹುದು.

**ಪ್ರಶ್ನೆ 6 ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ್ನು ಯಾವಾಗ ಪಡೆಯಬಹುದು?**

ಅಧಿಕೃತ ಸಂಗ್ರಹಣ ಕೇಂದ್ರಗಳು ಗ್ರಾಹಕರ ಅರ್ಜಿಯ ಜೊತೆಗೆ ನಗದನ್ನು ಸ್ವೀಕರಿಸಿದ ತಕ್ಷಣ ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ್ನು ಪಡೆಯಬಹುದು. ಚೆಕ್ ಅಥವಾ ಡಿಡಿಯ ಮೂಲಕ ಹಣ ಸಂದಾಯ ಮಾಡಿ ಅದು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಖಾತೆಗೆ ವರ್ಗಾವಣೆಯಾದ ನಂತರ ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ್ನು ಪಡೆಯತಕ್ಕದು.

**ಗ್ರಾಹಕರಿಗೆ ವಿಶೇಷ ಸೂಚನೆಗಳು :**

1. SHCIL ಸ್ಟಾಂಪ್ ಡ್ಯೂಟಿಯನ್ನು ಭಾರತೀಯ ನಾಣ್ಯ ಪದ್ಧತಿ ರೂಪಾಯಿಗಳಲ್ಲಿ ಮಾತ್ರ ಸ್ವೀಕರಿಸುವುದು.
2. RTGS/NEFT ಮೂಲಕ ಹಣ ಸಂದಾಯ ಮಾಡುವ ಮೊದಲು ಹತ್ತಿರದ ಇ–ಸ್ಟಾಂಪಿಂಗ್ ಕಛೇರಿಯಲ್ಲಿ ಸಲಹೆ ಪಡೆಯತಕ್ಕದು.
3. ಗ್ರಾಹಕರು ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ್ನು ಪಡೆಯುವ ಮುನ್ನ ಒಂದು ಮುನ್ನೋಟ ಹರಿಸುವುದು.
4. ಒಮ್ಮೆ ಇ–ಸ್ಟಾಂಪಿಂಗ್ ಸರ್ಟಿಫಿಕೇಟ್ ಪಡೆದ ಮೇಲೆ ಯಾವುದೇ ತಿದ್ದುಪಡಿಗಳನ್ನು ಮಾಡಲಾಗುವುದಿಲ್ಲ.
5. ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ್ನು ಜೋಪಾನವಾಗಿ ಉಳಿಸಿಕೊಳ್ಳುವುದು. ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ ದ್ವಿಪ್ರತಿ ಸಿಗುವುದಿಲ್ಲ.

**ಪ್ರಶ್ನೆ 7 ಸ್ಟಾಂಪ್ ಡ್ಯೂಟಿ ಪೂರ್ಣವಾಗಿ ಪಾವತಿ ಮಾಡದ ಸಮಯ ಏನು ಮಾಡಬೇಕು?**

ಗ್ರಾಹಕ ಅಧಿಕೃತ ಸಂಗ್ರಹಣ ಕೇಂದ್ರಗಳಲ್ಲಿ ಹೆಚ್ಚುವರಿ ಸ್ಟಾಂಪ್ ಡ್ಯೂಟಿಯನ್ನು ಪಾವತಿಸಿ ಹೆಚ್ಚುವರಿ ಸ್ಟಾಂಪ್ ಡ್ಯೂಟಿ ಸರ್ಟಿಫಿಕೇಟ್‌ನ್ನು ಪಡೆಯತಕ್ಕದ್ದು. ನೋಂದಣಿಯ ಸಮಯದಲ್ಲಿ ಮೂಲ ಸ್ಟಾಂಪ್ ಡ್ಯೂಟಿ ಸರ್ಟಿಫಿಕೇಟ್ ಹಾಗೂ ಹೆಚ್ಚುವರಿ ಸ್ಟಾಂಪ್ ಡ್ಯೂಟಿ ಸರ್ಟಿಫಿಕೇಟ್‌ನ್ನು ಒದಗಿಸುವುದು.

**ಪ್ರಶ್ನೆ 8 ಸ್ಟಾಂಪ್ ಡ್ಯೂಟಿಯನ್ನು ಯಾವ ವಿಧಾನದಲ್ಲಿ ಪಾವತಿಸಬಹುದು?**

ಸ್ಟಾಂಪ್ ಡ್ಯೂಟಿಯನ್ನು ಕೆಳಗಿನ ವಿಧಾನದಲ್ಲಿ ಪಾವತಿಸಬಹುದು;

1. ನಗದು
2. ಚೆಕ್
3. ಡಿಡಿ/ಪೇ ಆರ್ಡರ್
4. RTGS/NEFT
5. ಖಾತೆಯಿಂದ ಖಾತೆಗೆ ವರ್ಗಾವಣೆ.

ಡಿಡಿ/ಪೇ ಆರ್ಡರ್, RTGS/NEFT, ಖಾತೆಯಿಂದ ಖಾತೆಗೆ ವರ್ಗಾವಣೆಗಳ ಮೂಲಕ ಸಂದಾಯ ಮಾಡುವ ಮುನ್ನ ಹತ್ತಿರದ ಇ–ಸ್ಟಾಂಪಿಂಗ್ ಕಛೇರಿಯಲ್ಲಿ ಮಾಹಿತಿಯನ್ನು ಪಡೆಯುವುದು.

**ಪ್ರಶ್ನೆ 9 : ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ್ನು ರದ್ದುಪಡಿಸಬಹುದೇ?**

ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ್ನು ರದ್ದುಪಡಿಸಲು ರಾಜ್ಯ ಸರ್ಕಾರ ನಿಯೋಜಿಸಿದ ಅಧಿಕಾರಿಗಳನ್ನು ಸಂಪರ್ಕಿಸಬೇಕು. ಕರ್ನಾಟಕದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳನ್ನು ಸಂಪರ್ಕಿಸುವುದು ಮತ್ತು ಅವರು ನೀಡುವ ಮಾರ್ಗಸೂಚಿಯನ್ನು ಅನುಸರಿಸಿ ಸರ್ಟಿಫಿಕೇಟ್ ಅನ್ನು ರದ್ದುಪಡಿಸಬಹುದಾಗಿದೆ.

**ಪ್ರಶ್ನೆ 10 ಇ–ಸ್ಟಾಂಪಿಂಗ್ ಸರ್ಟಿಫಿಕೇಟ್ ಕಳೆದುಕೊಂಡಲ್ಲಿ ಏನು ಮಾಡುವುದು?**

ಇ–ಸ್ಟಾಂಪಿಂಗ್ ಸರ್ಟಿಫಿಕೇಟ್ ಕಳೆದುಕೊಂಡಲ್ಲಿ ಆಯಾ ರಾಜ್ಯಗಳಲ್ಲಿ ಜಾರಿಯಿರುವ ಸ್ಟಾಂಪ್ ಆಕ್ಟ್‌ನಿಂದ ಮಾಹಿತಿ ಪಡೆಯುವುದು. (CRA) ಸೆಂಟ್ರಲ್ ರೆಕಾರ್ಡ್ ಕೀಪಿಂಗ್ ಏಜೆನ್ಸಿ. SHCIL ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾಗೆ ಇ–ಸ್ಟಾಂಪಿಂಗ್ ಸರ್ಟಿಫಿಕೇಟ್‌ನ ದ್ವಿಪ್ರತಿಯನ್ನು ಕೊಡುವ ಅಧಿಕಾರವಿಲ್ಲ.

# ಅಂತರರಾಷ್ಟ್ರೀಯ ಗಮನ ಸೆಳೆದಿರುವ ನಾಡಹಬ್ಬ ದಸರಾ

## ಜೀವನ ಮೌಲ್ಯಗಳ ವೃದ್ಧಿಪಡಿಸುವ, ಆಚಾರ ವಿಚಾರಗಳ ಸಂಗಮ, ಪೂರ್ವಿಕರ ಸುಂದರ ಕಲ್ಪನೆಗಳನ್ನು ಸಾಕಾರಗೊಳಿಸುವ, ಬದುಕನ್ನು ಸುಂದರಗೊಳಿಸುವ ಪ್ರಯತ್ನಗಳು

▶▶ **ಶ್ರೀಮತಿ ಎನ್.ಇ.ಸವಿತ,** ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.

ಹಬ್ಬಗಳು ಋತುಮಾನಕ್ಕೆ ಅನುಗುಣವಾಗಿ ಸನಾತನ ವೇದ ಉಪನಿಷತ್, ಪುರಾಣ, ಇತಿಹಾಸಗಳಲ್ಲಿನ ಸಂದೇಶಗಳು, ಸುಂದರ ಕಲ್ಪನೆಗಳು ಹಾಗೂ ಉದಾತ್ತ ಧ್ಯೇಯ ಹಾಗೂ ಆಶಯಗಳನ್ನು ಹೊತ್ತು ತರುವ ಈ ಹಬ್ಬಗಳೆಲ್ಲ ನಮ್ಮ ಹಿರಿಯರ ಆವಿಷ್ಕಾರಗಳು ಎಂದು ಹೇಳಿದರೆ ಅತಿಶಯೋಕ್ತಿಯೆನಿಸುವುದಿಲ್ಲ. ಉದಾಹರಣೆಗೆ ಸೂರ್ಯ ಮಕರ ರಾಶಿಯನ್ನು ಪ್ರವೇಶಿಸುವ ದಿನವನ್ನು ಸಂಕ್ರಾಂತಿಯಾಗಿ, ಸೂರ್ಯ ತನ್ನ ಪಥವನ್ನು ಬದಲಿಸುವ ದಿನವನ್ನು ರಥಸಪ್ತಮಿಯಾಗಿ, ಪ್ರಕೃತಿಯ ಉಲ್ಲಾಸಮಯ ದಿನಗಳ ಆರಂಭವನ್ನು ವಸಂತ ಋತುವಿನ ಆಗಮನವನ್ನು ಯುಗಾದಿಯಾಗಿ ಹೀಗೆ ನಮ್ಮ ಬದುಕಿಗೆ ಸಂಸ್ಕಾರವನ್ನು ಮಾಡಿಸುವ ನಿರಂತರ ಉತ್ಸಾಹವನ್ನು ತುಂಬುವ ಸಮಾಜದಲ್ಲಿ ಏಕತೆಯನ್ನು ಬಿತ್ತುವ, ಸಾರುವ ಪ್ರಯತ್ನವನ್ನು ನಮ್ಮ ಹಿರಿಯರು ಮಾಡಿದ್ದಾರೆ. ಇವುಗಳು ನಮ್ಮ ಸಾಂಪ್ರದಾಯಿಕ ಹಬ್ಬ ಹರಿದಿನಗಳಾಗಿವೆ. ನಮ್ಮ ಸನಾತನ ಧರ್ಮದ ಆಚರಣೆಯ ಸಂಕೇತಗಳಾಗಿವೆ. ಇವುಗಳಲ್ಲಿ ಸಮಾಜದ ಎಲ್ಲಾ ವರ್ಗದ, ಎಲ್ಲಾ ಜಾತಿ ಪಂಗಡದವರ ಅವರರವರ ವೃತ್ತಿಧರ್ಮಗಳ ಆಚರಣೆಯ ತಳಹದಿಗೆ ಒತ್ತುಕೊಟ್ಟು ಸಂಪ್ರದಾಯಗಳನ್ನು ವರ್ಷದ 12 ತಿಂಗಳುಗಳಲ್ಲಿ ಪ್ರತಿ ತಿಂಗಳಿನಲ್ಲೂ ಯಾವುದಾದರೊಂದು ಆಚರಣೆ ಬರುವ ಹಾಗೇ ಊರ ಹಬ್ಬ, ಜಾತ್ರೆ, ನಾಡ ಹಬ್ಬ ಹೀಗೆ ಹಲವು ವಿಧವಾದ ಸಾಂಸ್ಕೃತಿಕ ಸಂಕೇತವಾದ ಅನೇಕ ಹಬ್ಬಗಳನ್ನು ಎಲ್ಲರೂ ಒಗ್ಗೂಡಿ ಆಚರಿಸುವ ಸಂಪ್ರದಾಯಗಳನ್ನು ನಮ್ಮ ಹಿರಿಯರು ನಮಗೆ ನೀಡಿರುವ ಬಳುವಳಿ. ಇವುಗಳೇ ನಮ್ಮ ನಿತ್ಯದ ಬದುಕಿಗೆ ಸ್ಫೂರ್ತಿ.

ಕರ್ನಾಟಕದಲ್ಲಿ ವಿಜಯನಗರ ಸಂಸ್ಥಾನದಲ್ಲಿ ದಸರಾ ಉತ್ಸವಕ್ಕೆ ಚಾಲನೆ ಸಿಕ್ಕಿದರೆ, ಮೈಸೂರು ಸಂಸ್ಥಾನದ ಒಡೆಯರ ಕಾಲದಲ್ಲಿ ಮನೆಮನೆಗಳಲ್ಲೂ ಪ್ರಚಲಿತವಾಯಿತು. ಮೈಸೂರು ದಸರಾ ಮೈಸೂರು ಪ್ರದೇಶದ ನಾಡ ಹಬ್ಬವೆಂದೆ ಎಂದೇ ಖ್ಯಾತಿಯಾಯಿತು.

ನಾಡಹಬ್ಬ ಅಂದರೆ ದಸರಾ, ವಿಜಯದಶಮಿ, ದುರ್ಗಾಪೂಜೆ, ಮಹಾನವಮಿ (ಮಾರ್ನೋಮಿ) ಈ ಹಬ್ಬವನ್ನು ವರ್ಷಋತು ಅರ್ಥಾತ್ ಮಳೆಗಾಲ ಮುಗಿದ ಬಳಿಕ ಬರುವ ಶರದೃತುವಿನಲ್ಲಿ ಭೂಮಿ ಒಣಗಿ ಗಟ್ಟಿಯಾಗಿರುತ್ತದೆ, ಈ ಸಮಯದಲ್ಲಿ ವಿಜಯನಗರದ ರಾಜರು ಎಲ್ಲಾ ಸೈನ್ಯವನ್ನು ಒಂದು ಕಡೆ ಸೇರುವ ಸಮಯವಾಗಿದೆ. ಹೀಗೆ ಅರಸರು ಆರಂಭಿಸಿ ದಸರಾ ಉತ್ಸವಕ್ಕೆ ಎಲ್ಲಾ ಮಾಂಡಳಿಕರು, ಸಾಮಂತರು ತಮ್ಮ ಸೈನ್ಯದೊಂದಿಗೆ ರಾಜಧಾನಿಗೆ ಆಗಮಿಸಿ, ವಿವಿಧ ಶಕ್ತಿ ಪ್ರದರ್ಶನ ಸ್ಪರ್ಧೆಗಳಲ್ಲಿ ಪಾಲ್ಗೊಂಡು, ತಮ್ಮ ದಳದ ಶಕ್ತಿ ಸಾಮರ್ಥ್ಯವನ್ನು ಜನರೆದುರು ಪ್ರದರ್ಶಿಸಿ, ತಮ್ಮ ಸೈನ್ಯದ ಬಲ ಪರಾಕ್ರಮದ ಬಗ್ಗೆ ಜನರಿಗೆ ಅರಿವು ಮೂಡಿಸುತ್ತಿದ್ದರು. ಈ ವಿಶಿಷ್ಟ ಸಂಪ್ರದಾಯವನ್ನು ಮುಂದುವರೆಸಿ ಮೊದಲ ಬಾರಿಗೆ ಮುಮ್ಮಡಿ ಕೃಷ್ಣರಾಜ ಒಡೆಯ ಕಾಲದಲ್ಲಿ ಮೈಸೂರು ಮಹಾರಾಜರು ದಸರಾ ಜೊತೆ ನೃತ್ಯ, ಸಂಗೀತ, ಆಟಪಾಠ, ಕತ್ತಿವರೆಸೆ, ಮಲ್ಲಯುದ್ಧ, ಕವಾಯತು, ಪ್ರತಿಭಾವಂತರನ್ನು ಸತ್ಕರಿಸುವುದು, ಕಳಸಾ ಪೂಜೆ,




ಮಂಗಳ ಹಾಡು ಹೀಗೆ ಆಚರಿಸುತ್ತಾ ಬಂದರು. ದೇಶದ ವಿವಿಧ ಭಾಗಗಳಲ್ಲಿ ವಿವಿಧ ರೀತಿಯಲ್ಲಿ ನಾಡಹಬ್ಬವನ್ನು ಆಚರಿಸುತ್ತಾರೆ. ಅದರಲ್ಲೂ ಮೈಸೂರು ದಸರೆಗೆ ವಿಶೇಷ ಮಹತ್ವ, ಇದಕ್ಕೆ ಜಗತ್ತಿನಾದ್ಯಂತ ವಿಶೇಷ ಮನ್ನಣೆ ಇದೆ. ಈ ಖ್ಯಾತಿಗೆ ಮೂಲ ಪ್ರೇರಣೆ ಹಂಪೆಯ ಅರಸರು.

ನಾಡಹಬ್ಬಕ್ಕೆ ಮೆರೆಗು ಬಂದಿದ್ದು ಜಂಬೂ ಸವಾರಿಯಿಂದ, ಆಕರ್ಷಕ ಪಥಸಂಚಲನ, ಅರಮನೆಯ ಅಷ್ಟವೈಭವವನ್ನೂ ಒಮ್ಮೆಲೆ ಕಣ್ಣಾರೆ ಕಾಣುವ ಸದಾವಕಾಶ ದೊರಕುತ್ತಿದ್ದದೇ ಈ ಕಾಲದಲ್ಲಿ, ಹಾಗಾಗಿ ದೇಶದ ಮೂಲೆಮೂಲೆಯಿಂದ ಲಕ್ಷಾಂತರ ಪ್ರವಾಸಿಗರು ಈ ಉತ್ಸವಕ್ಕೆ ಬರಲು ಆರಂಭಿಸಿದರು. ಇಂದೂ ಸಹ ಮೈಸೂರಿನಲ್ಲಿ ಜಂಬೂಸವಾರಿ ಸಾಗುತ್ತಿದೆ. ಮೈಸೂರು ರಾಜರು ಬಳಸುತ್ತಿದ್ದ ಸಾರೋಟುಗಳು, ಎತ್ತಿನಗಾಡಿ, ಪಲ್ಲಕ್ಕಿಗಳು, ಕುದುರೆಗಾಡಿ, ಆನೆಗಾಡಿಗಳು ಜಂಬೂಸವಾರಿಯಲ್ಲಿ ಸಾಲಾಗಿ ಸಾಗುತ್ತವೆ. ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಬಿಂಬಿಸುವ ಸ್ತಬ್ಧಚಿತ್ರಗಳ ಮೆರವಣಿಗೆ ನಡೆಯುತ್ತಿದೆ. ಈ ಮೆರವಣಿಗೆಯಲ್ಲಿ ವೀರಗಾಸೆ, ಕೋಲಾಟ, ನಂದಿಧ್ವಜ, ತಾಳಮದ್ದಳೆ, ಕೀಲುಕುದುರೆ, ಹುಲಿಯ ವೇಷ ಮೊದಲಾದ ಜಾನಪದ ತಂಡಗಳು ಪಾಲ್ಗೊಳ್ಳುತ್ತವೆ. ಈ ಮೆರವಣಿಗೆಯು ರಾಜಬೀದಿಗಳಲ್ಲಿ ಸಂಚರಿಸಿ ನಂತರ ಬನ್ನಿಮಂಟಪದಲ್ಲಿ ಕೊನೆಗೊಳ್ಳುತ್ತದೆ. ಮೊದಲೆಲ್ಲಾ ಅಂಬಾರಿಯಲ್ಲಿ ಕುಳಿತು ರಾಜರು ಈ ಉತ್ಸವವನ್ನು ವೀಕ್ಷಿಸುತ್ತಿದ್ದರು. ಕ್ರಮೇಣ ಅಂಬಾರಿಯ ಮೇಲೆ ತಾಯಿ ಚಾಮುಂಡೇಶ್ವರಿಯ ಪುತ್ಥಳಿಯನ್ನು ಕೂರಿಸಿ ಮೆರವಣಿಗೆ ಮಾಡುವುದನ್ನು ಪ್ರಾರಂಭಿಸಲಾಯಿತು. ದಸರಾ ಹಬ್ಬದಲ್ಲಿ ಮತ್ತೊಂದು ಆಕರ್ಷಣೀಯವಾಗಿ ಹಾಗೂ ಸಂದರ್ಭಾನುಸಾರವಾಗಿ ಬೊಂಬೆ ಕೂರಿಸುವುದು, ಶಾರದ ಪೂಜೆ ಹೀಗೆ ದಶಮಿಯ ದಸರೆಯ ಆಚರಣೆಗೆ ಅನೇಕ ಪುರಾಣಗಳ ಉಲ್ಲೇಖವಿದೆ.

ದಸರಾ ಎನ್ನುವುದು ದಶಂ ಹರ ಸಂಸ್ಕೃತ ಪದವಾಗಿದೆ. ದಶ ಎಂದರೆ





10, ಹರ ಎಂದರೆ ನಿರ್ಮೂಲನೆ ಮಾಡುವುದು. ಅಂದರೆ ನಮ್ಮಲ್ಲಿರುವ ಹತ್ತು ದುರ್ಗಣಗಳನ್ನು (ಕಾಮ, ಕ್ರೋಧ, ಮೋಹ, ಮದ, ಲೋಭ, ಮತ್ಸರ, ಸ್ವಾರ್ಥ, ಅನ್ಯಾಯ, ಅಮಾನವೀಯತೆ ಹಾಗೂ ಅಹಂಕಾರ) ನಾಶ ಮಾಡುವುದು ದಸರಾ ಹಬ್ಬದ ಹಿಂದಿರುವ ಸ್ವಾರಸ್ಯವಾಗಿದೆ. ನಮ್ಮಲ್ಲಿರುವ ಈ ಹತ್ತು ರಾಕ್ಷಸ ದುರ್ಗುಣಗಳನ್ನು ಕೊಂದು ವಿಜಯ ಸಾಧಿಸುವ ದಿನವೇ ನಾವೆಲ್ಲರೂ ವಿಜೃಂಭಣೆಯಿಂದ ಆಚರಿಸುವ ವಿಜಯದಶಮಿ. ನಾಡಹಬ್ಬದಂದು ನವರಾತ್ರಿ, ಆಯುಧ ಪೂಜೆ ಹಾಗೂ ವಿಜಯದಶಮಿ ಪ್ರಮುಖವಾದವು.

ವಿಜಯದ ಸಂಕೇತವಾದ ವಿಜಯ ದಶಮಿಯ ಆಚರಣೆ, ಅದರ ಹಿನ್ನೆಲೆ ಮತ್ತು ಮಹತ್ವವನ್ನು ತಿಳಿದುಕೊಳ್ಳುವುದು ಈ ಸಂದರ್ಭದಲ್ಲಿ ಸೂಕ್ತವೆನಿಸುತ್ತದೆ. ಸೃಷ್ಠಿ, ಪೋಷಣೆ, ಲಯ ಇವು ಜಗತ್ತಿನ ಮುಖ್ಯ ಆಧಾರಗಳು. ಜಗತ್ತಿನಲ್ಲಿ ಈ ಎಲ್ಲಾ ಕ್ರಿಯೆಗಳು ನಿರ್ವಿಘ್ನವಾಗಿ ಸಾಗಲು ಪ್ರಮುಖವಾಗಿ ದೈವಿಕ ಶಕ್ತಿಯಲ್ಲಿ ನಂಬಿಕೆ ಮುಖ್ಯ. ಈ ದೈವಿ ಶಕ್ತಿಯೇ ಓಂಕಾರ ಸ್ವರೂಪಿಯಾದ ಆದಿಶಕ್ತಿ. ದೇವಿ ಪೂಜೆಯ ಆಚರಣೆ ಭಾರತದಲ್ಲಿ ವಿವಿಧ ರೂಪಗಳಲ್ಲಿ ವಿಧಗಳಲ್ಲಿ ಪೂಜಿಸುತ್ತಾರೆ.

ಜಗನ್ಮಾತೆಯನ್ನು ನವವಿಧವಾಗಿ ಪೂಜಿಸುವುದು ಈ ನವರಾತ್ರಿಯ ವೈಶಿಷ್ಟ್ಯ. ನವರಾತ್ರಿಯ ಮೊದಲ ಮೂರು ದಿನ ದುರ್ಗೆಯನ್ನು ಪೂಜಿಸಲಾಗುತ್ತದೆ. ಅಸುರ ಶಕ್ತಿಯನ್ನು ದಮನಿಸುವ ಜೊತೆಗೆ ನಮ್ಮೊಳಗೆ ಹುದುಗಿರುವ ದುಷ್ಟತೆ, ಕೌರ್ಯಗಳ ಮೇಲೆಲ್ಲಾ ವಿಜಯಿಸುವ ಕಾಲ. ನಂತರ ಮೂರು ದಿನ ಲಕ್ಷ್ಮಿಯನ್ನು ಆರಾಧಿಸಲಾಗುತ್ತದೆ. ಈಕೆ ಜಗದ ಮಕ್ಕಳಿಗೆ ಸಂಪತ್ತು, ಮಮತೆ, ಸಮೃದ್ಧಿ, ಧಾರೆ ಎರೆಯುವ ಪ್ರತೀಕವಾಗಿರುತ್ತಾಳೆ. ಮಹಾನವಮಿಯವರೆಗಿನ ನಂತರದ ಮೂರು ದಿನಗಳಲ್ಲಿ ವಿದ್ಯಾಧಿದೇವತೆ ಸರಸ್ವತಿಯನ್ನು ಪೂಜಿಸಲಾಗುತ್ತದೆ. ಈ ಸಂದರ್ಭದಲ್ಲಿ ತಂದೆ ತಾಯಿ ಇನ್ನೇನೂ ಅಕ್ಷರ ಕಲಿಯಲು ಹೊರಟ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ನಿರ್ವಿಘ್ನವಾಗಿ ಸಾಗಲು ಸರಸ್ವತಿಯ ಸಾನಿಧ್ಯದಲ್ಲಿ ಅಕ್ಷರಾಭ್ಯಾಸ ಮಾಡಿಸಲಾಗುತ್ತದೆ.


ರಕ್ಷಣೆಗೆ ದುರ್ಗೆ, ಸಮೃದ್ಧಿಗೆ ಲಕ್ಷ್ಮಿ, ಜ್ಞಾನಕ್ಕೆ ಸರಸ್ವತಿ – ಈ ಮೂರು ಸೇರಿ ಉತ್ಕಟಗೊಳ್ಳುವುದೇ ಆದಿಶಕ್ತಿ. ಮಹಾನವಮಿಯ ದಿನದಂದು ವಿಜಯ ಸಾಧಿಸಲು ನೆರವಾಗಲು ಸಲಕರಣೆಗಳ ಆಯುಧ ಪೂಜೆ ನಡೆಸಲಾಗುತ್ತದೆ. ಕರ್ನಾಟಕದಲ್ಲಿ ದಸರಾ ಹಬ್ಬಕ್ಕೆ ನಾಡಹಬ್ಬ ಎಂದು ರೂಪ ಬಂದಿರುವ ಕಾರಣ ಐತಿಹಾಸಿಕ ಸಂಪ್ರದಾಯಗಳನ್ನು ಸಾರ್ವಜನಿಕವಾಗಿ ನೆರವೇರಿಸುವ ಮೂಲಕ ಕರ್ನಾಟಕದ ಭವ್ಯ ಪರಂಪರೆಗೆ ಸಂಸ್ಕೃತಿಯ ಮೆರಗು ನೀಡಲಾಗುತ್ತದೆ. ಉತ್ತರ ಭಾರತದಲ್ಲಿ ರಾವಣನ ಪ್ರಕೃತಿಯನ್ನು ಸ್ಥಾಪಿಸಿ ಅದರಲ್ಲಿ ಪಟಾಕಿಗಳನ್ನು ಇಟ್ಟು ಹತ್ತನೆಯ ದಿನ ರಾತ್ರಿ ಅದನ್ನು ಸುಟ್ಟು ಹಾಕುವ ಮೂಲಕ ರಾವಣನನ್ನು ವಧಿಸಿ ಸಂಭ್ರಮಿಸುತ್ತಾರೆ. ಇನ್ನೂ ಕೆಲವಡೆ ರಾಮಲೀಲಾ ಪ್ರಸಂಗವನ್ನು ಅಭಿನಯಿಸಿ ಈ ಹಬ್ಬವನ್ನು ಆಚರಿಸುತ್ತಾರೆ. ಹತ್ತು ದಿನಗಳ ಕಾಲ ದೇಶದ ತುಂಬೆಲ್ಲಾ ಸಂಭ್ರಮ ಆವರಿಸಿರುತ್ತದೆ. ಅಷ್ಟೇ ಅಲ್ಲ ವಿದೇಶದಲ್ಲೂ ಅತ್ಯಂತ ಸಂಭ್ರಮದಿಂದ ಆಚರಿಸಿದ ಅನೇಕ ಉದಾಹರಣೆಗಳು ಇವೆ.

ಇಂತಹ ನಾಡಹಬ್ಬವು ನ್ಯಾಯ ಮಾರ್ಗವಾಗಿ ಇರುವುದರಿಂದ ಮತ್ತು ಅಧರ್ಮವನ್ನು ಹಿಮ್ಮೆಟ್ಟುವ ಮೂಲಕ ವಿಜಯಯನ್ನು ಪ್ರಾಪ್ತಿಯಾಗಿಸಲು ಮತ್ತು ನ್ಯಾಯ, ಧರ್ಮ, ಸತ್ಯ, ಮಾರ್ಗದಲ್ಲಿ ನಡೆಯಲು ಜನರಿಗೆ ನೀಡುವ ಪ್ರೇರಣೆಯಾಗಿ ಈ ದಸರಾ ಹಬ್ಬವನ್ನು ಆಚರಿಸಲಾಗುತ್ತದೆ. ಸತ್ಯ, ಧರ್ಮ ಮತ್ತು ಅಧರ್ಮವನ್ನು ತಡೆಯಲೇಬೇಕೆಂದು ಮಾಡಿದ ದೃಢ ಸಂಕಲ್ಪವು ಅನೇಕ ರಾಕ್ಷಸರ ಸಂಹಾರಕ್ಕೆ ನೆರವಾಯಿತು. ಈ ಸಂಹಾರದ ಮೂಲಕ ವಿಜಯೋತ್ಸವದ ಸಂಕೇತವಾಗಿ ದಸರಾ ಹಬ್ಬವನ್ನು ಆಚರಿಸಲಾಗುತ್ತದೆ. ಮಾನವತೆಯ ಮನುಕುಲದ ಜಯವಾಗಿತ್ತು. ವಿಜಯದಶಮಿ ಹಬ್ಬದ ಆಚರಣೆಯ ಉದ್ದೇಶ ಇಷ್ಟೇ. ಮಾನವ ಕುಲದಲ್ಲಿ ನ್ಯಾಯ, ಸತ್ಯ, ಧರ್ಮ ಯಾವಾಗಲು ನೆಲೆಸಿರಬೇಕು, ಅದನ್ನು ನಮ್ಮ ಮುಂದಿನ ಪೀಳಿಗೆಯವರು ಸಹ ಧರ್ಮದ ಹಾದಿಯಲ್ಲಿ ನಡೆಯಬೇಕು, ಇಷ್ಟೊಂದು ಒಳ್ಳೆಯ ಆಶಯ, ಉದಾತ್ತ ಧ್ಯೇಯ ಹಾಗೂ ಸಂಭಮಗಳನ್ನು ತುಂಬಿಕೊಂಡ ಹಬ್ಬಗಳು ಇತ್ತೀಚಿಗೆ ಮಹತ್ವನ್ನು ಕಳೆದುಕೊಳ್ಳುತ್ತಿವೆಯೆನೋ ಎಂದು ಭಾಸವಾಗುತ್ತದೆ. ಜಾಗತೀಕರಣದ ಛಾಯೆಯಲ್ಲಿ ಹಬ್ಬಗಳೆಂದರೆ ಡಿಸ್ಕೌಂಟ್ ಸೇಲ್, ಶಾಪಿಂಗ್ ಸಮಯ, ಟಿವಿಯಲ್ಲಿ ವಿಶೇಷ ಕಾರ್ಯಕ್ರಮ, ಪ್ರವಾಸಕ್ಕೆ ಸಮಯ, ಕೇವಲ ರಜೆಗಳಿಗಾಗಿ ಹಬ್ಬಗಳ ಕಲ್ಪನೆ ಸರಿಯಲ್ಲ. ನಮ್ಮ ಸುಂದರ ಸಂಸ್ಕೃತಿಯ ಆಶಯಗಳು ನಿಧಾನವಾಗಿ ನೇಪಥ್ಯಕ್ಕೆ ಸರಿಯಬಾರದು, ಈ ನಿಟ್ಟಿನಲ್ಲಿ ನಮ್ಮ ಯುವಜನಾಂಗ ಮತ್ತು ನಾವು ಆಲೋಚಿಸಬೇಕಿದೆ.

ಕುಟುಂಬದ ಸದಸ್ಯರೆಲ್ಲರೂ ಒಟ್ಟುಗೂಡಿ ದೀಪಾವಳಿ, ಯುಗಾದಿ, ನಾಗರ ಪಂಚಮಿ, ಗಣೇಶ ಚತುರ್ಥಿ, ಕ್ರಿಸ್‌ಮಸ್, ರಂಜಾನ್ ಮುಂತಾದ ಹಬ್ಬಗಳನ್ನು, ಊರ ಜಾತ್ರೆಗಳನ್ನು ಒಟ್ಟಿಗೆ ಆಚರಿಸಲು ಕಡ್ಡಾಯವಾಗಿ ಬಿಡುವು ಮಾಡಿಕೊಳ್ಳಲೇಬೇಕು. ಇಲ್ಲವಾದರೆ ನಮ್ಮ ಸಂಸ್ಕೃತಿ ವಿನಾಶದತ್ತ ಸಾಗುವುದು ಖಂಡಿತ. ನಮ್ಮ ಅನಿವಾರ್ಯತೆಗಳಿಗೆ ನಮ್ಮ ಭಾವನೆಗಳನ್ನು ಕೊಲ್ಲುವುದು ಬೇಡ. ನಮ್ಮ ಸಂಸ್ಕೃತಿ ಹಾಗೂ ಸಂಸ್ಕಾರಗಳನ್ನು ಮರೆಯುವುದು ಬೇಡ. ವಿದೇಶಿ ಹಾಗೂ ವಿಲಾಸಿ ಜೀವನದ ದಾಸರಾಗುವುದು ಬೇಡ. ನಾವು ದುಡಿಯುವ ಯಂತ್ರಗಳಲ್ಲ. ನಮ್ಮ ಹಬ್ಬ ಹರಿದಿನಗಳನ್ನು ಸಂಭ್ರಮ ಸಡಗರಗಳಿಂದ ಆಚರಿಸೋಣ, ನಮ್ಮ ಸನಾತನ ಸಂಸ್ಕೃತಿಯನ್ನು ಉಳಿಸುವ ಪ್ರಯತ್ನ ಮಾಡೋಣ. ನಮ್ಮ ಬದುಕನ್ನು ಉತ್ತಮ ರೀತಿಯಲ್ಲಿ ಬದುಕುವುದನ್ನು ಕಲಿಯೋಣ.

**ಧರ್ಮವನ್ನು ರಕ್ಷಿಸಿದವರನ್ನು ಧರ್ಮ ರಕ್ಷಿಸುತ್ತದೆ.**

# RBI NEWS - AUGUST 2017



K. Vittal Shetty, Banking Consultant, kohimavittal@Hotmail.com, Mobile:9845699904

**The next meeting of the MPC is scheduled on October 3 and 4, 2017.**

| Policy Rates with effect from 02 AUGUST 2017. | % |
|---|---|
| POLICY REPO RATE | 6.00% |
| REVERSE REPO RATE | 5.75% |
| MARGINAL STANDING FACILITY RATE | 6.25% |
| BANK RATE | 6.25% |
| Reserve Ratios | % |
| Cash Reserve Ratio | 4.00% |
| Statutory Reserve Ratio WEF 24 JUNE 2017 | 20.00% |

Date : Aug 31, 2017

Scheduled Banks' Statement of Position in India as on Friday, August 18, 2017

(Amount in Billions of □)

| | | SCHEDULED COMMERCIAL BANKS (Including RRBs) | | | ALL SCHEDULED BANKS | | |
|---|---|---|---|---|---|---|---|
| | | 19-Aug-16 | 04-AUG-2017 * | 18-AUG-2017 * | 19-Aug-16 | 04-AUG-2017 * | 18-AUG-2017 * |
| I | a) Deposits | 96782.51 | 107549.53 | **106726.72** | 99440.98 | 109537.16 | **109649.89** |
| | i) Demand | 8905.54 | 11283.45 | **11128.2** | 9130.96 | 11467.74 | **11405.95** |
| | ii) Time | 87876.97 | 96266.15 | **95598.5** | 90310.01 | 98069.49 | **98243.92** |
| II | CASH | 617.31 | 655.14 | **717.52** | 632.48 | 675.57 | **739.05** |
| III | BALANCES WITH R.B.I. (B) | 3887.96 | 4396.47 | **4409.8** | 4000.29 | 4516.7 | **4535.19** |
| IV | INVESTMENTS | 28097.26 | 32984.9 | **33130.99** | 28884.5 | 33630.76 | **34103.01** |
| V | BANK CREDIT | 72477.19 | 77279.49 | **77042.3** | 74703.81 | 78520.84 | **79471.26** |

**August 16, 2017 :** Core Banking Solution (CBS) Requirements for Urban Co-operative Banks (UCBs)

Refer to RBI circular DCBR.CO.PCB.Cir. No.14/09.18.300/2015-16 dated April 13, 2016 announcing the Scheme for providing financial assistance to urban co-operative banks for implementation of Core Banking Solution (CBS).

2. As stated therein, a document dealing with the functional and technical requirements for Core Banking Solution in Urban Co-operative Banks has been prepared by the Institute for Development and Research in Banking Technology (IDRBT) in consultation with the Reserve Bank. The document can be accessed at the IDRBT website under the link http://www.idrbt.ac.in/assets/publications/Reports/CBS_Requirements_for_UCBs.pdf

3. The document is expected to serve as a reference material for implementing and improving CBS in the banks.

**Aug 18, 2017 :** RBI Introduces Rs. 50 banknote in Mahatma Gandhi (New) Series

The Reserve Bank of India will shortly issue Rs. 50 denomination banknotes in the Mahatma Gandhi (New) Series, bearing signature of Dr. Urjit R. Patel, Governor, Reserve Bank of India. The new denomination has motif of Hampi with Chariot on the reverse, depicting the country's cultural heritage. The base colour of the note is Fluorescent Blue. The note has other designs, geometric patterns aligning with the overall colour scheme, both at the obverse and reverse.

All the banknotes in the denomination of Rs. 50/- issued by the Reserve Bank in the earlier series will continue to be legal tender.

The image and salient features of Rs. 50 denomination banknote in the Mahatma Gandhi (New) Series are as under:

**i. Image**

Obverse (Front)




Reverse (Back)




**ii Salient Features**

Obverse (Front)

1. See through register with denominational numeral 50
2. Denominational numeral in Devnagari
3. Portrait of Mahatma Gandhi at the centre
4. Micro letters 'RBI', 'INDIA' and '50'
5. Windowed demetalised security thread with inscriptions and RBI
6. Guarantee Clause, Governor's signature with Promise Clause and RBI emblem towards right of Mahatma Gandhi portrait
7. Ashoka Pillar emblem on the right
8. Mahatma Gandhi portrait and electrotype (50) watermarks
9. Number panel with numerals growing from small to big on the top left side and bottom right side.

Reverse (Back)

10. Year of printing of the note on the left
11. Swachh Bharat logo with slogan
12. Language panel
13. Motif of Hampi with Chariot
14. Denominational numeral in Devnagari.

Dimension of the banknote will be 66 mm x 135 mm.



# "ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ"

ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ದುಷ್ಟ ಶಿಕ್ಷಣೆ, ಶಿಷ್ಟ ರಕ್ಷಣೆ ಹಾಗೂ ಧರ್ಮ ಸಂಸ್ಥಾಪನೆಗಳೆಂಬ ಮೂರು ಉದ್ದೇಶಗಳನ್ನು ಮುಂದಿಟ್ಟುಕೊಂಡು ಅವತರಿತನಾದ ಭಗವಂತ ಶ್ರೀಕೃಷ್ಣನು ಕುರುಕ್ಷೇತ್ರ ಸಮರದಲ್ಲಿ ತನ್ನ ಬಂಧು ಬಾಂಧವರನ್ನು ಕೊಲ್ಲಬೇಕಲ್ಲ ಎಂಬ ಹೃದಯ ದೌರ್ಬಲ್ಯಕ್ಕೊಳಗಾಗಿದ್ದಾಗ ಸಮಯೋಚಿತವಾಗಿ ಗೀತಜ್ಞಾನ ನೀಡಿ "ಕರ್ಮಯೋಗ" ಎಂಬ ಮಹಾಧ್ಯಾಯವನ್ನು ವರ್ಣಿಸಿ ಭಯವಿಹ್ವಲನಾದ ಅರ್ಜುನನನ್ನು ಕಾರ್ಯತತ್ಪರನನ್ನಾಗಿಸುತ್ತಾನೆ. ಇನ್ನು ವಚನ ಪುರುಷ "ಸಮಾನತೆಯ ಹರಿಕಾರ" ಭಕ್ತಿ ಭಂಡಾರಿ ಬಸವಣ್ಣನವರು "ಕಾಯಕವೇ ಕೈಲಾಸ"ವೆಂಬ ಮಹಾನ್‌ಉಕ್ತಿಯ ಮೂಲಕ ಕೆಲಸದ ಮಹತ್ವವನ್ನು ಅರಿವಿಗೆ ತಂದರು.

ಜೀವನದ ನಿರ್ವಹಣೆಗೆ ಪ್ರತಿಯೊಬ್ಬನೂ ನಿಹಿತವಾದ ಕರ್ತವ್ಯವನ್ನು ಮಾಡುತ್ತಾ ದುಡಿಮೆಯನ್ನಾಧರಿಸಿ ಬದುಕಬೇಕೆಂಬುದು ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿ. ಆದರೆ ಅದೇಕೋ ಹಿಂದಿನವರಲ್ಲಿದ್ದ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ಶ್ರದ್ಧೆ, ಪರಿಶ್ರಮಗಳು ಇಂದು ಇಲ್ಲವಾಗುತ್ತಿರುವುದು ಸಾಧಾರಣ ದೃಶ್ಯ. ಶ್ರಮವಿಲ್ಲದ ದುಡಿಮೆ ಬೇಕು, ಇತರರ ಬೆವರಿನಿಂದ ಬಂದ ಪ್ರತಿಫಲ ತಮ್ಮದಾಗಬೇಕೆಂಬ ಪರಾವಲಂಬಿ ಭಾವನೆ ಎದ್ದು ಕಾಣುತ್ತಿದೆ. "ನಿಷ್ಕಾಮಕರ್ಮ" ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡೆಂದು ಧರ್ಮಗ್ರಂಥಗಳು ಸೂಚಿಸಿದರೆ ನಾವುಗಳು "ನಿಷ್ಕರ್ಮ ಕಾಮ" ಕೆಲಸ ಮಾಡದೇ ಫಲಬೇಕೆಂಬ ಮನಸಿಗರಾಗಿದ್ದೇವೆ. ಕೆಲಸ ಮಾಡದೇ ಸೋಮಾರಿಗಳಾದ ನಮಗೆ ಹಲವು ಕರ್ತವ್ಯಗಳು ಬಾಕಿಯುಳಿದ ಹಂತದಲ್ಲಿ ಇಂತಹದೊಂದು "More work, less time attitude" ಪರಿಸ್ಥಿತಿ ಬಹುಸಂಖ್ಯಾತ ಜನರಲ್ಲಿ ಹಬ್ಬಿದೆ.

ಮೇಲಿನ ಎಲ್ಲಾ ಅಂಶಗಳನ್ನು ಬಹಳ ಹಿಂದಿನ ಕಾಲದಲ್ಲಿಯೇ ಗಮನಿಸಿದ ತಿಮ್ಮಗುರು ಡಿ.ವಿ.ಜಿ.ಯವರು ಕೆಲಸದ ಮಹತ್ವವನ್ನು ಸಾರುವ ಸುಂದರ ಪದ್ಯವನ್ನು ನಮಗಿತ್ತಿದ್ದಾರೆ, ಅದು ಹೀಗಿದೆ:

**"ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು**
**ದೊರೆತುದ ಹಸಾದವೆಂದುಣ್ಣು ಗೊಣಗಿಡದೆ**
**ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ**
**ಹೊರಡು ಕರೆ ಬರಲ್ ಅಳದೆ ಮಂಕುತಿಮ್ಮ"**

ಇದರ ಒಟ್ಟಾರೆ ತಾತ್ಪರ್ಯವೆಂದರೆ ಕಾರ್ಯತತ್ಪರನಾಗು, ತೃಪ್ತಿ ಹಾಗೂ ಸುಖವನ್ನು ಪಡೆ, ಇತರರ ಹಾಗೂ ಸಮಾಜದ ಸುಖವನ್ನು ಭರಿಸುವವನಾಗೆಂಬುದು. ಶ್ರದ್ಧೆ, ಭಕ್ತಿಗಳಿಂದ ಕಾರ್ಯತತ್ಪರನಾಗಿ ಭಗವಂತನನ್ನು ಹಿಂಗಾವಲು, ಮುಂಗಾವಲು, ಬೆಂಗಾವಲುಗಳನ್ನಾಗಿ ಹೊಂದಿ, ಎಲ್ಲಾ ಕಾರ್ಯಗಳಲ್ಲಿ ಜಯ ಪಡೆಯಿರಿ ಎಂಬುದೇ ಆಗಿದೆ. ಸರ್ವರ ಹಿತದ ತತ್ವವಾದ ಸಹಕಾರ ತತ್ವವನ್ನು ಅನುಷ್ಠಾನಕ್ಕೆ ತರುತ್ತಾ ಮನುಕುಲದ ಅಭಿವೃದ್ಧಿಯನ್ನು ಸಾಧಿಸಿರೆಂಬುದೇ ಈ ಪದ್ಯದ ಮಹದುದ್ದೇಶವಾಗಿದೆ. ಈ ಪದ್ಯದ ಅಂತಿಮ ಸಾಲು. "ಹೊರಡು ಕರೆ ಬರಲ್ ಅಳದೆ" ಸಾರವತ್ತಾಗಿದೆ. ಜಾತಸ್ಯ ಮರಣಂ ಧೃವಂ ಎಂಬ ಲೋಕೋಕ್ತಿಯನ್ವಯ ಪ್ರತಿಯೊಬ್ಬನೂ ಮೃತ್ಯುವಿನ ಅತಿಥಿಯೇ. ಇಂತಹ ನಿಜ ಅಂತ್ಯವನ್ನರಿತು ತನ್ನ ಹಾಗೂ ಇತರರಿಗೆ ಹಿತಕಾರಿಯಾಗುವಂತಹ ಸರ್ವರ ಅಭಿವೃದ್ಧಿಯ ಸಹಕಾರವನ್ನು ಅನುಷ್ಠಾನಕ್ಕೆ ತನ್ನಿ, ತನ್ಮೂಲಕ ಪರನಾತ್ಮನಿಗೆ ಪರಮಾಪ್ತನಾಗಿ ಎಂಬುದೇ ಮನದಾಳದ ಕರೆಯಾಗಿದೆ.

**Aug 24, 2017 :** RBI Introduces Rs. 200 denomination banknote

The Reserve Bank of India will issue on August 25, 2017 Rs. 200 denomination banknotes in the Mahatma Gandhi (New) Series, bearing signature of Dr. Urjit R. Patel, Governor, Reserve Bank of India from select RBI offices, and some banks. The new denomination has Motif of Sanchi Stupa on the reverse, depicting the country's cultural heritage. The base colour of the note is Bright Yellow. The note has other designs, geometric patterns aligning with the overall colour scheme, both at the obverse and reverse.

The image and salient features of Rs. 200 denomination banknotes in the Mahatma Gandhi (New) Series are as under:

**i. Image**

Obverse (Front)



Reverse (Back)



Directions,Withdrwals,Penalties & Cancellation of Licences of Urban Co-operative Banks.

**1) Aug 01, 2017 :** Nagar Sahkari Bank Ltd., Etawah – Penalised a monetary penalty of Rs. 20,000/-.

**2) Aug 02, 2017 :** Directions under Section 35A of the Banking Regulation Act, 1949 (AACS) - The Bhopal Nagrik Sahakari Bank Limited, Bhopal - Extension of Periodup to July 31, 2017.

**3) Aug 02, 2017 :** Tirumala Co-operative Urban Bank Ltd., Hyderabad, Telangana - Penaliseda monetary penalty of Rs. 2.00 lakh

**4) Aug 23, 2017 :** RBI cancels the license of Mahamedha Urban Co-operative Bank Ltd., Ghaziabad, Uttar Pradesh.

**5) Aug 23, 2017 :** Reserve Bank of India withdraws Directions on Sri Bharathi Co-operative Urban Bank Limited, Hyderabad, Telangana State.

**6) Aug 31, 2017 :** Directions under Section 35A of the Banking Regulation Act, 1949 (AACS) - Maratha Sahakari Bank Ltd., Mumbai, Maharashtra.

**7) Aug 31, 2017 :** RBI cancels the license of Hardoi Urban Co-operative Bank Ltd., Hardoi, Uttar Pradesh

Source: www.rbi.org.in



# ಸಹಕಾರಿಗಳಿಗೆ ಅನ್ವಯಿಸುವಂತೆ ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ ಕಾಯ್ದೆ)

ಬಿ.ವಿ.ರವೀಂದ್ರನಾಥ್, ಸಾಗರ bvrnath@gmail.com

**ಜಿಎಸ್‌ಟಿ ಎಂದರೇನು? :** ಜಿಎಸ್‌ಟಿ ಅಥವಾ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಎಂಬುದು ಒಂದು ದೇಶ ಒಂದು ಕಾಯ್ದೆ ಎಂಬ ಆಶಯದ ಹಿನ್ನೆಲೆಯಲ್ಲಿ ರೂಪುಗೊಂಡ ಪರೋಕ್ಷ ತೆರಿಗೆ ಕಾಯ್ದೆಯಾಗಿರುತ್ತದೆ. ಇದರಿಂದಾಗಿ ಇಡೀ ದೇಶ ಒಂದೇ ಸಾಮಾನ್ಯ ಮಾರುಕಟ್ಟೆಯಾಗುವುದು. ಉತ್ಪಾದಕನಿಂದ ಉಪಯೋಗಿಸುವವನವರೆಗೆ ಉತ್ಪಾದನೆ, ಪೂರೈಕೆ, ಸೇವೆಗಳ ಮೇಲೆ ವಿಧಿಸುವ ಒಂದೇ ತೆರಿಗೆ ಇದಾಗಿರುತ್ತದೆ.

**ಜಿಎಸ್‌ಟಿ ಅಗತ್ಯವೇನು? :** ಪ್ರಸಕ್ತ ನಮ್ಮ ದೇಶದಲ್ಲಿ ಅನೇಕ ಪರೋಕ್ಷ ತೆರಿಗೆಗಳು ಜಾರಿಯಲ್ಲಿವೆ. ಪ್ರತಿ ರಾಜ್ಯದಲ್ಲೂ ಅನೇಕ ಪರೋಕ್ಷ ತೆರಿಗೆಗಳು ಚಾಲ್ತಿಯಲ್ಲಿವೆ. ಪ್ರತಿ ತೆರಿಗೆ ಕಾಯ್ದೆಯಲ್ಲೂ ಜಟಿಲತೆ, ಗೊಂದಲಗಳು ಮುಂದುವರೆಯುತ್ತಿವೆ. ಅದಲ್ಲದೆ ಈ ಎಲ್ಲಾ ಪರೋಕ್ಷ ತೆರಿಗೆಗಳು ಬಹು ಹಂತದ ತೆರಿಗೆ ಪದ್ಧತಿಯಲ್ಲಿರುವುದರಿಂದ ಅಂತಿಮ ಗ್ರಾಹಕನು ತೆರಿಗೆಯ ಮೇಲೆ ತೆರಿಗೆ ಕೊಡುವ ಪರಿಸ್ಥಿತಿ ಉಂಟಾಗಿರುತ್ತದೆ. ಅನೇಕ ತೆರಿಗೆಗಳನ್ನು ಅನುಷ್ಠಾನ ಮಾಡಲು ಸರಕಾರದ ಅನೇಕ ಇಲಾಖೆಗಳು ಇರುವುದರಿಂದ ಸರಕಾರವು ಅನಗತ್ಯ ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವ ಸ್ಥಿತಿಯಿರುತ್ತದೆ. ತಯಾರಕರು, ಉದ್ದಿಮೆದಾರರು, ಹಂಚಿಕೆದಾರರು, ವ್ಯಾಪಾರಸ್ಥರು, ಸೇವಾದಾತರು ಹೀಗೆ ಎಲ್ಲಾ ವಾಣಿಜ್ಯ ವಹಿವಾಟುದಾರರೂ ಅನಗತ್ಯವಾಗಿ ಹೆಚ್ಚಿನ ಅನುಸರಣಾ ವೆಚ್ಚಗಳನ್ನು ಭರಿಸಬೇಕಾದ ಪರಿಸ್ಥಿತಿಯಿದೆ. ಈ ಎಲ್ಲಾ ತೊಂದರೆಗಳನ್ನು ನಿವಾರಿಸಲು ಕೇಂದ್ರ ಸರಕಾರ ಪ್ರಸ್ತಾಪಿಸಿರುವ ಹೊಸ ಕಾಯ್ದೆಯೇ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ.

**ಏನೇನು ವಿಲೀನಗೊಳ್ಳುತ್ತದೆ? :** ಪ್ರಸ್ತಾಪಿತ ಜಿಎಸ್‌ಟಿ ಕಾಯ್ದೆಯಲ್ಲಿ ಕೆಳಕಾಣಿಸಿದ ತೆರಿಗೆ ಕಾಯ್ದೆಗಳು ವಿಲೀನಗೊಳ್ಳುತ್ತವೆ.

| ಕೇಂದ್ರ ತೆರಿಗೆಗಳು | ರಾಜ್ಯ ತೆರಿಗೆಗಳು |
|---|---|
| • Central Excise Duty<br>• Additional Excise Duty<br>• Service Tax<br>• Customs Duty<br>• Additional Customs Duty<br>• Special Additional Duty of<br>• Customs<br>• Central Sales Tax<br>• Cesses and surcharges | • State Value Added Tax/Sales Tax,<br>• Entertainment Tax (other than levied by local bodies)<br>• Octroi<br>• Entry tax<br>• Purchase Tax<br>• Luxury tax<br>• Taxes on lottery, betting and gambling |

**ಏನೇನು ವಿಲೀನಗೊಳ್ಳುವುದಿಲ್ಲ? :** ಪ್ರಸ್ತಾಪಿತ ಜಿಎಸ್‌ಟಿ ಕಾಯ್ದೆಯಲ್ಲಿ ಕೆಳಕಾಣಿಸಿದ ಪರೋಕ್ಷ ತೆರಿಗೆ ಕಾಯ್ದೆಗಳು ವಿಲೀನಗೊಳ್ಳುವುದಿಲ್ಲ.

| ಕೇಂದ್ರ ತೆರಿಗೆಗಳು | ರಾಜ್ಯ ತೆರಿಗೆಗಳು |
|---|---|
| • Import Duty | • Stamp Duty<br>• Road Tax<br>• Electricity Tax<br>• Local Taxes (Levied by Local Bodies) |

**ಸಹಕಾರಿಗಳಿಗೆ ಜಿಎಸ್‌ಟಿ ಅನ್ವಯಿಸುವುದೆ?**

- ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಎಲ್ಲಾ ವ್ಯಕ್ತಿಗಳಿಗೂ ಅನ್ವಯಿಸುತ್ತದೆ.
- ವ್ಯಕ್ತಿಯ ಪರಿಭಾಷೆಯಲ್ಲಿ ಸಹಕಾರಿ ಸಂಸ್ಥೆಗಳೂ ಸೇರಿವೆ. (a co-operative society registered under any law relating to co-operative societies;)
- **ಪೂರೈಕೆ :** ಒಬ್ಬ ವ್ಯಕ್ತಿಯು ತನ್ನ ವ್ಯವಹಾರದಲ್ಲಿ ಯಾ ವ್ಯವಹಾರಕ್ಕೋಸ್ಕರ ಪ್ರತಿಫಲಕ್ಕಾಗಿ ಮಾಡುವ ಯಾ ಮಾಡಲು ಒಪ್ಪುವ ಎಲ್ಲಾ ರೀತಿಯ ಸರಕು ಯಾ ಸೇವೆಯ ಪೂರೈಕೆ (All forms of supply of goods or services or both made or agreed to be made for a consideration by a person in the course or furtherance of business)
- **ಸರಕು ಯಾ ಸೇವೆ :** ಸರಕು ಎಂದರೆ ಹಣ, ಭದ್ರತಾ ಪತ್ರಗಳ ಹೊರತಾಗಿ ಎಲ್ಲಾ ತರಹದ ಚರಸೊತ್ತುಗಳು (Goods means every kind of movable property other than money and securities) ಸರಕು, ಹಣ, ಭದ್ರತಾ ಪತ್ರಗಳ ಪೂರೈಕೆಗಳ ಹೊರತಾಗಿ ಯಾವುದೇ ರೀತಿಯ ಪೂರೈಕೆ (Any supply other than goods, money and securities)
- **ವಿನಾಯಿತಿ :** ಕ್ರೆಡಿಟ್ ಕಾರ್ಡ್ ಸೇವೆಯ ಮೇಲಿನ ಬಡ್ಡಿ ಯಾ ಶುಲ್ಕದ ಹೊರತಾಗಿ ಯಾವುದೇ ಠೇವಣಿ ಯಾ ಸಾಲದ ಮೇಲೆ ಸ್ವೀಕರಿಸುವ ಎಲ್ಲಾ ರೀತಿಯ ಬಡ್ಡಿ ಯಾ ರಿಯಾಯಿತಿಗಳು.
  ವಿದೇಶಿ ಹಣ ಮಾರಾಟ/ ಖರೀದಿಯ ಆದಾಯ.

**ಸಹಕಾರಿ ಸಂಸ್ಥೆಗಳು ಮತ್ತು ಜಿಎಸ್‌ಟಿ :**

- ಸಹಕಾರಿ ಸಂಸ್ಥೆಗಳು ತೆರಿಗೆದಾಯಕ ಸೇವೆ ನೀಡುತ್ತಿದ್ದಲ್ಲಿ ಜಿಎಸ್‌ಟಿ ನೋಂದಣಿಯಾಗಿ ತೆರಿಗೆ ಪಾವತಿಸಬೇಕಿರುತ್ತದೆ.
- ಸಹಕಾರಿ ಸಂಸ್ಥೆಗಳ ಎಲ್ಲಾ ರೀತಿಯ ಒಟ್ಟು ಆದಾಯಗಳು ಅಂದರೆ ಬಡ್ಡಿಯೂ ಸೇರಿದಂತೆ ಕಮಿಷನ್, ಬೋನಸ್, ದಾಖಲಾತಿ ಶುಲ್ಕ, ಲಾಕರ್ ಬಾಡಿಗೆ, ಫೀಸ್, ಬ್ರೋಕರೇಜ್, ರಿಕವರಿ ಚಾರ್ಜಸ್, ಡಿಸ್ಕೌಂಟ್, ಲೀಗಲ್ ಯಾ ಇತರೆ ಶುಲ್ಕಗಳು ವಾರ್ಷಿಕ 20 ಲಕ್ಷ ರೂ.ಗಳಿಗೆ ಮೀರುವಂತಿದ್ದರೆ ನೋಂದಣಿ ಪಡೆಯಬೇಕು.
- ಸಹಕಾರಿ ಸಂಸ್ಥೆಗಳ ಎಲ್ಲಾ ರೀತಿಯ ಬಡ್ಡಿಯೇತರ ಆದಾಯಗಳ ಮೇಲೆ ಶೇ.18ರಂತೆ ಜಿಎಸ್‌ಟಿ ತೆರಿಗೆ ಪಾವತಿಸಬೇಕು.

**ನೋಂದಣಿ :**

- ಪ್ರತಿಯೊಬ್ಬ ಸರಬರಾಜುದಾರನು ಅವನ ಒಟ್ಟು ವಹಿವಾಟು 20 ಲಕ್ಷ ಮೀರಿದರೆ ಅರ್ಜಿ ಸಲ್ಲಿಸಬೇಕು.
- ವಹಿವಾಟು ಎಂದರೆ ಸರಕು ಮತ್ತು ಸೇವೆಗಳ ಸರಬರಾಜು ಎರಡೂ ಸೇರಿರುತ್ತದೆ.
- ಕೇವಲ ವಿನಾಯಿತಿ ಸೇವೆ ನೀಡುವವರು ಅರ್ಹ ಮಿತಿ ದಾಟಿದರೂ ನೋಂದಣಿ ಕಡ್ಡಾಯವಿಲ್ಲ.
- ತೆರಿಗೆದಾಯಕ ಸೇವಾದಾತರು ಕಡ್ಡಾಯವಾಗಿ ನೋಂದಣಿ ಪಡೆಯತಕ್ಕದ್ದು.

**ಅಗತ್ಯ ಮಾಹಿತಿ ಮತ್ತು ದಾಖಲೆಗಳು**


- Regn Certificate copy
- Name & PAN No. of the Co operative
- Valid Email & Mobile No.
- Bank A/c No. & IFS Code
- Bank Pass Book copy
- Rent Agreement/property docs

- Letter of authority in favour of CEO or AP (Authorised Person)
- Photographs of CEO or AP
- Aadhaar, PAN, Voter ID of CEO or AP
- Digital Signature of CEO or AP

**ನೋಂದಣಿ ಪ್ರಕ್ರಿಯೆ ಬಗ್ಗೆ ಒಂದಿಷ್ಟು :**

- ಎಲ್ಲವೂ ಅಂತರ್ಜಾಲದ ಮೂಲಕ.
- ಭೌತಿಕ ದಾಖಲೆ ಸಲ್ಲಿಕೆ ಇರುವುದಿಲ್ಲ.
- Provisional ಆಯೊಡನೆ ವ್ಯವಹಾರ ಪ್ರಾರಂಭಿಸಬಹುದು.
- ನೋಂದಣಿಗೆ ಯಾವುದೇ ಶುಲ್ಕವಿರುವುದಿಲ್ಲ.
- ನೋಂದಣಿಯ ಸಂದರ್ಭದಲ್ಲಿ ಯಾವುದೇ ಠೇವಣಿ ಇಡುವ ಅಗತ್ಯವಿಲ್ಲ.
- ಸಲ್ಲಿಸಿದ ದಾಖಲೆಗಳು, ವಿವರಗಳು ತಪ್ಪಿದ್ದಲ್ಲಿ ಸರಿಪಡಿಸಲು ಅವಕಾಶ.
- ಸಲ್ಲಿಸಿದ ದಾಖಲೆಗಳು, ವಿವರಗಳು ಖೊಟ್ಟಿಯಾಗಿದ್ದಲ್ಲಿ ದಂಡನೆ.
- ನೋಂದಣಿ ಪ್ರಮಾಣಪತ್ರಗಳನ್ನು ಅಂತರ್ಜಾಲದಿಂದಲೇ ಪಡೆಯಬೇಕು.

**ಜಿಎಸ್‌ಟಿಯ ನೋಂದಣಿ ಸಂಖ್ಯೆಯ ವೈಶಿಷ್ಟ್ಯಗಳು :**




**ಸಹಕಾರಿ ಸಂಸ್ಥೆಗಳ ತೆರಿಗೆ ಮುಕ್ತ ಸೇವೆಗಳು/ ಆದಾಯಗಳು :**

- ತೆರಿಗೆ ಮುಕ್ತ ಸರಕುಗಳ ಮಾರಾಟ.
- ದಂಡ ಬಡ್ಡಿ, ವಿಳಂಬ ಬಡ್ಡಿ ಸೇರಿದಂತೆ ಸಾಲಗಳ ಮೇಲಿನ ಎಲ್ಲಾ ರೀತಿಯ ಬಡ್ಡಿಗಳು.
- ಠೇವಣಿ/ ಹೂಡಿಕೆಗಳ ಮೇಲಿನ ಬಡ್ಡಿಗಳು.
- ಹೂಡಿಕೆಗಳ ಮಾರಾಟದಿಂದ ಬಂದ ಲಾಭ.
- ಹೂಡಿಕೆಗಳ ಮೇಲಿನ ಲಾಭಾಂಶ (ಡಿವಿಡೆಂಡ್).
- ಸ್ಥಿರಾಸ್ತಿ/ ಚರಾಸ್ತಿಗಳ ಮಾರಾಟದ ಲಾಭ.
- ಸದಸ್ಯರಿಂದ ಸಂಗ್ರಹಿಸಿದ ದೇಣಿಗೆಗಳು, ನಿಧಿಗಳಿಗೆ ಚಂದಾ ವಗೈರೆ.

**ಸಹಕಾರಿ ಸಂಸ್ಥೆಗಳ ತೆರಿಗೆದಾಯಕ ಸೇವೆಗಳು/ ಆದಾಯಗಳು :**

- ಮಾರಾಟವೂ ಸೇರಿದಂತೆ ಯಾವುದೇ ರೀತಿಯ ವಾಣಿಜ್ಯ ವ್ಯವಹಾರದ ಆದಾಯ.
- ಚೆಕ್, ಡಿಡಿ, ಪೇ ಆರ್ಡರ್, ಇನ್ನಿತರ ಹಣ ವರ್ಗಾವಣೆ ಶುಲ್ಕಗಳು.
- ಎಲ್ಲಾ ರೀತಿಯ ದಲ್ಲಾಳಿ (ಕಮಿಷನ್).
- ಸಾಲ ಮಂಜೂರಾತಿ ಪ್ರಕ್ರಿಯೆ ಶುಲ್ಕಗಳು.
- ಎಟಿಎಂ, ಕ್ರೆಡಿಟ್/ ಡೆಬಿಟ್ ಕಾರ್ಡ್ ಶುಲ್ಕಗಳು.
- ಪ್ರೀಪೇಮೆಂಟ್ ಚಾರ್ಜಸ್.
- ಲಾಕರ್ ಬಾಡಿಗೆ.
- ವಿದೇಶೀ ವಿನಿಮಯ ಶುಲ್ಕಗಳು.
- ಲೆಟರ್ ಆಫ್ ಕ್ರೆಡಿಟ್/ ಗ್ಯಾರಂಟಿ ಕಮಿಷನ್.
- ಸದಸ್ಯತ್ವ ಶುಲ್ಕ ಪ್ರವೇಶ ಶುಲ್ಕ.
- ಇತರೆ ಯಾವುದೇ ಆದಾಯಗಳು.

**ತೆರಿಗೆ ಹಿಂಪಡೆಯುವ ಸೌಲಭ್ಯ :**

- ನೀಡಿದ ವಿನಾಯಿತಿ ಸೇವೆ, ತೆರಿಗೆದಾಯಕ ಸೇವೆ – ಇವುಗಳ ಅನುಪಾತಕ್ಕನುಗುಣವಾಗಿ ಹೂಡುವಳಿ ತೆರಿಗೆ ಹಿಂಪಡೆಯುವ ಸೌಲಭ್ಯವಿದೆ.
- ಠೇವಣಿ ಸ್ವೀಕರಿಸುವ, ಸಾಲ ನೀಡುವ ಹಣಕಾಸು ಸಂಸ್ಥೆಗಳು ಹೂಡುವಳಿ ತೆರಿಗೆಯ 50%ರಷ್ಟನ್ನು ಹಿಂಪಡೆಯುವ ಸೌಲಭ್ಯವಿದೆ.
- ಒಮ್ಮೆ ಈ ಸೌಲಭ್ಯ ಪಡೆದುಕೊಂಡಲ್ಲಿ ವರ್ಷ ಮಧ್ಯದಲ್ಲಿ ಬದಲಾವಣೆಗೆ ಅವಕಾಶವಿಲ್ಲ.
- ವ್ಯವಹಾರಕ್ಕೆ ಬಳಸದ ಸರಕು ಯಾ ಸೇವೆಯ ಮೇಲಿನ ಹೂಡುವಳಿ ತೆರಿಗೆ ಪಡೆಯುವಂತಿಲ್ಲ.
- ಒಂದೇ ಪಾನ್ ಸಂಖ್ಯೆಗೆ 100% ಹಿಂಪಡೆಯುವ ಸೌಲಭ್ಯ.

**ಪತ್ತಿನ ಸಹಕಾರಿಗಳಿಗೆ ಇರುವ ತೆರಿಗೆ ಹಿಂಪಡೆಯುವ ಸೌಲಭ್ಯದ ಅವಕಾಶಗಳು :**

| Particulars | Deemed 50% | Normal |
|---|---|---|
| Blocked Credits (Foods and Beverages, Rent a Cab etc) | N I L | N I L |
| Non- Business Use | N I L | N I L |
| Supplies by Distinct Persons | 100% | 100% |
| Inward supplies directly relating to taxable outward supplies (ATM operation charges, ATM audit fees, Credit Card services charges) | 50% | 100% |
| Inward supplies directly relating to exempt outward supplies | 50% | N I L |
| Inward supplies used commonly | | |
| (Rent, Commission, Professional Fees, etc.) | 50% | Retention |

$$\text{Retention} = \frac{\text{Aggregate value of exempt supply}}{\text{Aggregate value of taxable supply + exempt supply}}$$

**ವೆಚ್ಚಗಳ ಮೇಲಿನ ತೆರಿಗೆ ಪಾವತಿ (RCM) :**

- **ಕೆಳಕಾಣಿಸಿದ ವೆಚ್ಚಗಳ ಹೊರತಾಗಿ ಎಲ್ಲಾ ವೆಚ್ಚಗಳು;**
  - ✔ ಠೇವಣಿಗಳ ಮೇಲಿನ ಬಡ್ಡಿ.
  - ✔ ಸಾಲ–ಮುಂಗಡಗಳ ಮೇಲಿನ ಬಡ್ಡಿ.
  - ✔ ಸವಕಳಿಗಳು, ದೇಣಿಗೆಗಳು.
  - ✔ ನಿಧಿಗಳು ಯಾ ಪ್ರಾವಧಾನಗಳು.
  - ✔ ಸಿಬ್ಬಂದಿಗಳಿಗೆ ನೀಡಿದ ಸಂಬಳ, ಸವಲತ್ತುಗಳು.
  - ✔ ಸರಕಾರಕ್ಕೆ ಪಾವತಿಸಿದ ತೆರಿಗೆ, ದಂಡ, ಇತ್ಯಾದಿ.
  - ✔ ಒಂದು ದಿನದಲ್ಲಿ 5000 ರೂ.ಗಳಿಗೆ ಮೀರದ ವೆಚ್ಚಗಳು.
- **ಕೆಳಕಾಣಿಸಿದ ವೆಚ್ಚಗಳೂ ಸೇರಿದಂತೆ ಎಲ್ಲಾ ವೆಚ್ಚಗಳು;**
  - ✔ ಸಭಾ ಭತ್ಯೆ ಸೇರಿದಂತೆ ಯಾವುದೇ ಭತ್ಯೆ, ಗೌರವಧನ
  - ✔ ಪಿಗ್ಮಿ ಕಮಿಷನ್/ ಮೌಲ್ಯಮಾಪನ ಶುಲ್ಕ*.
  - ✔ ಹಂಗಾಮಿ ನೌಕರರ ಕೂಲಿ, ಸಂಬಳ, ಇತ್ಯಾದಿ.
  - ✔ ಬಾಡಿಗೆ, ನಿರ್ವಹಣಾ ಶುಲ್ಕ ಇತ್ಯಾದಿ.
  - ✔ ಖರೀದಿಗಳ ಹೊರತಾಗಿ ಇತರೆ ವೆಚ್ಚಗಳು.

ಮುಂದಿನ ಸಂಚಿಕೆಗೆ...



# FEEL YOGA THE DIVINE RHYTHM

By: 'Management Guru' **Harish R.**,
CEO, KM Global TechManage Services, Bangalore.
Mob. No. : 09980143596.



## ದೈವಿಕ ತರಂಗವನ್ನೊಳಗೊಂಡ 'ಯೋಗ'ವನ್ನು ಅನುಭವಿಸಿ

ಯೋಗವೆಂದರೆ ಅಂತರಂಗ ಮತ್ತು ಬಹಿರಂಗದಲ್ಲಿನ ದೈವಿಕ ಶಕ್ತಿಯ ಹರಿವು. ಏನೂ ಇಲ್ಲದಿರುವ ಶೂನ್ಯ ಸ್ಥಿತಿಯ ಮತ್ತು ಈ ಶೂನ್ಯ ಸ್ಥಿತಿಯೊಳಗಿನ ದೈವಿಕ ಕಂಪನದೊಳಗೆ ಸೇರಿ ಹೋಗುವ ಪ್ರಕ್ರಿಯೆಯೇ ಯೋಗ. ಯೋಗವನ್ನು ನಿರಂತರವಾಗಿ ಅಭ್ಯಾಸ ಮಾಡುವ ವ್ಯಕ್ತಿಯನ್ನ 'ಯೋಗಿ' ಎಂದು ಕರೆಯಲಾಗುತ್ತದೆ. ನಮ್ಮೊಳಗೆ ಅಂತರ್ಗತವಾಗಿರುವ ಸೃಷ್ಠಿ, ಸ್ಥಿಥಿ, ಲಯಕರ್ತನನ್ನು ಅರಿತುಕೊಳ್ಳುತ್ತ ಅಂತರಂಗದೊಳಗಿನ ಬ್ರಹ್ಮಾಂಡದಲ್ಲಿ ವಿಹರಿಸುವುದೇ ಯೋಗ. ಯೋಗೀಯ ಜೀವನದಿಂದ ಸಕ್ರೀಯವಾಗುವ ಅನಂತ ಶಕ್ತಿಯಿಂದಾಗಿ, ಯೋಗಿಯ ಶಬ್ದ ಭಂಡಾರದಲ್ಲಿ 'ಅಸಾಧ್ಯ'ವೆನ್ನುವ ಶಬ್ದವೇ ಇಲ್ಲವಾಗುತ್ತದೆ.

ಯೋಗಾಸನ ಎನ್ನುವುದು ಯೋಗದ ಒಂದು ಭಾಗ ಮಾತ್ರ. ಇಂದಿನ ದಿನಮಾನದಲ್ಲಿ ಯೋಗ ಮತ್ತು ಯೋಗಾಭ್ಯಾಸ ಅನೇಕ ವಿಧದ ಕವಲುಗಳಾಗಿ ವಿಸ್ತರಿಸಲ್ಪಟ್ಟಿದೆ. ಕೇವಲ ಯೋಗಾಸನ ಮತ್ತು ಪ್ರಾಣಾಯಾಮಗಳನ್ನು ಮಾತ್ರ ಅಭ್ಯಾಸ ಮಾಡುವ ವ್ಯಕ್ತಿಯು ಯೋಗಿ ಎನಿಸಿಕೊಳ್ಳಲಾರ, ಏಕೆಂದರೆ ಇವು ಅಷ್ಟಾಂಗ ಮಾರ್ಗ ಯೋಗದ ಎರಡು ವಿಭಾಗಗಳಷ್ಟೆ. 'ಯೋಗಿ'ಯಾಗಬೇಕೆಂದರೆ ಶ್ರೀ ಪತಂಜಲಿ ಮಹರ್ಷಿಗಳು ಪ್ರಚುರಪಡಿಸಿದ ಅಷ್ಟಾಂಗ ಮಾರ್ಗದ ಎಂಟು ಹಂತಗಳನ್ನು ನಿರಂತರವಾಗಿ ಅಭ್ಯಾಸ ಮಾಡುವುದರೊಂದಿಗೆ ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಎಂಟು ಯೋಗ ಸೂತ್ರಗಳೆಂದರೆ –

1. **ಯಮ : ಸಾರ್ವತ್ರಿಕ ನೈತಿಕತೆ**
   **ಅಹಿಂಸಾ** – ಎಲ್ಲ ಜೀವ ಜಂತುಗಳೆಡೆಗೆ ಸಹಾನೂಭೂತಿಯನ್ನು ಹೊಂದಿರುವುದು.
   **ಸತ್ಯ** – ಸದಾ ಕಾಲ ಸತ್ಯವನ್ನೆ ಚಿಂತಿಸುವ ಮತ್ತು ನುಡಿಯುವ ಬದ್ಧತೆ.
   **ಆಸ್ಥೇಯ** – ಕಳ್ಳತನ ಮಾಡದಿರುವುದು.
   **ಬ್ರಹ್ಮಚರ್ಯ** – ಇಂದ್ರಿಯಗಳ ಮೇಲೆ ನಿಯಂತ್ರಣ.
   **ಅಪರಿಗ್ರಹ** – ಅತ್ಯಧಿಕ ಸಂಪತ್ತು ಹೊಂದುವ ಗಳಿಕೆಯ ಆಸೆಯನ್ನು ನಿಷ್ಕ್ರೀಯಗೊಳಿಸುವುದು.
2. **ನಿಯಮ : ವೈಯಕ್ತಿಕ ಆಚರಣೆಗಳು.**
   ಶೌಚ – ಶುದ್ಧತೆ
   ಸಂತೋಷ – ಶಾಂತಿ, ತೃಪ್ತಿಯನ್ನು ಹೊಂದುವುದು.
   ತಪಸ್ಸು – ಶಕ್ತಿಯ ಶಿಸ್ತುಬದ್ಧ ಉಪಯೋಗ.
   ಸ್ವಾಧ್ಯಾಯ – ಸ್ವಯಂ ಅಧ್ಯಯನ
   ಈಶ್ವರ ಪ್ರಣಿಧಾನ– ಆಧ್ಯಾತ್ಮಿಕತೆಯನ್ನು ಸಂಭ್ರಮಿಸುವುದು.
3. **ಆಸನಗಳು :** ದೈಹಿಕ ಭಂಗಿಗಳು.
4. **ಪ್ರಾಣಾಯಾಮ :** ಉಸಿರಾಟದ ವ್ಯಾಯಾಮ ಹಾಗೂ ಪ್ರಾಣ (ಉಸಿರಿನ) ನಿಯಂತ್ರಣ.
5. **ಪ್ರತ್ಯಾಹಾರ :** ಇಂದ್ರಿಯಗಳ ಮೇಲೆ ಹಿಡಿತ ಸಾಧಿಸುವುದು.
6. **ಧಾರಣ :** ಏಕಾಗ್ರತೆ ಮತ್ತು ಅಂತರ್ ಜ್ಞಾನದ ಅರಿವನ್ನು ಜಾಗೃತಗೊಳಿಸುವುದು.
7. **ಧ್ಯಾನ :** ಭಕ್ತಿ, ದೈವಿಕತೆಯ ಕುರಿತು ಧ್ಯಾನಿಸುವುದು.
8. **ಸಮಾಧಿ :** ದೈವಿಕತೆಯೊಂದಿಗೆ ಸಂಯೋಜಿಸಲ್ಪಡುವುದು.

ಯಾವ ವ್ಯಕ್ತಿಯು ಈ ಅಷ್ಟಾಂಗ ಮಾರ್ಗಗಳನ್ನು ಅಭ್ಯಾಸ ಮಾಡುತ್ತಾನೋ ಅವನನ್ನು 'ಯೋಗಿ' ಎನ್ನಬಹುದು, ಎಲ್ಲಾ ಯೋಗಗಳ ನಡುವೆ ಇದು 'ರಾಜಯೋಗ'. ಯೋಗದ ಈ ಪ್ರಕ್ರಿಯೆಯಲ್ಲಿ ವ್ಯಕ್ತಿಯು ಕೇವಲ ತನ್ನ ಆಶಯ ಮಾತ್ರದಿಂದಲೇ ವಿಶ್ವದಲ್ಲಿನ ಎಲ್ಲವನ್ನು ತನ್ನತ್ತ ಆಕರ್ಷಿಸುವ ಆಯಸ್ಕಾಂತಿಯ ಶಕ್ತಿಯನ್ನು ಹೊಂದುತ್ತಾನೆ. ಆಕರ್ಷಣೆಯ ಸಿದ್ದಾಂತ (The Law of Attraction) ಅವನಲ್ಲಿ ಜಾಗೃತವಾಗುತ್ತದೆ.

ನಮ್ಮ "ಜೀವನ ಸಬಲತೆ ಸಾಧನಾ ಕಾರ್ಯಕ್ರಮ" (Life Empowerment Achieving Program - LEAP) ದಲ್ಲಿ ರಾಜ ಯೋಗ, ಜಪ ಯೋಗ, ಕರ್ಮ ಯೋಗ & ಧ್ಯಾನ ಯೋಗವನ್ನು ಸಂಯೋಜಿಸಿ ಯೋಗ ತರಬೇತಿಯನ್ನು ನೀಡಲಾಗುತ್ತದೆ. ಇದರಿಂದಾಗಿ ನಮ್ಮ ದೇಹ, ಬುದ್ದಿ ಮತ್ತು ಮನಸ್ಸಿನ ಮೇಲೆ ಹಿಡಿತ ಸಾಧಿಸುವ ಮೂಲಕ ವಿಶ್ವ ಚೈತನ್ಯದೊಂದಿಗೆ ಒಂದಾಗುವುದರೊಂದಿಗೆ ಸಬಲತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಆರೋಗ್ಯವಂತ ದೇಹ ಮತ್ತು ಸ್ವಯಂ ನಿಯಂತ್ರಿತ ಬುದ್ದಿಯೆನ್ನುವ ಶಕ್ತಿಯುತ ಸಾಧನವನ್ನು ಹೊಂದಿರುವವನೆದುರು ಈ ವಿಶ್ವದಲ್ಲಿ ಅಸಾಧ್ಯವೆನ್ನುವುದೇ ಇಲ್ಲ.

ಧನಾತ್ಮಕ ಕಂಪನಗಳನ್ನುಂಟು ಮಾಡುವ ಜಪದೊಂದಿಗೆ, ಯೋಗೀಯ ತರಂಗಗಳನ್ನೊಳಗೊಂಡ ಪ್ರಾಣಾಯಾಮ ಮತ್ತು ಆಸನಗಳನ್ನು ಮಾಡುವ ಮೂಲಕ ಧ್ಯಾನ ಯೋಗವನ್ನು ಅಭ್ಯಾಸ ಮಾಡುವುದರಿಂದ ನಮ್ಮೊಳಗಿನ ಪ್ರತಿಯೊಂದು ಜೀವಕೋಶದಲ್ಲಿ ಕೂಡ ಶಕ್ತಿ ಸಂಚಾರವಾಗಿ ಅವು ಕ್ರಿಯಾಶೀಲವಾಗುತ್ತವೆ. ಇವುಗಳೊಂದಿಗೆ ಶುದ್ಧ ಮನಸ್ಸಿನ ಆಲೋಚನೆಗಳಿಂದಾಗಿ ದೈವಿಕ ಶಕ್ತಿಯೊಂದಿಗೆ ಸಂಯೋಜಿಸಲ್ಪಟ್ಟಾಗ, ಪ್ರತಿಯೊಬ್ಬರಲ್ಲಿ ಅಂತರ್ಗತವಾಗಿರುವ ಇದುವರೆಗೆ ಪ್ರಕಟಗೊಳ್ಳದ ಅಂತರ್ ಚೈತನ್ಯ ಜಾಗೃತವಾಗಿ ಅಂತರ್ಶಕ್ತಿಯು ವೃದ್ಧಿಯಾಗುತ್ತದೆ. ಯೋಗ ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು, ಅಂದಾಗ ಮಾತ್ರ ಆರೋಗ್ಯ, ಸಂಪತ್ತು, ಗೆಲುವು ಮತ್ತು ಹೇರಳವಾದ ಸಂತೋಷದ ದೈವಿಕ ಭರವಸೆ ಸಾಧ್ಯ.

ನಾವು ಇನ್ನಷ್ಟು ಒಳಗಿಳಿದು ನಮ್ಮ ಇತಿಹಾಸದ ಪುಸ್ತಕಗಳನ್ನು ಗಮನಿಸಿದಾಗ, ಯೋಗವೆನ್ನುವುದು ಸುಮಾರು ಐದು ಸಾವಿರ ವರ್ಷಗಳಿಂದ ಇರುವುದಾಗಿ ಹೇಳಲ್ಪಡುತ್ತದೆ. ಆದರೆ, ವೈಯಕ್ತಿಕವಾಗಿ ನನಗನಿಸುವುದೇನೆಂದರೆ, ಯೋಗ ಇದು ಮೊದಲ ಮನುಷ್ಯನ ಹುಟ್ಟಿನೊಂದಿಗಿನ ಆರಂಭದ ಕಾಲದಿಂದಲೂ ಇದೆ. ತುಂಬಾ ಜನ ಸಾಮಾನ್ಯವಾಗಿ ಯೋಗವೆಂದರೆ, ಇತರ ಅನೇಕ ದೈಹಿಕ ಚಟುವಟಿಕೆಗಳಂತೆ ನಮ್ಮ ದೈಹಿಕ ಶಕ್ತಿಯನ್ನು ಹೆಚ್ಚಿಸುವ ಇನ್ನೊಂದು ಸ್ವರೂಪದ ವ್ಯಾಯಾಮ ಎಂದು ಭಾವಿಸುತ್ತಾರೆ.

ಕೆಲವರು ಯೋಗವನ್ನು ಒಂದು 'ಕ್ರೇಜ್' ಆಗಿ ಕೂಡ ಪರಿಗಣಿಸುತ್ತಾರೆ. ಆದರೆ ಸತ್ಯವೇನೆಂದರೆ, ಯೋಗ ಎನ್ನುವುದು ಬೌದ್ಧಿಕ, ದೈಹಿಕ ಹಾಗೂ ಆಧ್ಯಾತ್ಮಿಕತೆಯನ್ನು ಬೆಸೆಯುವ ಅಂಶ. ಯಾವಾಗ ಈ ಮೂರು ಅಂಶಗಳು ಪರಸ್ಪರ ಸಂಯೋಜಿಸಲ್ಪಡುತ್ತವೋ ಆಗ ನಾವು ಬೇರೊಂದು ಲೋಕದಲ್ಲಿ ಇರುವಂತಹ ಪಾರಮಾರ್ಥಿಕ ಅನುಭವವನ್ನು ಪಡೆಯಬಹುದು. ಈ ಭಾವನೆಯನ್ನು ಬರಹ ರೂಪದಲ್ಲಿ ವ್ಯಕ್ತಪಡಿಸಲಾಗದು, ಇದನ್ನ ನಂಬಬೇಕೆಂದರೆ ಸ್ವಯಂ ಅನುಭವವನ್ನು ಪಡೆಯಬೇಕು. ಒಮ್ಮೆ ನೀವು ಈ ಮಾಂತ್ರಿಕ ಅನುಭವವನ್ನು ಸಾಧಿಸಲು ಸಾಧ್ಯವಾದಲ್ಲಿ, ನಿಮ್ಮ ಬುದ್ಧಿ, ದೇಹ ಮತ್ತು ಆತ್ಮ ಇವು ವಿಶ್ವಚೈತನ್ಯದೊಂದಿಗೆ ಒಂದಾಗಿರುವುದನ್ನು ಭಾವಿಸಲು ಸಾಧ್ಯವಾಗುತ್ತದೆ.

ಆಧ್ಯಾತ್ಮಿಕ ದೃಷ್ಟಿಕೋನವನ್ನು ಕೇಂದ್ರೀಕರಿಸುವುದಾದಲ್ಲಿ, ಒಂದು ಆಸನದಿಂದ ಇನ್ನೊಂದು ಆಸನದೆಡೆಗೆ ನೀವು ಬದಲಾವಣೆ ಮಾಡುವಾಗ ನಿಮ್ಮ ಸಂಪೂರ್ಣ

ಗಮನವನ್ನು ಕೇಂದ್ರೀಕರಿಸಬೇಕಾದ ಧ್ಯಾನದ ಒಂದು ಭಾಗವಾಗಿ ಯೋಗವನ್ನು ನೋಡಬಹುದು. ನೀವು ನಿಮ್ಮ ದೇಹದ ಭಂಗಿಗಳ ಚಲನೆಯನ್ನು ಹಾಗೂ ನಿಮ್ಮ ಮನಸ್ಸಿಗೆ ಪ್ರತಿಕ್ರಿಯಿಸುವ ವಿಧಾನವನ್ನು ತಿಳಿದುಕೊಂಡಾಗ, ಜೊತೆ ಜೊತೆಯಲ್ಲಿಯೇ ನಿಮ್ಮ ಜೀವನದ ವಿವಿಧ ಅಂಶಗಳಲ್ಲಿ ಕೂಡ ಬದಲಾವಣೆ ಉಂಟಾಗುತ್ತದೆ. ಅಂದರೆ, ಕೇವಲ ನೀವು ದೈಹಿಕವಾಗಿ ಬಲಿಷ್ಠರಾಗುವದಲ್ಲದೆ, ಮಾನಸಿಕವಾಗಿ ಕೂಡ ನಿಮ್ಮ ಸಾಮರ್ಥ್ಯ ವೃದ್ಧಿಸುತ್ತದೆ. ಇದರಿಂದಾಗಿ, ನೀವು ಜೀವನವನ್ನು ನೋಡುವ ದೃಷ್ಟಿಕೋನ ಬದಲಾಗುವದಲ್ಲದೆ, ಜೀವನಶೈಲಿಯಲ್ಲಿ ಸರಿಯಾದ ಬದಲಾವಣೆಯನ್ನು ತರಲು ಕೂಡ ಸಾಧ್ಯವಾಗುತ್ತದೆ.

ವಿವಿಧ ಸಂಶೋಧನೆ ಮತ್ತು ಅಧ್ಯಯನಗಳು, ಯೋಗಾಭ್ಯಾಸವನ್ನು ಮಾಡುವುದರಿಂದ ಅನೇಕ ಆರೋಗ್ಯ ಸಂಬಂಧಿತ ಪ್ರಯೋಜನಗಳು ಆಗುತ್ತವೆ ಎನ್ನುವುದನ್ನು ವೈಜ್ಞಾನಿಕವಾಗಿ ತೋರಿಸಿಕೊಟ್ಟಿವೆ. ಅವುಗಳೆಂದರೆ –

- ಹೃದಯಾಘಾತದ ಅಪಾಯವನ್ನು ಕಡಿಮೆ ಮಾಡುತ್ತದೆ.
- ಜ್ಞಾಪಕ ಶಕ್ತಿಯನ್ನು ಹಾಗೂ ಏಕಾಗ್ರತೆಯನ್ನು ಹೆಚ್ಚಿಸುತ್ತದೆ.
- ಹದಿಹರೆಯದ ಸಮಯದಲ್ಲಿ ಉಂಟಾಗುವ ಮಾನಸಿಕ ಆರೋಗ್ಯದ ಅಸಮತೋಲನವನ್ನು ತಡೆಯುತ್ತದೆ.
- ಆತಂಕ ಮತ್ತು ಖಿನ್ನತೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ.
- ಉತ್ತಮ ನಿದ್ದೆಯನ್ನು ಹೊಂದಲು ಸಹಾಯ ಮಾಡುತ್ತದೆ.
- ನಿಶ್ಯಕ್ತಿ ಮತ್ತು ಆಯಾಸವನ್ನು ತಡೆಯುತ್ತದೆ.

ಪ್ರತಿ ದಿನ ಯೋಗಾಭ್ಯಾಸ ಮಾಡುವುದರ ಬಹು ಮುಖ್ಯ ಪ್ರಯೋಜನ ವೆಂದರೆ, ಇದು ನಿಮ್ಮ ಹೃದಯದ ಆರೋಗ್ಯವನ್ನ ಹೆಚ್ಚಿಸುತ್ತದೆ. ರಕ್ತ ನಾಳದ (ಕಾರ್ಡಿಯೋವೆಸ್ಕುಲರ್) ಅನಾರೋಗ್ಯ ಅಥವಾ ಹೃದಯ ಸಂಬಂಧಿತ ರೋಗಗಳು ಇಂದಿನ ದಿನಗಳಲ್ಲಿ ಸಾಮಾನ್ಯವಾಗಿವೆ. ಕೇವಲ ವಯಸ್ಸಾದವರು ಮಾತ್ರ ಹೃದಯ ಸಂಬಂಧಿ ರೋಗದಿಂದ ಬಳಲುತ್ತಿರುವುದಷ್ಟೆ ಅಲ್ಲ, ಇಂದಿನ ಯುವಜನರು ಕೂಡ ಹೃದಯದ ರೋಗಗಳಿಗೆ ತುತ್ತಾಗುತ್ತಿದ್ದಾರೆ.

ನಾವು ಬದುಕುತ್ತಿರುವ ಒತ್ತಡದ ಜಗತ್ತಿನಲ್ಲಿ ಹೃದಯದ ಸಮಸ್ಯೆಗಳು ಅತ್ಯಂತ ವೇಗವಾಗಿ ಬೆಳೆಯುತ್ತಿವೆ. ನಮ್ಮ ದೇಹದಲ್ಲಿ, ಅವಿಶ್ರಾಂತವಾಗಿ ರಕ್ತವನ್ನು ದೇಹದ ಎಲ್ಲ ಭಾಗಗಳಿಗೆ ಪಂಪ್ ಮಾಡುತ್ತಿರುವ ಪ್ರಮುಖ ಅಂಗವೆಂದರೆ ಹೃದಯ. ಪ್ರತಿ ದಿನ ಯೋಗಾಭ್ಯಾಸ ಮಾಡುವುದರಿಂದ ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವವ ರಕ್ತದೊತ್ತಡ ಕಡಿಮೆಯಾಗುತ್ತದೆ. ಯೋಗವು ಹೃದಯದ ಮೂಲ ಸೂಕ್ಷ್ಮತೆಯನ್ನು ಮರುಸ್ಥಾಪಿಸುತ್ತದೆ. ಇದರಿಂದಾಗಿ ದೇಹದ ಅಸಮತೋಲಿತ ರಕ್ತದೊತ್ತಡವನ್ನು ಗ್ರಹಿಸಿ ಅದನ್ನು ಸಮತೋಲಿತಗೊಳಿಸಲು ದೇಹಕ್ಕೆ ಸಾಧ್ಯವಾಗುತ್ತದೆ.

ಇನ್ನೊಂದು ಸಂಶೋಧನೆಯ ಪ್ರಕಾರ, ಪ್ರತಿ ದಿನ ಯೋಗಾಭ್ಯಾಸ ಮಾಡುವುದರಿಂದ, ಆರೋಗ್ಯಯುತ ವ್ಯಕ್ತಿಯ ಹಾಗೂ ರಕ್ತ ನಾಳದ ಸಮಸ್ಯೆಯನ್ನು ಹೊಂದಿರುವ ವ್ಯಕ್ತಿಗಳ ರಕ್ತ ನಾಳದ ಕೊಬ್ಬಿನ ಪ್ರಮಾಣ ಸಮತೋಲಿತವಾಗುತ್ತದೆ. ಇಷ್ಟೆ ಅಲ್ಲದೆ ಯೋಗವು ಮಧುಮೇಹ ರೋಗಿಗಳ ರಕ್ತದಲ್ಲಿನ ಹೆಚ್ಚುವರಿ ಸಕ್ಕರೆ ಪ್ರಮಾಣವನ್ನು ಇನ್ಸುಲಿನ ಅವಲಂಬನೆಯಿಲ್ಲದೆ ಕಡಿತಗೊಳಿಸುತ್ತದೆ ಮತ್ತು ತೆಗೆದುಕೊಳ್ಳಬೇಕಾದ ಔಷಧದ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ರಕ್ತನಾಳದ ತೊಂದರೆಗಳನ್ನು ಹಾಗೂ ಒತ್ತಡದಿಂದ ಮುಕ್ತಿ ಕೊಡುವ ಕಾರಣದಿಂದ ಯೋಗವನ್ನು ಅನೇಕ ಹೃದಯ ಪುನರ್ವಸತಿ (Cardiac Rehabilitation) ಕಾರ್ಯಕ್ರಮಗಳಲ್ಲಿ ಪರಿಚಯಿಸಲಾಗುತ್ತಿದೆ.

ವರ್ಡ್ ಹೆಲ್ತ್ ಆರ್ಗನೈಸೇಷನ್ ಇದರ ಪ್ರಕಾರ 2020ರ ವೇಳೆಗೆ, ರಕ್ತ ಕೊರತೆಯ ಹೃದಯ ರೋಗಗಳ ನಂತರದಲ್ಲಿ 'ಖಿನ್ನತೆ'ಯು ಜಾಗತಿಕ ಮಟ್ಟದಲ್ಲಿ



ಅನಾರೋಗ್ಯಕ್ಕೆ ಕಾರಣವಾಗುತ್ತದೆ. ದಿನದಿಂದ ದಿನಕ್ಕೆ ಆತಂಕದ ಪ್ರಮಾಣ ಕೂಡ ಈ ಹಿಂದಿಗಿಂತ ಜಾಸ್ತಿಯಾಗುತ್ತಲಿದೆ. ಇವುಗಳಿಗೆ ಔಷಧೀಯ ಚಿಕಿತ್ಸೆಗಳು ಮಾತ್ರ ಸಾಕಾಗುವಂತೆ ಕಂಡುಬರುತ್ತಿಲ್ಲ, ಏಕೆಂದರೆ ಇವುಗಳಿಂದಾಗಿ ರೋಗ ಮರುಕಳಿಸದಿರುವ ಬಗ್ಗೆ ಯಾವುದೇ ಖಾತರಿಯಿಲ್ಲ. ಆದ್ದರಿಂದ ಇವುಗಳ ಮೂಲ ಕಾರಣವನ್ನು ಹುಡುಕಿ ಚಿಕಿತ್ಸೆಗೊಳಪಡಿಸುವ ಅಗತ್ಯವಿದೆ. ನಿಯಮಿತವಾಗಿ ಯೋಗಾಭ್ಯಾಸ ಮಾಡುವದರಿಂದ ಮಾನಸಿಕ ಆರೋಗ್ಯ ಸಮಸ್ಯೆಯನ್ನು ಕಡಿಮೆ ಮಾಡಬಹುದೆನ್ನುವುದಕ್ಕೆ ಹಲವಾರು ಸಾಕ್ಷ್ಯಗಳಿವೆ. ಪ್ರಮುಖವಾಗಿ, ತಮ್ಮ ಮಾನಸಿಕ ಸ್ಥಿತಿಯನ್ನು ಸ್ಥಿರವಾಗಿರಿಸಿಕೊಳ್ಳಲು ಪ್ರತಿ ದಿನ ಯೋಗ ಮಾಡಲು ಆರಂಭಿಸುವಂತೆ ಯುವ ಪೀಳಿಗೆಗೆ ಸೂಚಿಸಬೇಕಿದೆ. ಎಳೆಯ ಮನಸ್ಸನ್ನು ಹೊಂದಿರುವ ಮತ್ತು ಸುಲಭವಾಗಿ ಕೆಟ್ಟದ್ದರೆಡೆಗೆ ಪ್ರಚೋದನೆ ಹೊಂದುತ್ತ ಖಿನ್ನತೆಯೆಡೆಗೆ ಸಾಗಬಹುದಾದ ಇಂದಿನ ಯುವ ಪೀಳಿಗೆ ನಿಯಮಿತವಾಗಿ ಪ್ರತಿದಿನ ಯೋಗ ಮಾಡಬೇಕೆಂದು ನಾನು ಭಾವಿಸುತ್ತೇನೆ.

ಒಟ್ಟಿನಲ್ಲಿ ಒಂದು ತೀರ್ಮಾನಕ್ಕೆ ಬರುವುದಾದರೆ, ಯೋಗ ಇದು ಕೇವಲ ದೈಹಿಕ ಚಟುವಟಿಕೆ ಅಥವಾ ವ್ಯಾಯಾಮವಲ್ಲ, ಇದು ಜೀವನ ವಿಧಾನ. ನಮ್ಮ ಆಂತರಿಕ ಶಕ್ತಿಯನ್ನು ಮತ್ತು ನೈಜತೆಯನ್ನು ಅರಿತುಕೊಳ್ಳಲು ನಮಗೆ ಅಧಿಕಾರ ನೀಡುವ, ಮಾನವ ಸ್ವಭಾವದ ಪ್ರಾಯೋಗಿಕ ವಿಜ್ಞಾನ. "....... ನೀವು ಯೋಗ ವಿಜ್ಞಾನದ ಅಧ್ಯಯನವನ್ನು ತೆಗೆದುಕೊಳ್ಳಿ ಏಕೆಂದರೆ ಇದರಿಂದ ನೀವು ವಸ್ತು ವಿಜ್ಞಾನದ ಯಾವುದೇ ಜ್ಞಾನವನ್ನು ಹೊಂದುತ್ತೀರಿ ಮತ್ತು ಇದರಲ್ಲಿ ಯಾವುದೇ ರಹಸ್ಯಗಳಾಗಲೀ ಅಪಾಯಗಳಾಗಲೀ ಇಲ್ಲ ಎನ್ನುವುದನ್ನು ನೆನಪಿಡಿ" (ಸ್ವಾಮೀ ವಿವೇಕಾನಂದ, 1896).

ಯೋಗ ಎನ್ನುವುದು ನಮ್ಮ ಪೂರ್ವಜರು ನಮಗೆ ನೀಡಿರುವ ಅತ್ಯಂತ ಪ್ರಬಲವಾದ ದೈವಿಕ ಕೊಡುಗೆಯಾಗಿದೆ. ಮನುಷ್ಯನಿಂದ ಅಸಾಧ್ಯವೆಂದು ನಮಗೆ ಅನಿಸುವ ಅನಂತ ಮಾನವ ಸಾಧನೆಗಳ ಸಾಧ್ಯತೆಯೆಡೆಗಿನ ಮಾರ್ಗಸೂಚಿಯೇ ಯೋಗ ಎಂದು ಕೂಡ ಹೇಳಬಹುದು. ಇದುವರೆಗೆ ಸಕ್ರೀಯಗೊಂಡಿರದ ನಿಮ್ಮೊಳಗೆ ಅಡಗಿರುವ ಪ್ರಬಲ ಶಕ್ತಿಯನ್ನು ಯೋಗ ಬಹಿರಂಗಪಡಿಸುತ್ತದೆ. ನಿಮ್ಮನ್ನು ಸಮ್ಮೋಹನಗೊಳಿಸುವ ಹೊಸ ಸಾಧ್ಯತೆಗಳನ್ನು ಯೋಗ ನಿಮ್ಮೆದುರು ತೆರೆದಿಡುತ್ತದೆ.

ಅಲ್ಲದೆ ತತ್ವಶಾಸ್ತ್ರ, ಮನೋವಿಜ್ಞಾನ ಮತ್ತು ವಾಸ್ತವಿಕತೆಯ ನಿರ್ಣಾಯಕ ಮೌಲ್ಯಮಾಪನದ ಎಲ್ಲ ಅಂಶಗಳೊಂದಿಗೆ ಕೂಡ ಯೋಗ ವ್ಯವಹರಿಸುತ್ತದೆ. ನಿಮ್ಮೊಳಗನ್ನು ಕಂಡುಕೊಳ್ಳುವ ಮತ್ತು ಜೀವನದ ಮೂಲ ಉದ್ದೇಶವನ್ನು ಅರಿಯುವ ಸಾಧನ ಮತ್ತು ತಂತ್ರವನ್ನು ಯೋಗ ನಿಮಗೆ ನೀಡುತ್ತದೆ.

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 32

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

## ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಲಿ ಸದಸ್ಯರುಗಳು


ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಮಾನ್ಯ ಅಧ್ಯಕ್ಷರು
ಮೊ : 9972089407


ಶ್ರೀ ಜಗದೀಶ ಕವಟಗಿಮಠ
ಮಾನ್ಯ ಉಪಾಧ್ಯಕ್ಷರು
ಮೊ : 9448084177


ಶ್ರೀ ಗುರುನಾಥ ಜ್ಯಾಂತಿಕರ
ಮಾನ್ಯ ನಿರ್ದೇಶಕರು
ಮೊ : 9448270104


ಶ್ರೀ ಹೆಚ್.ವಿ. ರಾಜೀವ್
ಮಾನ್ಯ ನಿರ್ದೇಶಕರು
ಮೊ : 9538884748


ಶ್ರೀ ವಿಶ್ವನಾಥ ಚ. ಹಿರೇಮಠ
ಮಾನ್ಯ ನಿರ್ದೇಶಕರು
ಮೊ : 9448473025


ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ
ಮಾನ್ಯ ನಿರ್ದೇಶಕರು
ಮೊ : 9448338872


ಶ್ರೀ ರಂಗಪ್ಪಯ್ಯ ದೇಶಪಾಂಡೆ
ಮಾನ್ಯ ನಿರ್ದೇಶಕರು
ಮೊ : 9448380165


ಶ್ರೀ ಮಾರುತಿ ಬಿ. ಕಲಾಲ
ಮಾನ್ಯ ನಿರ್ದೇಶಕರು
ಮೊ : 9448745690


ಶ್ರೀ ಗುರುನಗೌಡ ಪಾಟೀಲ
ಮಾನ್ಯ ನಿರ್ದೇಶಕರು
ಮೊ : 9448117966


ಶ್ರೀ ವಾಯ್. ಟಿ. ಪಾಟೀಲ
ಮಾನ್ಯ ನಿರ್ದೇಶಕರು
ಮೊ : 9449838778


ಶ್ರೀ ಜಿ. ನಂಜನಗೌಡ
ಮಾನ್ಯ ನಿರ್ದೇಶಕರು
ಮೊ : 9731347200


ಶ್ರೀ ಬಿ. ಗಂಗಾಧರಯ್ಯ
ಮಾನ್ಯ ನಿರ್ದೇಶಕರು
ಮೊ : 9448660531


ಶ್ರೀ ಸಿದ್ರಾಮಪ್ಪ ಉಪ್ಪಿನ
ಮಾನ್ಯ ನಿರ್ದೇಶಕರು
ಮೊ : 9448785113


ಶ್ರೀ ಎ.ಆರ್. ಪ್ರಸನ್ನಕುಮಾರ್
ಮಾನ್ಯ ನಿರ್ದೇಶಕರು
ಮೊ : 9482354391


ಶ್ರೀ ಆರ್. ತಿಮ್ಮಯ್ಯಶೆಟ್ಟಿ
ಮಾನ್ಯ ನಿರ್ದೇಶಕರು
ಮೊ : 9448489794


ಶ್ರೀ ಸಂಜೀವ ಮಹಾಜನ
ಮಾನ್ಯ ನಿರ್ದೇಶಕರು
ಮೊ : 9972082380


ಶ್ರೀ ಜಿ. ಶ್ರೀಧರ
ಮಾನ್ಯ ನಿರ್ದೇಶಕರು
ಮೊ : 9845256657


ಶ್ರೀ ಬಿ.ಎಸ್. ಗುಂಡುರಾವ್
ಮಾನ್ಯ ನಿರ್ದೇಶಕರು
ಮೊ : 9448491893


ಶ್ರೀ ಮಂಜುನಾಥ
ಮಾನ್ಯ ನಿರ್ದೇಶಕರು
9448348203


ಶ್ರೀ ಚಂದ್ರಕಾಂತ ಪಡಚಣ್ಣವರ
ಮಾನ್ಯ ನಿರ್ದೇಶಕರು
ಮೊ : 9448823300


ಶ್ರೀಮತಿ ಸರಸ್ವತಿ
ಮಾನ್ಯ ನಿರ್ದೇಶಕರು
ಮೊ : 9449629939


ಶ್ರೀ ಶರಣಗೌಡ ಜಿ.ಪಾಟೀಲ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು
ಮೊ : 8884466703

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010